# ಶ್ರೀಪಾದರಾಜರು ಜೀವನ ಮತ್ತು ಕೃತಿಗಳು

## ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಪರಿಮಿತಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ಎಲ್ಲ ದೇಶ ಮತ್ತು ವಿದೇಶಗಳನ್ನೂ ಒಳಗೊಂಡಿದೆ. ಈ ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ್ಯಪೂರ್ಣವೂ ಆಗಿವೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನದ ಸರ್ವಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನ ಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡ ಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಬೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥಿಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ, ನಾಡಿನ ಕೋಟಿಕೋಟಿ ಶ್ರೀಸಾಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಗಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿತ ಕಾಯಕ ಇದರ ದಾರಿಯಾಗಿದೆ.

ಕನ್ನಡನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು, ಕನ್ನಡ ವಿಶ್ವವಿದ್ಯಾಲಯವನ್ನು ನೋಡಿದಲ್ಲದೆ ಕನ್ನಡನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗದು ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೊಳ್ಳಬೇಕಾದ ಮಹಾಸಂಸ್ಥೆ ಇದು. ಕನ್ನಡಪ್ರಜ್ಞೆ ತನ್ನ ಸತ್ವ ಮತ್ತು ಸ್ವತ್ವದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು; ವಿಶ್ವಪ್ರಜ್ಞೆ ಕನ್ನಡ ದೇಶೀಪ್ರಜ್ಞೆಯೊಳಗೆ ಪ್ರವೇಶೀಸಿ, ಪ್ರವಹಿಸಿ, ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರಗೊಳ್ಳಬೇಕು ಎಂಬುದೇ ಇದರ ಗುರಿ. ಈ ಗುರಿಯ ಮೂಲಕ ಕನ್ನಡ ಕರ್ನಾಟಕತ್ವದ ಉಸಿರಾಗಿ, ವಿಶ್ವಪ್ರಜ್ಞೆಯ ಹಸಿರಾಗಿ, ಕನ್ನಡಮಾನವ ವಿಶ್ವಮಾನವನಾಗಿ ಬೆಳೆಯಲು ಸಾಧನವಾಗಬೇಕು. ಕನ್ನಡಿಗರೆಲ್ಲರ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಟಿ ಪ್ರಕ್ರಿಯೆಯಿಂದ ಬೆಳಕಿನ ಈ ಮಹಾಪಥವನ್ನು ಕ್ರಮಿಸುವುದು ನಮ್ಮ ವಿಶ್ವವಿದ್ಯಾಲಯದ ಮಹತ್ತರ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಶೇಷ ಹೊಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈಗಾಗಲೇ ೭೦೦ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ.

ಕನ್ನಡದ ದಾಸಸಾಹಿತ್ಯ ಒಂದು ನಿರ್ದಿಷ್ಟ ಸ್ಪಷ್ಟ ಆಕಾರವನ್ನು ಪಡೆದುದು ಶ್ರೀಪಾದ ರಾಜರಿಂದ. ಮಠಾಧಿಪತಿಗಳಾಗಿದ್ದ ಶ್ರೀಪಾದರಾಜರು ಪೂಜಾಕಾಲದಲ್ಲಿ ಕನ್ನಡದ ಗೀತಗಳನ್ನು ಹಾಡುವ 'ಸಂಕೀರ್ತನ' ಸಂಪ್ರದಾಯವನ್ನು ಮೊದಲಿಗೆ ಆರಂಭಿಸಿದವರು.

ದೇವರ ಪೂಜೆಗೆ ಸಂಸ್ಕೃತ ಮಂತ್ರಗಳು ಬೇಕೇ ಬೇಕು ಎಂದಿದ್ದ ಕಾಲದಲ್ಲಿ ಕನ್ನಡ ಗೀತಗಳನ್ನು ಹಾಡುವ ಸಂಪ್ರದಾಯಕ್ಕೆ ಯತಿಯೊಬ್ಬರು ಚಾಲನೆ ನೀಡಿದರೆನ್ನುವುದು ಮಹತ್ವದ ಸಂಗತಿ. ತಮಿಳುನಾಡಿನ ಶ್ರೀರಂಗದಲ್ಲಿ ಕೆಲಕಾಲವಿದ್ದ ಶ್ರೀಪಾದರಾಜರು ತಮಿಳು ದಿವ್ಯಪ್ರಬಂಧಗಳನ್ನು ಕೇಳಿಸಿ ಕೊಂಡವರು. ಭಾಗವತದ ಘಟನಾವಳಿಗಳನ್ನು ಕೀರ್ತನೆಯ ಭಿತ್ತಿಯಲ್ಲಿ ಬರೆಯುವ ತಂತ್ರವನ್ನು ಇವರೇ ಮೊದಲು ಆರಂಭಿಸಿದರು ಎನ್ನಲಾಗುತ್ತಿದೆ. ಶ್ರೀಪಾದರಾಜರು ಹರಿದಾಸ ಪದ್ಧತಿಯನ್ನು ಕನ್ನಡದಲ್ಲಿ ಊರಿಸುವ ಸಂದರ್ಭದಲ್ಲಿ ಜಾನಪದ ಗೇಯಪ್ರಕಾರಗಳಲ್ಲಿ ಹಲವನ್ನು ಬಳಸಿಕೊಂಡುದು ಕಂಡುಬರುತ್ತದೆ. ಉದಯರಾಗ, ಲಾಲಿಪದ, ಜೋಗುಳ, ಶೋಭನ, ಸುವ್ವಿ, ಧವಳ ಮುಂತಾದ ಗೇಯ ಪ್ರಕಾರಗಳಲ್ಲಿ ತಮ್ಮ ರಚನೆಗಳನ್ನು ಹೆಣೆದಿರುವುದನ್ನು ಗಮನಿಸಬೇಕು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಶ್ರೀಪಾದರಾಜರು ದೇಶಿಯನ್ನು ಮಾರ್ಗವಾಗಿ ವಿಸ್ತರಿಸಿದರು. ಹೀಗೆ ಸಾಹಿತ್ಯ-ಸಂಗೀತಗಳೆರಡರಲ್ಲೂ ಹೊಸ ಪ್ರಯೋಗಕ್ಕೆ ನಾಂದಿ ಹಾಡಿದವರು, ಶ್ರೀಪಾದರಾಜರ ಬದುಕು-ಅನನ್ಯ ಸಿದ್ಧಿಸಾಧನೆಗಳನ್ನು ಡಾ.ಟಿ.ಎನ್. ನಾಗರತ್ನರು ತಮ್ಮ ನಿಡುಗಾಲದ ದಾಸಸಾಹಿತ್ಯ ಅಧ್ಯಯನದ ಬೆಳಕಿನಲ್ಲಿ ರಚಿಸಿಕೊಟ್ಟಿದ್ದಾರೆ. ಅವರಿಗೆ ಕನ್ನಡ ವಿಶ್ವವಿದ್ಯಾಲಯದ ಕೃತಜ್ಞತೆಗಳು.

**ಡಾ. ಎಚ್.ಜೆ. ಲಕ್ಕಪ್ಪಗೌಡ**

ಕುಲಪತಿಗಳು

# ಮೊದಲ ಮಾತು

ವಿದ್ಯೆಯ 'ಕೆನೆಯ ಕೆನೆ'ಯಾಗಿರುವ ವಿಶ್ವವಿದ್ಯಾಲಯಗಳು ಜ್ಞಾನದ ಬೋಧನೆ ಸಂಶೋಧನೆ ಹಾಗೂ ಪ್ರಸಾರಕಾರ್ಯಗಳಿಗೆ ಒತ್ತುಕೊಟ್ಟು ಕಾರ್ಯನಿರ್ವಹಿಸುತ್ತಿರುವುದು ಸಂತಸದ ಸಂಗತಿ. ಈಗ ಯಾವುದೇ ಒಂದು ಉನ್ನತಮಟ್ಟದ ಅಧ್ಯಯನ ಕೇವಲ ಆಯಾ ಶಾಸ್ತ್ರದ ಮಿತಿಯಲ್ಲೇ, ಎಲ್ಲೆ ಗಡಿ ಕಟ್ಟುಪಾಡುಗಳಲ್ಲೇ ನಡೆಯುತ್ತಿಲ್ಲ; ನಡೆಯಬೇಕಾಗಿಯೂ ಇಲ್ಲ. ವಿಭಿನ್ನ ಶಾಸ್ತ್ರಗಳ ಹಿನ್ನೆಲೆಯಲ್ಲಿ ಅವುಗಳ ಪರಸ್ಪರ ಸಂಬಂಧ ಪ್ರಭಾವ, ಪ್ರೇರಣೆ, ಪರಿಣಾಮಗಳನ್ನು ಗಮನದಲ್ಲಿರಿಸಿಕೊಂಡು ಒಂದು ಒಟ್ಟುನೋಟ (comprehensive view) ಹಾಗೂ ವಿವಿಧ ಒಳನೋಟಗಳ ಗ್ರಹಿಕೆಯ ಪ್ರಯತ್ನದಲ್ಲಿ ಅಧ್ಯನ ಸಾಗುತ್ತಿದೆ. ಈ ನಿಟ್ಟಿನಲ್ಲಿ ನಡೆದ ಅಧ್ಯಯನ ಮತ್ತು ಸಂಶೋಧನೆಗಳ ಫಲ ವಿಚಾರಸಂಕಿರಣಗಳ, ಮುಕ್ತ ಚರ್ಚೆಗಳ, ವಿವಿಧ ಕಮ್ಮಟ ಶಿಬಿರ ಕಾರ್ಯಾಗಾರಗಳ ಮೂಲಕ ಉನ್ನತವ್ಯಾಸಂಗ ಮಾಡುವವರನ್ನು ತಲುಪಿದರೆ ಜನಸಾಮಾನ್ಯರಿಗೆ ಸರಳ ಸುಲಭ ಪುಸ್ತಕಗಳ ರೂಪದಲ್ಲಿ, ವಿದ್ವಾಂಸರ ತಜ್ಞರ ಉಪನ್ಯಾಸಗಳ ಮೂಲಕ ಪರಿಚಯವಾಗುತ್ತಿದೆ. ಈ ಎರಡೂ ಕೆಲಸಗಳನ್ನು ಶ್ರದ್ಧೆಯಿಂದ ಸಮರ್ಪಕವಾಗಿ ಏಕಕಾಲದಲ್ಲಿ ನಿರ್ವಹಿಸಲು ಶ್ರಮಿಸುತ್ತಿರುವ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಸಮಸ್ತ ಕನ್ನಡಿಗರ ಕೃತಜ್ಞತೆಗೆ, ಅಭಿನಂದನೆಗೆ ಪಾತ್ರವಾಗಿದೆ.

ಇದೀಗ ಪುರಂದರ ಅಧ್ಯಯನ ಪೀಠದಿಂದ ಕನ್ನಡ ಹರಿದಾಸ ಸಾಹಿತ್ಯದ ಅಧ್ಯಯನಗಳಿಗೆ ಸಂಬಂಧಿಸಿದಂತೆ ಪ್ರಕಟಣೆಗಳು ಹೊರಬರುತ್ತಿರುವುದು ಸಾಹಿತ್ಯಾಸಕ್ತರಿಗೆ ಹೆಮ್ಮೆಯ ವಿಚಾರವಾಗಿದೆ. ಪ್ರಸ್ತುತ ಮಾಲೆಯಲ್ಲಿ ಹರಿದಾಸ ಸಾಹಿತ್ಯದ ಆದ್ಯಪ್ರವರ್ತಕರಾದ ಶ್ರೀಪಾದರಾಜರ ಜೀವನ ಮತ್ತು ಕೃತಿಗಳಿಗೆ ಸಂಬಂಧಿಸಿದಂತೆ ಒಂಧು ಚಿಕ್ಕ ಪರಿಚಯಾತ್ಮಕ ಪುಸ್ತಕವೊಂದನ್ನು ಬರೆದುಕೊಡುವ ಕೆಲಸವನ್ನು ಅಧ್ಯಯನ ಪೀಠದ ಸಂಚಾಲಕರಾಗಿರುವ ಪ್ರೊ. ಎ.ವಿ. ನಾವಡ ಅವರು ನನಗೆ ವಹಿಸಿದರು. ಅವರ ಅಪೇಕ್ಷೆಯ ಮೇರೆಗೆ ಈ ಪುಟ್ಟ ಪುಸ್ತಕವನ್ನು ಸಿದ್ಧಪಡಿಸಿಕೊಟ್ಟಿದ್ದೇವೆ. ಕನ್ನಡದ ರುದ್ದರ (=ರುದ್ರ) ತೇರನ್ನು ಎಳೆಯಲು ಕೈಗೂಡಿಸುವ ಈ ಕಾರ್ಯಗೌರವವನ್ನು ನನಗೆ ಒಪ್ಪಿಸಿದ್ದಕ್ಕಾಗಿ ಅವರಿಗೂ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

**ಡಾ. ಟಿ.ಎನ್. ನಾಗರತ್ನ**

# ೧. ಹಿನ್ನೆಲೆ

*ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ*
*ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇ ನಮಃ*

ಪ್ರಕೃತಿಯ ವೈಚಿತ್ರ್ಯಗಳನ್ನು ವೈಪರೀತ್ಯಗಳನ್ನು ಕಂಡ ಮಾನವ ಭಯಭೀತನಾದ. ರಣಗುಡುವ ಬಿಸಿಲು, ಮಿಂಚು ಗುಡುಗು ಸಿಡಿಲುಗಳಿಂದ ಕೂಡಿದ ಕಿವಿಗಡಚಿಕ್ಕುವ ಧಾರಾಕಾರಮಳೆ, ಬಿರುಗಾಳಿ, ಪ್ರವಾಹ, ಕಗ್ಗತ್ತಲೆಯ ಭೀಕರತೆ ಎಲ್ಲವೂ ಅವನಿಗೆ ವಿಶಿಷ್ಟಾನುಭವಗಳನ್ನು ತಂದುಕೊಟ್ಟವು. ಅವುಗಳಿಂದ ರಕ್ಷಣೆ ಪಡೆಯುವತ್ತ ಧಾವಿಸತೊಡಗಿದ. ತನ್ನ ಬದುಕಿಗೆ ಅವುಗಳ ಆವಶ್ಯಕತೆಯನ್ನು ಮನಗಂಡಂತೆ ಅವುಗಳನ್ನು ಆಶ್ರಯಿಸಿತೊಡಗಿದ, ಪ್ರೀತಿಸತೊಡಗಿದ, ಆರಾಧಿಸತೊಡಗಿದ. ಅಂದಿನಿಂದ ಮನುಷ್ಯನ ಮನಸ್ಸು ಆಶ್ರಯ ಹಾಗೂ ಭಯಮೂಲವಾದ ಭಕ್ತಿಗೆ ನೆಲೆಯಾಯಿತು. ಪ್ರಕೃತಿ ಪೂಜೆಯೊಂದಿಗೆ ಮೂರ್ತಿಪೂಜೆಯೂ ಸೇರಿಕೊಂಡಿತಲ್ಲದೆ ಶಿವ-ವಿಷ್ಣು-ಬ್ರಹ್ಮ ಇತ್ಯಾದಿ ದೇವತೆಗಳ ಕಲ್ಪನೆಯೂ ಸಾಧ್ಯವಾಯಿತು. ದೈವತ್ವದ ಕಲ್ಪನೆಯ ಜೊತೆಜೊತೆಗೇ ಅದರ ತಾತ್ವಿಕ ಜಿಜ್ಞಾಸೆಯೂ ನಡೆಯತೊಡಗಿತು. ಹರಪ್ಪ ಮೊಹೆಂಜೊದಾರೊ ಸಂಶೋಧನೆಗಳ ಪ್ರಕಾರ ಸುಮಾರು ಐದು ಸಾವಿರ ವರ್ಷಗಳ ಇತಿಹಾಸವಿರುವ ಭಕ್ತಿತತ್ವ, ವೇದಗಳಲ್ಲಿ ಜಿಜ್ಞಾಸೆಗೊಳಗಾಗಿದ್ದು ದೇವತೆಗಳ ಉಪಾಸನೆಯ ಮೂಲಕ ಬದುಕನ್ನು ಉತ್ತಮಪಡಿಸಿಕೊಳ್ಳಬೇಕೆನ್ನುವ ವಿಚಾರವನ್ನು ಅಲ್ಲಿ ಹೇಳಲಾಗಿದೆ. 'ಏಕಂ ಸದ್ವಿಪ್ರಾ ಬಹುಧಾ ವದಂತೀ', 'ಮಹಸ್ತೇ ವಿಷ್ಣೋ ಸುಮತಿಂ ಭಜಾಮಹೇ' ಇತ್ಯಾದಿ ಮಾತುಗಳನ್ನು ನಾವು ಅಲ್ಲಿ ಕಾಣುತ್ತೇವೆ.[1]

ಮುಂದೆ ಉಪನಿಷತ್ತಿನ ಕಾಲದಲ್ಲಿ 'ಅಸತೋಮಾ ಸದ್ಗಮಯ, ತಮಸೋಮಾ ಜ್ಯೋತಿರ್ಗಮಯ' ಇತ್ಯಾದಿ ಮಾತುಗಳಲ್ಲಿ ಪ್ರಾರ್ಥನಾ ರೂಪವನ್ನು ತಳೆದ ಭಕ್ತಿ ಇತಿಹಾಸ ಪುರಾಣಗಳಲ್ಲಿ ಜನಜೀವನದೊಡನೆ ದೇವತೆಗಳನ್ನೂ ಬೆರೆಸಿ ಹೇಳಿರುವ ಅನೇಕ ಕತೆಗಳ ರೂಪದಲ್ಲಿ ಮೈತಾಳಿದೆ. ಮಹಾಭಾರತ ರಾಮಾಯಣಗಳಲ್ಲಿ 'ದೇವಾಯತನ' 'ಚೈತ್ಯ' 'ಆಲಯ' ಇತ್ಯಾದಿ ಮಾತುಗಳಿರುವುದೂ ಗಮನಾರ್ಹ. ಮುಂದೆ, ಸೂತ್ರಗಳಲ್ಲಿ ಭಕ್ತಿ ಅವತಾರಗಳ ಕಲ್ಪನೆಯಿಂದ ಮತ್ತಷ್ಟು ರೋಚಕತೆಯನ್ನು ಪಡೆಯಿತು. ಶಿವ ಶಾಕ್ತ ವೈಷ್ಣವ ಆಗಮಗಳು ದೇವೋಪಾಸನೆಯ ವಿಧಿವಿಧಾನಗಳನ್ನು ದಾಖಲಿಸಿವೆ. ಭಗವದ್ಗೀತೆಯಂತೂ ಭಕ್ತಿಯನ್ನು ಒಂದು ಯೋಗವೆಂದು ಕರೆದು ಜೀವಾತ್ಮ ತನ್ನ ಮೋಕ್ಷ ಸಾಧನೆಗೆ ಅನುಸರಿಸಬಹುದಾದ ಜ್ಞಾನ ಕರ್ಮ ಭಕ್ತಿಮಾರ್ಗಗಳಲ್ಲಿ ಅತ್ಯಂತ ಸುಲಭವಾದುದೆಂದು ಭಕ್ತಿಮಾರ್ಗವನ್ನು ಎತ್ತಿಹಿಡಿದಿದೆ.

ಶಾಂಡಿಲ್ಯ - ನಾರದ ಭಕ್ತಿ ಸೂತ್ರಗಳು ಮತ್ತು ಭಾಗವತ ಭಕ್ತಿಯ ತಾತ್ವಿಕಜಿಜ್ಞಾಸೆ ಮಾಡಿವೆ; 'ಸಾಭಕ್ತಿಃಕಸ್ಮೈಚಿತ್ಪರಮ ಪ್ರೇಮರೂಪಾ' (ನಾ.ಭ.ಸೂ) 'ಸಾಭಕ್ತಿಃ ಪರಾನುರಕ್ತಿರೀ ಶ್ವರೀ' (ಶಾಂ. ಭ.ಸೂ) ಭಗವಂತನನ್ನು ಕುರಿತ ನಿಸ್ವಾರ್ಥ ಪ್ರೇಮವೇ ಭಕ್ತಿಯೆಂದು ಅರ್ಥೈಸಿವೆ. ಹೀಗೆ, ಭಕ್ತಿಯ ಹುಟ್ಟು ಬೆಳವಣಿಗೆಗಳು ಸಾಗಿ ಬಂದಂತೆ ಭಗವಂತನ ಸ್ವರೂಪಜಿಜ್ಞಾಸೆಯೂ ನಡೆದಿದೆ. ಅವನಿಗೆ ಮೂರ್ತರೂಪ ಕೊಟ್ಟು ಜ್ಞಾನಬಲ ಐಶ್ವರ್ಯಾದಿ ಗುಣಗಳನ್ನಾರೋಪಿಸಿ ಪೂಜಿಸಿರುವುದು ಸಗುಣ-ಸಾಕಾರಭಕ್ತಿಯೆನ್ನಿಸಿಕೊಂಡರೆ ಭಗವಂತ ರೂಪಗುಣ ರಹಿತನೆಂದೂ ರೂಪಗುಣಾದಿಗಳಿಗೆ ಮೀರಿದವನೆಂದೂ ಭಾವಿಸಿ ಪೂಜಿಸಿರುವುದು ನಿರ್ಗುಣ-ನಿರಾಕಾರ ಭಕ್ತಿಯೆನ್ನಿಸಿಕೊಂಡಿದೆ. ಕ್ರಿ.ಶ.ಐದನೇ ಶತಮಾನಿದಿಂದೀಚೆಗೆ ರಚಿತವಾದ ಶಿವಾಗಮಗಳು ಶೈವಧರ್ಮಕ್ಕೆ ಮೂಲವಾದಂತೆ ವೈಷ್ಣವಾಗಮಗಳು ವೈಷ್ಣವಧರ್ಮಕ್ಕೆ ಮೂಲವಾದವು. ಆಗಮಗಳು ದೇವೋಪಾಸನೆಯ ವಿಧಿವಿಧಾನಗಳನ್ನು ತಿಳಿಸಿಕೊಟ್ಟು ಸಮಾಜದಲ್ಲಿ ಭಕ್ತಿಯ ಮೂಲಕ ಧರ್ಮದ ಆಚರಣೆಯನ್ನು ವ್ಯವಸ್ಥಿತವಾಗಿ ರೂಢಿಸಿವೆ.

ಭಕ್ತಿಸಾಧನೆಯಿಂದ ಭಗವಂತನನ್ನು ತಿಳಿಯಲು ಯತ್ನಿಸುವವನು ಭಕ್ತ. ಭಕ್ತನಾದವನು ಮಾತ್ರ ಮುಕ್ತಿ ಪಡೆಯಬಲ್ಲ; ಮುಕ್ತಿಸಾಧನೆಯೇ ಭಕ್ತನ ಗುರಿ. ಪ್ರತಿಯೊಬ್ಬ ಸಾಧಕನೂ ತಾನು ಕಲ್ಪಿಸಿಕೊಂಡ ದೇವರನ್ನು ತನ್ನ ಅಂತರಂಗದಲ್ಲಿ ದರ್ಶಿಸಿದ್ದಾನೆ. ಅವನ ಆ ದರ್ಶನಾನುಭವವನ್ನು 'ದೈವಸಾಕ್ಷಾತ್ಕಾರ' ಅಥವಾ 'ಅಪರೋಕ್ಷಾನುಭೂತಿ' ಎಂದು ಕರೆಯಲಾಗಿದೆ; ಅದೇ ಅವನ ಸಿದ್ಧಿಯ ಹಂತವೂ ಹೌದು. ಯೂರೋಪಿನ ತತ್ವಜ್ಞಾನಿ ಪ್ಲೇಟೋ, ಸೂಫೀ ಪಂಥದ ಉಮರ್ ಖಯಾಂ, ಜರ್ಮನ್ ತತ್ವಜ್ಞಾನಿ ಹೆಗೆಲ್, ಭಾರತದ ಸಂತರು -

ಎಲ್ಲರೂ ತಮ್ಮ ತಮ್ಮ ಈ ಅನುಭವವನ್ನು ವರ್ಣಿಸಿ ದಾಖಲಿಸಿದ್ದಾರೆ. ಸೋಜಿಗವೆಂದರೆ ಪ್ರಪಂಚದಾದ್ಯಂತ ಎಲ್ಲ ಭಕ್ತರ ದರ್ಶನಾನುಭವವೂ ಒಂದೇ ಆಗಿರುವುದು! ದೇಶ ಭಾಷೆ ಕಾಲಗಳು ಬೇರೆ ಬೇರೆ, ಅಷ್ಟೇ.

ಕ್ರಮೇಣ ಈ ಭಕ್ತಿತತ್ವ ಅನೇಕ ಹೊಸಧರ್ಮಗಳ ಹುಟ್ಟಿಗೆ ಕಾರಣವಾಯಿತು. ಚೀನಾದಲ್ಲಿ ಕಾನ್ ಫ್ಯೂಷಿಯಸ್, ಪರ್ಷಿಯಾದಲ್ಲಿ ಜೊರಾಸ್ಟರ್, ಭಾರತದಲ್ಲಿ ವರ್ಧಮಾನ ಮಹಾವೀರ ಮತ್ತು ಗೌತಮಬುದ್ಧ ಹೊಸಧರ್ಮಗಳ ಉದಯಕ್ಕೆ ಕಾರಣರಾದರು. ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ಕ್ರಿ.ಪೂ. ಆರನೆಯ ಶತಮಾನದಲ್ಲಿ ಈ ಧರ್ಮಗಳು ಹುಟ್ಟಿದ ವೇಳೆಗೆ ಭಾರತದ ಸಂದರ್ಭದಲ್ಲಿ ಸಾವಿರವರ್ಷಗಳ ಹಳಮೆಯಿದ್ದ, ಪರಂಪರೆಯಿದ್ದ ವೈದಿಕಧರ್ಮ ನಿಂತ ನೀರಾಗಿತ್ತು. ತತ್ವ-ಆಚರಣೆಗಳಲ್ಲಿ ಪರಸ್ಪರ ಹೊಂದಾಣಿಕೆ ತಪ್ಪಿಹೋಗಿತ್ತು. ಯಾಗ ಯಜ್ಞಗಳ ಆಚರಣೆಗಳೂ ಸೂಕ್ಷ್ಮಾತಿಸೂಕ್ಷ್ಮವಾಗುತ್ತಿದ್ದವು. ವರ್ಣಾಶ್ರಮ ಪದ್ಧತಿ ಜಾತಿ ಪದ್ಧತಿಯಾಗಿ ಮಾರ್ಪಟ್ಟಿತ್ತು. ಸಮಾಜದಲ್ಲಿ ಉಚ್ಚ-ನೀಚ, ಮೇಲು-ಕೀಳು ಭಾವನೆ ಬಲಿತು, ಧರ್ಮದ ಹೆಸರಿನಲ್ಲಿ ಜನಸಾಮಾನ್ಯರ ಸುಲಿಗೆಯಾಗುತ್ತಿತ್ತು. ಇಂತಹ ಸಂದಿಗ್ಧ ಹಾಗೂ ಸಂಕ್ಷಟಕಾಲದಲ್ಲಿ ಜೈನಧರ್ಮ ಬೌದ್ಧಧರ್ಮಗಳು ಭಾರತಕ್ಕೆ ಬಂದವು. ಸಮಾನತೆ, ಅಹಿಂಸೆಗಳನ್ನು ಎತ್ತಿ ಹಿಡಿ ಜನರ ಆಡುಮಾತಾದ ಪ್ರಾಕೃತದಲ್ಲೇ ಬೋಧಿಸಿದ ಮಹಾವೀರನ ಜೈನಧರ್ಮ ಮತ್ತು ಆಸೆಯೇ ದುಃಖಕ್ಕೆ ಮೂಲ, ಆಸೆಯನ್ನು ಬಿಡಬೇಕು ಎಂದು ಮುಂತಾಗಿ ಸರಳ ಮಾತುಗಳಲ್ಲಿ ಜನರ ಆಡುಮಾತಾದ ಪಾಳಿ ಭಾಷೆಯಲ್ಲಿ ತತ್ವ ಬೋಧಿಸಿದ ಗೌತಮ ಬುದ್ಧನ ಬೌದ್ಧಧರ್ಮಗಳು ಜನರಿಗೆ ನೇರವಾಗಿ ತಟ್ಟಿದವು; ಅರ್ಥವಾದವು; ಆಪ್ಯಾಯ ಮಾನವಾದವು. ಮೂಲಭೂತವಾಗಿ ವೇದಪ್ರಾಮಾಣ್ಯವನ್ನು ಧಿಕ್ಕರಿಸಿ ನಿಂತ ಧರ್ಮಗಳಿವು. ಪರಿಶುದ್ಧ ಜೀವನ, ಉದಾತ್ತ ತತ್ವಗಳಿಗೆ ಒತ್ತುಕೊಟ್ಟ ಈ ಎರಡೂ ಧರ್ಮಗಳು ಭಾರತವನ್ನಾಳಿದ ಚಂದ್ರಗುಪ್ತಮೌರ್ಯ, ಅಶೋಕರ ಕಾಲದಲ್ಲಿ ರಾಜಾಶ್ರಯವನ್ನು ಪಡೆದವು.

ಅನ್ಯಧರ್ಮಗಳ ಈ ಹಠಾತ್ ದಾಳಿ ವೈದಿಕಧರ್ಮವನ್ನು ಬಡಿದೆಬ್ಬಿಸಿತು. ಜೈನ ಬೌದ್ಧಧರ್ಮಗಳ ವೈಚಾರಿಕತೆಯನ್ನು ಗ್ರಹಿಸಿ ವೈದಿಕ ಧರ್ಮವನ್ನು ಆ ಹಿನ್ನೆಲೆಯಲ್ಲಿ ಪ್ರತಿಪಾದಿಸುವ ಅಗತ್ಯವನ್ನು ಮನಗಂಡ ತಾತ್ವಿಕರು ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸಾ, ಉತ್ತರ ಮೀಮಾಂಸಾ-ಈ ಷಡ್ದರ್ಶನ ಗ್ರಂಥಗಳನ್ನು ಬರೆದರು. ಬ್ರಹ್ಮಸೂತ್ರಗಳೆಂದೂ ಇವು ಪರಿಚಿತವಾಗಿವೆ.

ಹೀಗೆ, ವೇದಗಳಿಂದ ಆರಂಭವಾದ ಭಾರತದ ಭಕ್ತಿತತ್ವ, ಉಪನಿಷತ್ತು, ಇತಿಹಾಸ, ಪುರಾಣಗಳು, ಭಕ್ತಿಸೂತ್ರಗಳು, ಜೈನಬೌದ್ಧಾದಿ ಹೊಸಧರ್ಮಗಳ ಮೂಸೆಯಲ್ಲಿ ಹಾದು ಬಂದು ಅವುಗಳನ್ನು ಜನರಿಗೆ ಅರ್ಥಮಾಡಿಸುವ ವ್ಯಾಖ್ಯಾನ, ಟೀಕೆ-ಟಿಪ್ಪಣಿಗಳ ರೂಪದಲ್ಲಿ ಬೆಳೆದುನಿಂತಿತು. ಈ ರೀತಿಯಲ್ಲಿ ಉತ್ತುಬಿತ್ತು ಹದಗೊಂಡ ನೆಲದಲ್ಲಿ ಮುಂದೆ ಶಂಕರ ರಾಮಾನುಜ ಮಧ್ವ - ಆಚಾರ್ಯತ್ರಯರು ಉಪನಿಷತ್ತು, ಭಗವದ್ಗೀತೆ, ಬ್ರಹ್ಮ ಸೂತ್ರಗಳೆಂಬ 'ಪ್ರಸ್ಥಾನತ್ರಯ'ಗಳಿಗೆ ವ್ಯಾಖ್ಯಾನಗಳನ್ನು ಬರೆಯುವ ಮೂಲಕ ಕ್ರಮವಾಗಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಸಿದ್ಧಾಂತಗಳೆಂಬ ಬೆಳೆ ಬೆಳೆದರು. ಈ ಸಿದ್ಧಾಂತಗಳು ಅವರವರ ಶಿಷ್ಯರು, ಪ್ರಶಿಷ್ಯರುಗಳಿಂದ ಭಾರತದಾದ್ಯಂತ ಪ್ರಚಾರಕ್ಕೆ ಬಂದುವು. ಒಂದೊಂದು ಸಿದ್ಧಾಂತವೂ ದೇಶದಾದ್ಯಂತ ಅನುಯಾಯಿಗಳನ್ನು ಪಡೆಯಿತು.

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ವಿಶೇಷವಾಗಿ ಪ್ರಚಲಿತವಾಗಿರುವ ಶೈವ ವೈಷ್ಣವ ಧರ್ಮಗಳನ್ನೇ ಈ ಆಚಾರ್ಯತ್ರಯರು ಹಾಗೂ ಅವರ ಶಿಷ್ಯಪರಂಪರೆ ಎತ್ತಿಹಿಡಿದದ್ದು. ಆಯಾ ಪ್ರಾದೇಶಿಕ ಭಾಷೆಗಳಲ್ಲಿ ಈ ಧರ್ಮಗಳ ಅನುಯಾಯಿಗಳು ರಚಿಸಿರುವ ಭಕ್ತಿ ಸಾಹಿತ್ಯವನ್ನು ಗಮನಿಸಿದರೆ ಕ್ರಿ.ಶ. ಸುಮಾರು ಏಳನೇ ಶತಮಾನದಷ್ಟು ಹಿಂದೆಯೇ ತಮಿಳು ಭಾಷೆಯಲ್ಲಿ ಹುಟ್ಟಿದ ನಾಯನ್ಮಾರರ ಶೈವ ಸಾಹಿತ್ಯ ಮತ್ತು ಆಳ್ವಾರರ ವೈಷ್ಣವ ಸಾಹಿತ್ಯಗಳೇ ಪ್ರಾಚೀನ ದಾಖಲೆಗಳು. ಆಳ್ವಾರರ ಭಕ್ತಿಸಾಹಿತ್ಯವು ಬಹುಶಃ ಮುಂದೆ ರಾಮಾನುಜರ ಶ್ರೀ ವೈಷ್ಣ ಮತಕ್ಕೆ ಮೂಲ ಪ್ರೇರಣೆಯಗಿ ಪರಿಣಮಿಸಿರಬಹುದು.

ಕನ್ನಡ ಭಾಷೆಯಲ್ಲಿ ಭಕ್ತಿಸಾಹಿತ್ಯ ಮೈತಾಳಲು ಮುಂದೆ ಸುಮಾರು ಐನೂರು ವರ್ಷಗಳೇ ಬೇಕಾದವು. ವೈದಿಕ ಧರ್ಮಾಚರಣೇಗಳಿಂದ ಉಸಿರುಗಟ್ಟಿದಂತಾಗಿದ್ದ ಜನರಿಗೆ ಹನ್ನೆರಡನೆಯ ಶತಮಾನದಲ್ಲಿ ವರ್ಣಭೇದ, ಲಿಂಗಭೇದಗಳಿಲ್ಲದ, ಸರ್ವಸಮಾನತೆಯನ್ನು ಸಾರುವ ವೀರಶೈವಧರ್ಮ ಆಶ್ರಯವನ್ನಿತ್ತಿತು. ಬಸವಣ್ಣ, ಅಲ್ಲಮಪ್ರಭು, ಚನ್ನಬಸವಣ್ಣ, ಅಕ್ಕ ಮಹಾದೇವಿಯರಂಥ ಅನುಭಾವಿಗಳ ಒಂದು ಪಡೆಯೇ ಸೃಷ್ಟಿಯಾಗಿ ಜನರ ಆಡು ಮಾತಿನಲ್ಲೇ ಅವರ ಆಧ್ಯಾತ್ಮಿಕ ಹಸಿವನ್ನು

ತಣಿಸಿತು. ಈ ದೃಷ್ಟಿಯಲ್ಲಿ ಮೊತ್ತಮೊದಲಿಗೆ ಧರ್ಮವನ್ನು, ಶಿವಭಕ್ತಿಯನ್ನು ಕನ್ನಡ ಭಾಷೆಯಲ್ಲಿ ಮನೆಮನೆಯ ಬಾಗಿಲಿಗೆ ತೆಗೆದುಕೊಂಡು ಹೋದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ.

ಶೈವಧರ್ಮದಷ್ಟೇ ಪ್ರಾಚೀನವಾದ ವೈಷ್ಣವಧರ್ಮದ ಆರಾಧ್ಯದೈವ ಪಂಢರಾಪುರದ ವಿಠಲ ಕರ್ನಾಟಕದ ಭಾಗವೇ ಆಗಿದ್ದ ಮಳಖೇಡದ ರಾಷ್ಟ್ರಕೂಟರ ಆರಾಧ್ಯದೈವವೂ ಆಗಿದ್ದನೆಂಬುದು ಗಮನಾರ್ಹ ಸಂಗತಿ. ಒಟ್ಟಾರೆ ಕರ್ನಾಟಕದಲ್ಲಿ ವೈಷ್ಣವಧರ್ಮ ಮೂರು ಹಂತಗಳಲ್ಲಿ ಬೆಳೆದುಬಂದಿತೆಂಬುದನ್ನು ವಿದ್ವಾಂಸರು ಗುರುತಿಸಿದ್ದಾರೆ:

೧. ಶ್ರೀ ರಾಮಾನುಜರಿಗಿಂತ ಹಿಂದೆ ಇದ್ದ ಭಾಗವತಧರ್ಮ.
೨. ಶ್ರೀ ರಾಮಾನುಜರ ಶ್ರೀವೈಷ್ಣವ ಮತ.
೩. ಶ್ರೀ ಮಧ್ವಾಚಾರ್ಯರ ದ್ವೈತಮತ.

ಕನ್ನಡದ ಮೊದಲ ಉಪಲಬ್ಧಶಾಸನ ಕ್ರಿ.ಶ.೪೫೦ರ ಹಲ್ಮಿಡಿಶಾಸನದಲ್ಲೇ ಅಚ್ಯುತನ ಸ್ತುತಿಯಿದೆ. ಆರನೇ ಶತಮಾನದ ಬಾದಾಮಿ ಚಾಲುಕ್ಯರ ಅರಸು ಮಂಗಲೇಶ ತನ್ನನ್ನು 'ಮಹಾಭಾಗವತ'ನೆಂದು ಕರೆದುಕೊಂಡಿರುವುದಲ್ಲದೆ ವೈಷ್ಣ ಗುಹಾಲಯವನ್ನು ಕಟ್ಟಿಸಿದ್ದಾನೆ. ಅತ್ತಿಮಬ್ಬೆಯ ಲಕ್ಕುಂಡಿಶಾಸನ 'ವೈಷ್ಣವಗೀತಿ ಮನೋಹರ'ರ ಪ್ರಸ್ತಾಪಮಾಡಿದೆ. ಈ ಎಲ್ಲ ಮಾಹಿತಿಗಳನ್ನೂ ಗಮನಿಸಿದಾಗ ಕರ್ನಾಟಕದಲ್ಲಿ ಹರಿದಾಸಪಂಥಕ್ಕೆ ಹಿನ್ನೆಲೆಯಾಗಿ ಶ್ರೀ ರಾಮಾನುಜರಿಗಿಂತ ಹಿಂದಿನ ವೈಷ್ಣವಧರ್ಮದ ಇತಿಹಾಸ ಸ್ಪಷ್ಟವಾಗುತ್ತಾ ಹೋಗುತ್ತದೆ. ಶ್ರೀ ರಾಮಾನುಜರ ಶ್ರೀವೈಷ್ಣವ ಮತ ತಮಿಳುನಾಡಿನ ಕೊಡುಗೆಯಾದರೂ ಅದರ ಅನುಯಾಯಿಗಳ ಮಾತೃಭಾಷೆ ತಮಿಳಾದ್ದರಿಂದ ಅವರು ಕನ್ನಡದಲ್ಲಿ ಭಕ್ತಿಸಾಹಿತ್ಯ ರಚನೆ ಮಾಡಿದಂತಿಲ್ಲ. ಮುಂದೆ ಹದಿಮೂರನೆಯ ಶತಮಾನದ ಅನಂತರ ಶ್ರೀ ಮಧ್ವಾಚಾರ್ಯರ ಶಿಷ್ಯಪರಂಪರೆಯಿಂದ ಕನ್ನಡದಲ್ಲಿ ವೈಷ್ಣವ ಭಕ್ತಿಸಾಹಿತ್ಯ ರಚನೆ ವಿಪುಲವಾಗಿ ಆಯಿತು. ಅದಕ್ಕೆ ಅನುಕೂಲಕರವಾದ ಮತ್ತು ಅನಿವಾರ್ಯವಾದ ಪರಿಸ್ಥಿತಿ ನಾಡಿನಲ್ಲಿತ್ತು. ಆಶ್ಚರ್ಯವೆಂದರೆ ಭಾರತದಲ್ಲೇ ಭಕ್ತಿಯ ಹಾಗೂ ಧಾರ್ಮಿಕ ಇತಿಹಾಸದಲ್ಲಿ ಆಚಾರ್ಯ ತ್ರಯರೆಂದು ಪ್ರಸಿದ್ಧರಾದ ಶಂಕರ ರಾಮಾನುಜ ಮಧ್ವರ ಕಾರ್ಯಕ್ಷೇತ್ರ ಕರ್ನಾಟಕವೇ ಆಗಿದ್ದುದು. ಇಂದಿಗೂ ಆಯಾ ಪೀಠಾಧಿಪತಿಗಳ ಹೆಸರಿನಲ್ಲೇ ಖ್ಯಾತವಾಗಿದ್ದು, ಧಾರ್ಮಿಕ ಕ್ಷೇತ್ರಗಳೆನಿಸಿರುವ ಶೃಂಗೇರಿಯ ಶೈವಪೀಠ, ಮೇಲುಕೋಟೆಯ ಶ್ರೀವೈಷ್ಣವ ಕೇಂದ್ರ ಹಾಗೂ ಉಡುಪಿಯ ಮಾಧ್ವಮಠಗಳು ಈ ಮಾತಿಗೆ ಸಾಕ್ಷಿ.

ಶ್ರೀಮಧ್ವಾಚಾರ್ಯರು ಹುಟ್ಟಿದ್ದೇ ಕರ್ನಾಟಕದ ಉಡುಪಿಯ ಸಮೀಪದ ಪಾಜಕಕ್ಷೇತ್ರದಲ್ಲಿ ಬೌದ್ಧ, ಜೈನ, ಶೈವ, ವೀರಶೈವ ಹಾಗೂ ಇಸ್ಲಾಂ ಧರ್ಮಗಳಿಂದ ಸಾಕಷ್ಟು ಮೂಲೆಗುಂಪಾಗಿದ್ದ ಸಮಯವದು. ಆಂತರಿಕವಾಗಿ ಕರ್ನಾಟಕದಲ್ಲೇ ಹುಟ್ಟಿಕೊಂಡಿದ್ದ ವೀರಶೈವಧರ್ಮ ತನ್ನ ವಿಶಾಲ ಹಾಗೂ ಸ್ವತಂತ್ರ ಮನೋಭಾವಗಳಿಂದಾಗಿ ಜನರನ್ನು ಹೆಚ್ಚು ಹೆಚ್ಚು ಆಕರ್ಷಿಸುತ್ತಿತ್ತು. ಆದರೆ ವೀರಶೈವಧರ್ಮ ವೇದಪ್ರಾಮಾಣ್ಯವನ್ನು ನಿರಾಕರಿಸಿದ್ದರಿಂದ ವೈದಿಕರಿಗೆ ಮುಕ್ತವಾಗಿ ಅದನ್ನು ಆತುಕೊಳ್ಳಲು ಸಾಧ್ಯವಾಗಿರಲಿಕ್ಕಿಲ್ಲ. ಪರಧರ್ಮವೇ ಆದ ಇಸ್ಲಾಂ ಧರ್ಮದ ಆಕ್ರಮಣವೂ ಸಾಕಷ್ಟು ಪ್ರಬಲವಾಗಿದ್ದ ಸಮಯವದು. ಉತ್ತರ ಭಾರತದಲ್ಲಿ ಇದ್ದಂತಹ ಮುಸ್ಲಿಂ ಆಡಳಿತ ದಕ್ಷಿಣ ಭಾರತಕ್ಕೂ ಹಬ್ಬತೊಡಗಿ ಹಿಂದುಗಳು ಬಲವಂತ ಮತಾಂತರಕ್ಕೆ ಗುರಿಯಾಗಿದ್ದರು. ಸುಮಾರು ನಾಲ್ಕು ಸಾವಿರ ವರ್ಷಗಳಿಂದ ಜನರ ಆಲಂಬನ ಶಕ್ತಿಯಾಗಿ ಬೆಳೆದು ಬೇರು ಬಿಟ್ಟಿದ್ದ ಧರ್ಮ, ದೇವರು, ದೇವಾಲಯಗಳ ಮೇಲಿನ ಆಕ್ರಮಣ, ಅತ್ಯಾಚಾರ, ಅಪವಿತ್ರತೆಗಳಿಂದ ಮಾನಸಿಕವಾಗಿ ಅತಂತ್ರರಾಗಿದ್ದ ಹಿಂದುಗಳು ಯುದ್ಧ ಕೊಲೆ ಸುಲಿಗೆಗಳ ಭೀತಿಯಿಂದಲೂ ತತ್ತರಿಸುವಂತಾಗಿದ್ದರು. ಅಂತಹ ಅಸಹಾಯಕ ಸ್ಥಿತಿಯಲ್ಲಿ ಭಕ್ತಿಮಾರ್ಗ ಪುನಃ ಜನರ ಸಹಾಯಕ್ಕೆ ಆಲಂಬನೆಯಾಗಿ ಬಂದಿತು. ಭಾರತದಾದ್ಯಂತ ವಿವಿಧ ಪ್ರಾಂತ್ಯಗಳಲ್ಲಿ ಭಕ್ತಕವಿಗಳು ತಂಡೋಪತಂಡವಾಗಿ ಹುಟ್ಟಿಕೊಂಡು ಜನಜೀವನಕ್ಕೆ ಹತ್ತಿರವಾದ ಅನುಭವಗಳಿಂದ ತುಂಬಿದ ಜನಪ್ರಿಯ ಭಕ್ತಿಸಾಹಿತ್ಯ ಸೃಷ್ಟಿಮಾಡಿದರು. ಕೇರಳದ ಚೆರುಶ್ಯೇರಿ; ಆಂಧ್ರದ ಅನ್ನಮ-ಪೋತನರು; ಮಹಾರಾಷ್ಟ್ರದ ಜ್ಞಾನದೇವ-ನಾಮದೇವರು; ಉತ್ತರ ಭಾರತದ ಕಬೀರ್; ಗುಜರಾತಿನ ನರಸೀ ಮೆಹತಾ;ಪಂಜಾಬಿನ ಗುರು ನಾನಕ್; ರಾಜಾಸ್ಥಾನದ ಮೀರಾ, ಕರ್ನಾಟಕದ ಶ್ರೀಪಾದರಾಜರು - ಹೀಗೆ ಅನೇಕ ಮಂದಿ ಸಂತರು ತಮ್ಮ ತಮ್ಮ ಮಾತೃಭಾಷೆಯಲ್ಲಿ ಕೃತಿರಚನೆ ಮಾಡಿದರು. ಸಂಸ್ಕೃತ ಕವಿ ಜಯದೇವ, ಬಂಗಾಲದ ಚಂಡೀದಾಸ, ಅಸ್ಸಾಮಿನ ಶಂಕರದೇವ-

ಎಲ್ಲರೂ ಈ ಭಕ್ತಿವಾಹಿನಿಯಲ್ಲಿ ಮಿಂದು ಪುನೀತರಾದವರೇ. ಒಂದು ಕಡೆ ಪರಕೀಯರಾದ ಮುಸ್ಲಿಂ ದೊರೆಗಳ ದಾಳಿ, ಮತ್ತೊಂದು ಕಡೆ ಚಿಕ್ಕಪುಟ್ಟ ರಾಜರುಗಳ ಅಧಿಕಾರಲಾಲಸೆಯಿಂದ, ರಾಜ್ಯಗಳ ಅಂತಃಕಲಹಗಳಿಂದ ಬೇಸತ್ತಿದ್ದ ಜನತೆಯನ್ನು ಶಾಂತಿ ಸಮಾಧಾನಗಳತ್ತ ಕರೆದೊಯ್ಯಲು ಈ ಭಕ್ತಿ ಪಂಥಗಳು ಅನುವಾದವು. ಭಕ್ತಿ ವೃದ್ಧಿಸಿದ್ದೇ ಕರ್ನಾಟಕದಲ್ಲಿ, ಜೈನ, ಬೌದ್ಧ, ಶೈವ, ವೀರಶೈವ ಹಾಗೂ ವೈಷ್ಣವಧರ್ಮಗಳೇ ಕರ್ನಾಟಕದ ಪ್ರಮುಖಧರ್ಮಗಳೂ ಹೌದು. ಕರ್ನಾಟಕದ ಶ್ರವಣಬೆಳಗೊಳ, ಕೊಪಣತೀರ್ಥಗಳಲ್ಲಿ ನೆಲೆನಿಂತ ಜೈನಧರ್ಮ ರಾಷ್ಟ್ರಕೂಟರ ಕಾಲದಲ್ಲಿ ರಾಜಾಶ್ರಯ ಪಡೆಯಿತು. ಹತ್ತನೇ ಶತಮಾನದಲ್ಲಿ ಜನಮನ್ನಣೆಗಳಿಸಿ ಪಂಪ ರನ್ನರಂತಹ ಕವಿಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ತನ್ನ ಅಮೂಲ್ಯ ಕೊಡುಗೆಯನ್ನಿತ್ತು ವಿರಮಿಸಿತು. ಬೌದ್ಧಧರ್ಮ ಕ್ರಿ.ಪೂ. ಮೂರನೆಯ ಶತಮಾನದಲ್ಲಿ ಮೌರ್ಯರ ಅಶೋಕ ಕಳುಹಿಸಿದ ಮಹಾದೇವ ಮತ್ತು ರಖ್ಖಿತರಿಂದ ಮಹಿಷಮಂಡಲ ಹಾಗೂ ಬನವಾಸಿಗೆ ಕಾಲಿರಿಸಿದರೂ ಯಾವ ಕಾಲದಲ್ಲೂ ಅದು ಕರ್ನಾಟಕದಲ್ಲಿ ಪ್ರಬಲ ಧರ್ಮವಾಗಿ ನಿಲ್ಲಲಿಲ್ಲ. ಮಾಸ್ಕಿ, ಜಟಿಂಗರಾಮೇಶ್ವರ, ಬ್ರಹ್ಮಗಿರಿಗಳಲ್ಲಿ ಸಿಕ್ಕಿರುವ ಶಾಸನಗಳು ಬೌದ್ಧಧರ್ಮದ ಪ್ರಾಚೀನ ಉಲ್ಲೇಖಗಳು; ಹದಿನಾರನೆಯ ಶತಮಾನದ ಒಂದು ಶಾಸನದ ಉಲ್ಲೇಖವೇ ಈಚಿನದು.

ಶೈವಧರ್ಮ ವೈಷ್ಣವಧರ್ಮಗಳು ಜೊತೆ ಜೊತೆಯಾಗಿ ಮುನ್ನಡೆದಿದ್ದರೂ ಶೈವಧರ್ಮ ಕ್ರಮೇಣ ಲಕುಲೀಶ, ಪಾಶುಪತ, ಕಾಳಾಮುಖ ಎಂಬುದಾಗಿ ಬೇರೆ ಬೇರೆ ಪಂಥಗಳಾಗಿ ಒಡೆದುಹೋಯಿತು. ೧೨ನೇ ಶತಮಾನದಲ್ಲಿ ಈ ಶೈವಧರ್ಮವೇ ಬಸವಣ್ಣನವರ ನೇತೃತ್ವದಲ್ಲಿ ವೀರಶೈವಧರ್ಮವಾಗಿ ಕವಲೊಡೆಯಿತು. ವೈಷ್ಣವಧರ್ಮ ಈ ಮೊದಲೇ ತಿಳಿಸಿದಂತೆ ಮೂರು ಮಜಲುಗಳಲ್ಲಿ ಬೆಳವಣಿಗೆಯನ್ನು ಹೊಂದಿ ಭಾರತದಲ್ಲಿ, ಅದರಲ್ಲೂ ದಕ್ಷಿಣ ಭಾರತದಲ್ಲಿ, ಜಾತಿ ಮತ ವೈಷಮ್ಯ ಹೊತ್ತಿ ಉರಿಯುತ್ತಿದ್ದ, ನೀತಿಯ ನೆಲೆಗಟ್ಟು ಸಡಿಲಗೊಂಡಿದ್ದ ಕಾಲದಲ್ಲಿ ಮಾನವತೆಯ ಶಾಶ್ವತ ಮೌಲ್ಯಗಳನ್ನು ಎತ್ತಿಹಿಡಿಯುವ ಸಲುವಾಗಿ ಶ್ರೀ ಮಧ್ವಾಚಾರ್ಯರು ಪ್ರಸ್ಥಾನತ್ರಯಗಳಾದ ಉಪನಿಷತ್ತು ಭಗವದ್ಗೀತೆ ಬ್ರಹ್ಮಸೂತ್ರಗಳಿಗೆ ದ್ವೈತಪರ ವ್ಯಾಖ್ಯಾನ ಮಾಡಿ ತಮ್ಮ ದ್ವೈತಸಿದ್ಧಾಂತವನ್ನು ಮಂಡಿಸಿದರು. ಸಂಸ್ಕೃತದಲ್ಲಿ ಸರ್ವಮೂಲವೆಂದೇ ಖ್ಯಾತವಾಗಿರುವ ಮೂವತ್ತೇಳು ಗ್ರಂಥಗಳನ್ನು ರಚಿಸಿದರು. ಆಚಾರ್ಯರ ಈ ಗ್ರಂಥಗಳಿಗೆ ಸಂಸ್ಕೃತದಲ್ಲಿ ಟೀಕುಗಳು ಬಂದುವು. ಆ ಟೀಕುಗಳಿಗೆ ಟೀಕುಗಳೂ ಬಂದು ಹೋದುವು.

ಉಡುಪಿಯಲ್ಲಿ ಶ್ರೀಕೃಷ್ಣನನ್ನು ಪ್ರತಿಷ್ಠಾಪಿಸಿದ ಆಚಾರ್ಯರು ಅವನ ಪೂಜೆ ಹಾಗೂ ದ್ವೈತಸಿದ್ಧಾಂತ ಪ್ರಸಾರಕ್ಕಾಗಿ ಅಷ್ಟಮಠಗಳನ್ನು ಸ್ಥಾಪಿಸಿ ಎಂಟು ಮಂದಿ ಬಾಲಯತಿಗಳನ್ನು ನೇಮಿಸಿದರು. ಫಲಿಮಾರು, ಅದಮಾರು, ಕೃಷ್ಣಾಪುರ, ಪುತ್ತಿಗೆ, ಶಿರೂರು, ಸೋದೆ, ಕಾಣಿಯೂರು ಮತ್ತು ಪೇಜಾವರ - ಇವೇ ಆ ಅಷ್ಟಮಠಗಳಲು; ಹೃಷಿಕೇಶ ತೀರ್ಥ, ನರಸಿಂಹ, ಜನಾರ್ದನ, ಉಪೇಂದ್ರ, ವಾಮನ, ವಿಷ್ಣು, ರಾಮ ಮತ್ತು ಅಧೋಕ್ಷಜ ತೀರ್ಥರುಗಳೇ ಆ ಎಂಟು ಮಂದಿ ಯತಿಗಳು. ಈ ಎಂಟುಮಂದಿ ಯತಿಗಳೂ ಎರಡೆರಡು ತಿಂಗಳಿಗೆ ಒಬ್ಬೊಬ್ಬರಂತೆ ಕೃಷ್ಣನ ಪೂಜೆ ಮಾಡುವ ಸರದಿಯನ್ನು ಪಡೆಯುತ್ತಿದ್ದರು. ಮುಂದೆ ವಾದಿರಾಜರ ಕಾಲಕ್ಕೆ ಈ ಪರ್ಯಯದ ಅವಧಿ ಎರಡು ವರ್ಷಗಳಿಗೆ ಒಮ್ಮೆ ಬದಲಾಗುವಂತಾಯಿತು. ಆ ಎಂಟೂ ಮಠಗಳ ಶಿಷ್ಯ ಪರಂಪರೆ ಮಧ್ವಮತದ ತತ್ವಗಳನ್ನು ಅನೂಚಾನವಾಗಿ ಪ್ರಸಾರ ಮಾಡುತ್ತ ಬಂದಿದ್ದಾರೆ. ಸ್ವತಃ ಮಧ್ವಾಚಾರ್ಯರೇ ದಕ್ಷಿಣದ ಉಡುಪಿಯಿಂದ ಉತ್ತರದ ಬದರಿ ಕ್ಷೇತ್ರದವರೆಗೂ ಸಂಚರಿಸಿ ತತ್ವಪ್ರಸಾರ ಮಾಡಿದರು. ಇಷ್ಟೆಲ್ಲ ಏರ್ಪಾಡುಗಳಾದರೂ ದ್ವೈತತತ್ತ್ವ ಬಹುಶಃ ಭಾಷಾಮಾಧ್ಯಮದ ತೊಡಕಿನಿಂದಾಗಿ ಜನಸಾಮಾನ್ಯರನ್ನು ಮುಟ್ಟಲೇ ಇಲ್ಲ. ಅವು ಜನಮನದಲ್ಲಿ ಬೇರೂರಬೇಕಾದರೆ ಮುಂದೆ ಸುಮಾರು ಇನ್ನೂರು ವರ್ಷಗಳೇ ಕಾಯಬೇಕಾದವು.

ಮಧ್ವಾಚಾರ್ಯರ ತರುವಾಯ ಸು.೧೪-೧೫ನೆಯ ಶತಮಾನದ ಹೊತ್ತಿಗೆ ಪುನಃ ಮುಸ್ಲಿಮರ ಚಟುವಟಿಕೆಗಳು ತೀವ್ರವಾದವು. ದಕ್ಷಿಣಭಾರತದಲ್ಲಿ ಪರಸ್ಪರ ಒಳಜಗಳದಲ್ಲಿ ತೊಡಗಿದ್ದ ಸೇವುಣರು ಕಾಕತೀಯರು ಹೊಯ್ಸಳರು ಪಾಂಡ್ಯರೇ ಮೊದಲಾದ ದೊರೆಗಳು ಹೊರಗಿನ ದಾಳಿಯನ್ನು ಸಹಿಸಲಾರದೆ ತತ್ತರಿಸತೊಡಗಿದ್ದರು. ಅವರ ಈ ಅಸಹಾಯಕತೆಯನ್ನು ಮಲ್ಲಿಕಾಫರ್ ಸದುಪಯೋಗಪಡಿಸಿಕೊಂಡ. ದೇವಗಿರಿಯನ್ನು ವಶಪಡಿಸಿಕೊಂಡು ಕಾಕತೀಯರ ಪ್ರತಾಪ ರುದ್ರನನ್ನು ಗೆದ್ದುದಲ್ಲದೆ ದ್ವಾರಸಮುದ್ರವನ್ನು ಮುತ್ತಿ ಹೊಯ್ಸಳರನ್ನು ಬಗ್ಗು ಬಡಿದ. ಶ್ರೀರಂಗ, ಮಧುರೆಗಳನ್ನು ಮುತ್ತಿ ಅಲ್ಲಿಯ ದೇವಾಲಯಗಳನ್ನು ನಾಶಪಡಿಸಿ ಸಂಪತ್ತನನ್ನೆಲ್ಲ ದೋಚಿಕೊಂಡು ಪುನಃ ದೆಹಲಿಗೆ ಹಿಂತಿರುಗಿದ. ಪಂಜಾಬಿನಿಂದ ಮಧುರೆಯವರೆಗೂ ಗುಜರಾತಿನಿಂದ

ಬಂಗಾಳದವರೆಗೂ ತನ್ನ ರಾಜ್ಯವನ್ನು ವಿಸ್ತರಿಸಿದ. ಮುಂದೆ ದೆಹಲಿಯನ್ನಾಳಿದ ಮಹಮ್ಮದ್ ಬಿನ್ ತುಘಲಕ್, ಬಹಮನಿ ರಾಜ್ಯದ ಸುಲ್ತಾನರುಗಳು ಹಿಂದುಗಳನ್ನು ನಿರ್ದಾಕ್ಷಿಣ್ಯವಾಗಿ ದೋಚಿದರು. ಮತಾಂತರಗಳು, ತೆರಿಗೆಯ ಹೊರೆ, ಕಠಿಣಶಿಕ್ಷೆಗಳು ಜನರನ್ನು ಜರ್ಝರಿತರನ್ನಾಗಿ ಮಾಡಿದ್ದವು. ಈ ಎಲ್ಲ ಹಿಂಸೆ ಕಷ್ಟ ನಷ್ಟಗಳಿಗೆ ಪ್ರತಿಯಾಗಿ ಹಿಂದೂ ದೊರೆಗಳು ವಿದ್ಯಾರಣ್ಯರ ನೇತೃತ್ವದಲ್ಲಿ ಸಂಗಮವಂಶದ ಛತ್ರದಡಿಯಲ್ಲಿ ವಿಜಯನಗರ ಸ್ಥಾಪನೆ ಮಾಡಿದರು. ಕನ್ನಡ ನಾಡಿನಲ್ಲಿ ಹಾಗಿರಲಿ, ಇಡೀ ಭರತಖಂಡದಲ್ಲೇ ಆ ಕಾಲಕ್ಕೆ ಅದೊಂದು ಅಸಾಮಾನ್ಯ ಹಾಗೂ ಮಹತ್ವಪೂರ್ಣ ಘಟನೆ. ಹಾಗೆ ಸ್ಥಾಪಿತವಾದ ಕನ್ನಡನಾಡು ಮುಂದೆ ಎದುರೇ ಇಲ್ಲದಿದ್ದ ಮುಸ್ಲಿಮರನ್ನು ಎದುರಿಸಿ ಹಿಂದೂ ಧರ್ಮವನ್ನು ರಕ್ಷಿಸುವತ್ತ ಪರಿಣಾಮಕಾರೀ ಸಂಘಟನಾ ಶಕ್ತಿಯಾಗಿ ಕೆಲಸ ಮಾಡಿತು. ನಾಡು ನೆಮ್ಮದಿ ಕಂಡಿತು. ಮುಂದೆ ನಾಡಿನ ದೊರೆ ಕೃಷ್ಣದೇವರಾಯನ ಕಾಲದಲ್ಲಿ ವೈಷ್ಣವಯತಿಗಳಾದ ವ್ಯಾಸರಾಯರ ನೇತೃತ್ವದಲ್ಲಿ ವೈಷ್ಣವಧರ್ಮದ ಏಳಿಗೆಯೂ ಸಮಗ್ರ ಭಾರತದಲ್ಲಿ ಮಾಧ್ವಮತ ಪ್ರಸಾರವೂ ಆಯಿತು. ಕರ್ನಾಟಕದ ಹರಿದಾಸ ಪಂಥ ಆ ಮಾಧ್ವಮತ ತತ್ವಗಳ ಹಿನ್ನೆಲೆಯಲ್ಲಿ ವೈಷ್ಣವ ಭಕ್ತಿಪಂಥವಾಗಿ ಅರಳಿತು. ವಿಜಯನಗರದ ದೊರೆ ನರಸಿಂಹನ ಆಳ್ವಿಕೆಯಲ್ಲಿ ರಾಜಗುರುಗಳೆಂದು ಅಭಿಷಿಕ್ತರಾಗಿದ್ದ ಶ್ರೀಪಾದರಾಜರು ಆ ಕಾಲದಲ್ಲಿ ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸುವ ಮೂಲಕ ಹೇಗೆ ಕನ್ನಡ ಹರಿದಾಸ ಸಾಹಿತ್ಯ ಪಂಥದ ಪ್ರವರ್ತಕರೆನ್ನಿಸಿಕೊಂಡರೆಂಬುದನ್ನು ಮುಂದೆ ವಿವರವಾಗಿ ಪ್ರಸ್ತಾಪಿಸಲಾಗುತ್ತದೆ. ಮಧ್ವಾಚಾರ್ಯರ ದ್ವೈತಸಿದ್ಧಾಂತವನ್ನು ಕನ್ನಡದಲ್ಲಿ ಪರಿಣಾಮಕಾರಿಯಾಗಿ ಪ್ರಸಾರ ಮಾಡಿದ ಯತಿತ್ರಯರಲ್ಲಿ ಶ್ರೀಪಾದರಾಜರೇ ಮೊದಲಿಗರು; ಎರಡನೆಯವರು ಕೃಷ್ಣದೇವರಾಯನ ಆಸ್ಥಾನದಲ್ಲಿ ರಾಜಗುರುಗಳಾಗಿದ್ದ ವ್ಯಾಸರಾಯರು; ಅನಂತರದವರು ವ್ಯಾಸರಾಯರ ಶಿಷ್ಯರಾದ ವಾದಿರಾಜರು.

[1] ಋಗ್ವೇದ೧-೧೬೪: ೧೦-೧೫೬.

# ೨. ಶ್ರೀಪಾದರಾಜರ ಕಾಲ-ದೇಶ-ಜೀವನವಿಚಾರ (೧)

ಶ್ರೀಪಾದರಾಜರ ಜೀವನ ವಿಚಾರವನ್ನು ನೇರವಾಗಿ, ಸಮಗ್ರವಾಗಿ ತಿಳಿಸುವ ಯಾವ ಗ್ರಂಥವೂ ದೊರೆಯುವುದಿಲ್ಲ. ಅವರ ಸಮಕಾಲೀನರೂ ನೇರ ಶಿಷ್ಯರೂ ಆದ ವ್ಯಾಸರಾಯರು ರಚಿಸಿರುವ ಕನ್ನಡ ಕೀರ್ತನೆಗಳು ಮತ್ತು 'ಪಂಚರತ್ನಮಾಲಾಸ್ತುತಿ'; ವಿಜಯದಾಸಾದಿ ಹರಿದಾಸರ ಕೀರ್ತನೆಗಳು; ಶ್ರೀನಿಧಿತೀರ್ಥರು ರಚಿಸಿರುವ 'ಶ್ರೀಪಾದರಾಜಾಷ್ಟಕಂ';ಭೀಮಾಚಾರ್ಯ ವಿರಚಿತ 'ಶ್ರೀ ಪೂರ್ಣಬೋಧ ಗುರುವಂಶ ಕಲ್ಪತರು' -ಈ ಕೆಲವು ಆಕರಗಳಿಂದ ಶ್ರೀಪಾದರಾಜರ ಜೀವನ ವಿಚಾರವನ್ನು ಗ್ರಹಿಸಬೇಕು. ಮೇಲಿನ ಕೃತಿಗಳಲ್ಲೂ ಅವರು ಯತಿಗಳಾದ ಅನಂತರದ ಜೀವನ ವಿಚಾರಗಳು ಮಾತ್ರ ಚಿತ್ರಿತವಾಗಿದೆ; ಬಾಲ್ಯ ಜೀವನದ ಬಗ್ಗೆ ಖಚಿತ ಮಾಹಿತಿಗಳು ದೊರೆಯುವುದಿಲ್ಲ. ಕೇವಲ ಅಲ್ಲಿ ಇಲ್ಲಿ ಕೇಳಿಬಂದ ಅಷ್ಟಿಷ್ಟು ವಿಚಾರಗಳನ್ನು ಹರಿದಾಸ ಸಾಹಿತ್ಯಾಸಕ್ತರು ದಾಖಲಿಸಿದ್ದಾರೆ ಅಷ್ಟೇ. ಒಟ್ಟಾರೆ ದೊರೆಯುವ ಮಾಹಿತಿಗಳಿಂದ, ವಿದ್ವಾಂಸರ ನಂಬಿಕೆ, ಊಹೆಗಳಿಂದ ಶ್ರೀಪಾದರಾಜರ ಜೀವನ ವಿಚಾರವನ್ನು ಹೀಗೆ ಕ್ರೋಡೀಕರಿಸಬಹುದು.

ಶ್ರೀ ಮಧ್ವಾಚಾರ್ಯರಿಗೆ ನಾಲ್ಕುಮಂದಿ ನೇರಶಿಷ್ಯರು. ಪದ್ಮನಾಭತೀರ್ಥರು, ಮಾಧವತೀರ್ಥರು, ನರಹರಿತೀರ್ಥರು ಮತ್ತು ಅಕ್ಷೋಭ್ಯತೀರ್ಥರು. ಈ ನಾಲ್ವರ ಪೈಕಿ ಪದ್ಮನಾಭ ತೀರ್ಥರ ಪೀಳಿಗೆಯಲ್ಲಿ ಏಳನೆಯ ಪೀಠಾಧಿಪತಿಗಳು ಶ್ರೀ ಸ್ವರ್ಣವರ್ಣತೀರ್ಥರು; ತಮಿಳು ನಾಡಿನ ಶ್ರೀರಂಗದಲ್ಲಿ ಮಾಧ್ವಮಠದ ಪೀಠಾಧಿಪತಿಗಳಾಗಿದ್ದವರು. ಅವರೇ ಶ್ರೀಪಾದರಾಜರ ಗುರುಗಳು. ಒಮ್ಮೆ ಸ್ವರ್ಣವರ್ಣತೀರ್ಥರು ಶ್ರೀರಂಗದಿಂದ ಶ್ರೀರಂಗಪಟ್ಟಣಕ್ಕೆ ಕಾವೇರಿ ಸ್ನಾನದ ಉದ್ದೇಶದಿಂದ ಬಂದವರು ಅಬ್ಬೂರಿನ ಪುರುಷೋತ್ತಮತೀರ್ಥರ ಖ್ಯಾತಿಯನ್ನು ಕೇಳಿ, ಅವರಿಗೆ ಗೌರವ ಸಲ್ಲಿಸಲು ಅಬ್ಬೂರಿಗೆ ಬಂದರಂತೆ. ಬರುವಾಗ ದಾರಿಯಲ್ಲಿ ಚೂಟಿಯಾಗಿ ಓಡಾಡುತ್ತಿದ್ದ ಬಾಲಕ ಲಕ್ಷ್ಮೀನಾರಾಯಣನನ್ನು ನೋಡಿ, ಅವನನ್ನು ತಮ್ಮ ಶಿಷ್ಯನಾಗಿ ಸ್ವೀಕರಿಸಲು ಅಪೇಕ್ಷೆಪಟ್ಟರು. ಅಬ್ಬೂರಿಗೆ ಬಂದವರೇ ಅಲ್ಲಿ ಶ್ರೀ ಪುರುಷೋತ್ತಮ ತೀರ್ಥರ ಸಮೀಪದ್ಲಿ ಸುಳಿದಾಡುತ್ತಿದ್ದ ವರ್ಚಸ್ವಿಬಾಲಕನನ್ನು ಬ್ರಹ್ಮಣ್ಯತೀರ್ಥರನ್ನು

ಕಂಡು ಅಂತಹ ಚೂಟಿಯಾದ ಹುಡುಗನೊಬ್ಬ ತಮ್ಮ ಸಂಸ್ಥಾನಕ್ಕೆ ದೊರೆತರೆ ಒಳ್ಳೆಯದೆಂಬ ಆಸೆಯನ್ನು ವ್ಯಕ್ತಪಡಿಸಿದರು. ಮತ್ತು ತಾವು ದಾರಿಯಲ್ಲಿ ಕಂಡ ಬಾಲಕನ ಬಗ್ಗೆ ವಿವರಿಸಿದರು. ಪುರುಷೋತ್ತಮ ತೀರ್ಥರು ಸ್ವರ್ಣವರ್ಣತೀರ್ಥರ ಗಮನದಲ್ಲಿರುವ ಬಾಲಕ ತಮ್ಮ ಶಿಷ್ಯ ಬ್ರಹ್ಮಣ್ಯತೀರ್ಥರ ಪೂರ್ವಾಶ್ರಮದ ಚಿಕ್ಕಮ್ಮನ ಮಗ ಲಕ್ಷ್ಮೀನಾರಾಯಣನೇ ಇರಬೇಕೆಂದು ಊಹಿಸಿ, ಅವನನ್ನು ಈ ಕೂಡಲೇ ತಮ್ಮ ಬಳಿಗೆ ಕರೆತರಬೇಕೆಂದು ಲಕ್ಷ್ಮೀನಾರಾಯಣನ ತಂದೆತಾಯಿಗಳಾದ ಗಿರಿಯಮ್ಮ-ಶೇಷಗಿರಿ ಆಚಾರ್ಯ ದಂಪತಿಗಳಿಗೆ ಆದೇಶವಿತ್ತರು. ಮಗನೊಂದಿಗೆ ಮಠಕ್ಕೆ ಬಂದ ದಂಪತಿಗಳ ಮನವೊಲಿಸಿದ ಪುರುಷೋತ್ತಮ ತೀರ್ಥರು ಬಾಲಕ ಲಕ್ಷ್ಮೀನಾರಾಯಣನನ್ನು ಸ್ವರ್ಣವರ್ಣತೀರ್ಥರಿಗೆ ಒಪ್ಪಿಸಿದರು. ಸಂತುಷ್ಟರಾದ ಸ್ವರ್ಣವರ್ಣತೀರ್ಥರು ಲಕ್ಷ್ಮೀನಾರಾಯಣ ಹಾಗೂ ಅವನ ತಂದೆ ತಾಯಿಗಳೊಂಧಿಗೆ ಶ್ರೀರಂಗದತ್ತ ಪ್ರಯಾಣ ಬೆಳೆಸಿದರು. ಈಗಲೂ ಬೆಂಗಳೂರು ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನಲ್ಲಿರುವ ಅಬ್ಬೂರಿನಲ್ಲಿ, ಕಣ್ವ ನದಿಯ ದಡದಲ್ಲಿ ಪ್ರಶಾಂತ ಪ್ರಕೃತಿಯ ನಡುವೆ ಶ್ರೀ ಬ್ರಹ್ಮಣ್ಯತೀರ್ಥರ ವೃಂದಾವನವಿದೆ. ಪಕ್ಕದ ಗುಡ್ಡದಲ್ಲಿ ಅವರ ಗುರುಗಳಾದ ಶ್ರೀ ಪುರುಷೋತ್ತಮ ತೀರ್ಥರ ಗುಹೆಯಿದೆ. ಬ್ರಹ್ಮಣ್ಯತೀರ್ಥರು ಮತ್ತು ಶ್ರೀಪಾದರಾಜರು ಅಕ್ಕ-ತಂಗಿಯರ ಮಕ್ಕಳಾದುದರಿಂದ ಶ್ರೀಪಾದರಾಜರು ತಮ್ಮ ಬಾಲ್ಯವನ್ನು ಅಬ್ಬೂರಿನಲ್ಲೇ ಕಳೆದಿರಬೇಕೆಂಬ ವಿದ್ವಾಂಸರ ಊಹೆ ಸಾಧುವಾಗಿದೆ.[1]

ಗುರುಗಳಾದ ಸ್ವರ್ಣವರ್ಣತೀರ್ಥರ ನೇತೃತ್ವದಲ್ಲಿ ಬಾಲಕ ಲಕ್ಷ್ಮೀನಾರಾಯಣನಿಗೆ ಬ್ರಹ್ಮೋಪದೇಶವಾಯಿತು; ಕ್ರಮವದ ವಿದ್ಯಾಭ್ಯಾಸ ಲಭ್ಯವಾಯಿತು. ಸಕಾಲದಲ್ಲಿ ಅವನಿಗೆ ಗುರುಗಳಿಂದ ಸಂನ್ಯಾಸದೀಕ್ಷೆಯಾಗಿ ಬಾಲಕ ಲಕ್ಷ್ಮೀನಾರಾಯಣ 'ಲಕ್ಷ್ಮೀನಾರಾಯಣ ತೀರ್ಥ'ರಾದರು. ಸ್ವರ್ಣವರ್ಣರು ಅವರನ್ನು ತಮ್ಮ ಸಂಸ್ಥಾನದ ಉತ್ತರಾಧಿಕಾರಿಗಳೆಂದು ಘೋಷಿಸಿದರು. ಬಳಿಕ ಉನ್ನತ ವ್ಯಾಸಂಗಕ್ಕಾಗಿ ಅವರನ್ನು ಶ್ರೀ ವಿಭುಧೇಂದ್ರ ತೀರ್ಥರಲ್ಲಿಗೆ ಕಳುಹಿಸಿದರು. ಕಿರಿಯವಯಸ್ಸಿನ ಅತ್ಯುತ್ಸಾಹೀ ಬಾಲಯತಿಗಳಾದ ಲಕ್ಷ್ಮೀನಾರಾಯಣ ತೀರ್ಥರು ವಿಭುಧೇಂದ್ರರಿಂದ ದ್ವೈತಸಿದ್ಧಾಂತವೆಲ್ಲವನ್ನು ಕಲಿತು ಕರತಲಾಮಲಕ ಮಾಡಿಕೊಂಡು ಗುರುಹಿರಿಯರ ವಿಶ್ವಾಸ ಆದರಗಳಿಗೆ ಪಾತ್ರರಾದರು. ಒಮ್ಮೆ ವಿಭುಧೇಂದ್ರರು ತಮ್ಮ ಶಿಷ್ಯರೊಡನೆ ರಾಯಚೂರು ಜಿಲ್ಲೆಯ ದೇವಗಿರಿ ಬಳಿಯ ನೃಸಿಂಹಕ್ಷೇತ್ರವಾದ ಕೊಪ್ರವೆಂಬ ಸ್ಥಳದಲ್ಲಿ ಚಾತುರ್ಮಾಸ್ಯ ಸಂಕಲ್ಪದಲ್ಲಿದ್ದಾಗ, ಅಂದಿನ ಉತ್ತರಾದಿಮಠದ ಗುರುಗಳಾಗಿದ್ದ ಶ್ರೀ ರಘುನಾಥತೀರ್ಥರೂ ಅಲ್ಲಿಗೆ ಬಂದರು. ವಿಭುಧೇಂದ್ರರು ಲಕ್ಷ್ಮೀನಾರಾಯಣರನ್ನು ರಘುನಾಥ ತೀರ್ಥರಿಗೆ ಪರಿಚಯ ಮಾಡಿಕೊಟ್ಟು, ತಮ್ಮ ಶಿಷ್ಯರ ವಿದ್ಯಾಪರಿಶ್ರಮವನ್ನು ಪರಿಶೀಲಿಸಿ ಆಶೀರ್ವದಿಸಲು ಕೋರಿದರು. ಮಾರನೆಯ ಕೊಪ್ರದಲ್ಲಿ ಇಬ್ಬರು ಯತಿಗಳ ಸಮ್ಮುಖದಲ್ಲಿ ವಿದ್ವಾಂಸರ ಸಭೆ ಸೇರಿತು. ಆ ವಿದ್ವತ್ಸಭೆಯಲ್ಲಿ ರಘುನಾಥ ತೀರ್ಥರು ಟೀಕಾಚಾರ್ಯರ 'ನ್ಯಾಯಸುಧೆ'ಯಲ್ಲಿಯ ಒಂದು ವಾಕ್ಯವನ್ನು ಲಕ್ಷ್ಮೀನಾರಾಯಣ ತೀರ್ಥರ ಮುಂದಿರಿಸಿ ವ್ಯಾಖ್ಯಾನ ಮಾಡುವಂತೆ ಆದೇಶಿಸಿದರು. ಲಕ್ಷ್ಮೀನಾರಾಯಣ ತೀರ್ಥರು ಆ ವಾಕ್ಯಾರ್ಥದ ನೆಪದಲ್ಲಿ ಇಡೀ ಗ್ರಂಥವನ್ನೇ ಹೊಸರೀತಿಯಲ್ಲಿ, ವಿದ್ವತ್ಪೂರ್ಣವಾಗಿ ವ್ಯಾಖ್ಯಾನ ಮಾಡಿ ತಮ್ಮ ವಿದ್ವತ್ತನ್ನು ಸಾಬೀತುಪಡಿಸಿದರು. ಬಾಲಯತಿಗಳ ವಿದ್ವತ್ತಿನ ಪ್ರಖರತೆ ಶ್ರೀ ರಘುನಾಥತೀರ್ಥರಿಗೆ ಅತ್ಯಾನಂದವನ್ನುಂಟು ಮಾಡಿತು; ಅವರನ್ನು ಮನಸಾರ ಹೊಗಳಿದರು. ಲಕ್ಷ್ಮೀನಾರಾಯಣ ತೀರ್ಥರು ವಿನಯಪೂರ್ವಕವಾಗಿ ಅಂತಹ ಶ್ರೀಪಾದರ ಅನುಗ್ರಹ್ಕೆ ಪಾತ್ರರಾದ ತಾವು ಪುಣ್ಯಶಾಲಿಗಳೆಂದು ಬಿನ್ನವಿಸಲು ಶ್ರೀಗಳವರು 'ನಾವು ಶ್ರೀಪಾದರಾದರೆ ನೀವು 'ಶ್ರೀಪಾದರಾಜರು'-ಎಂದು ಕೊಂಡಾಡಿದರಂತೆ. ಈ ಘಟನೆ ಭೀಮಾಚಾರ್ಯ ವಿರಚಿತ 'ಶ್ರೀ ಪೂರ್ಣಬೋಧ ಗುರುವಂಶ ಕಲ್ಪತರು'-ಎಂಬ ಗ್ರಂಥದಲ್ಲಿ ರಘುನಾಥ ತೀರ್ಥರು "ಶ್ರೀಪಾದಾ ಏವಭೋ ವಯಮ್ ಯೂಯಂ ಶ್ರೀಪಾದರಾಜಾಸ್ತು ಪಾಂಡಿತ್ಯಾತಿಶಯಾನ್ವಿತಾಃ'- ಎಂಬುದಾಗಿ ಹೇಳಿದರೆಂದು ಉಲ್ಲೇಖಗೊಂಡಿದೆ. ಅಲ್ಲಿಂದ ಮುಂದೆ ಯತಿಗಳು 'ಶ್ರೀಪಾದರಾಜ'ರೆಂದೇ ಖ್ಯಾತರಾದರು. ಹೀಗೆ ಕೆಲಕಾಲ ಸಂಚಾರಾರ್ಥವಾಗಿ ತಮ್ಮ ವಿದ್ಯಾ ಗುರುಗಳೊಂದಿಗೆ ತೆರಳಿದ್ದ ಶ್ರೀಪಾದರಾಜರು ಸಂಚಾರವನ್ನು ಮುಗಿಸಿ ಪುನಃ ಶ್ರೀರಂಗಕ್ಕೆ, ತಮ್ಮ ಗುರುಗಳಾದ ಸ್ವರ್ಣವರ್ಣತೀರ್ಥರು ವೃಂದಾವನಸ್ಥರಾದ ಬಳಿಕ ಶ್ರೀಪಾದರಾಜರು ಆ ಸಂಸ್ಥಾನದ ಎಂಟನೆಯ ಪೀಠಾಧಿಪತಿಗಳಾಗಿ ಅಧಿಕಾರ ವಹಿಸಿಕೊಂಡರು. ಬಳಿಕ ಅವರು ಶ್ರೀರಂಗದಲ್ಲಿಯೇ ಕೆಲವು ವರ್ಷಗಳನ್ನು ಕಳೆದಿರಬಹುದು. ಶ್ರೀರಂಗದ ರಂಗನಾಥಸ್ವಾಮಿ ಅವರ ಇಷ್ಟದೈವ. 'ಕಂಗಳಿದ್ಯಾತಕೋ ಕಾವೇರಿ ರಂಗನ ನೋಡದ'- ಎನ್ನುವ ಸಮರ್ಪಣ ಮನೋಭಾವದಿಂದ ರಂಗವಿಠಲ ಅಂಕಿತದಲ್ಲೇ ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿ ಹಾಡಿದವರು ಶ್ರೀಪಾದರಾಜರು. ಅಲ್ಲಿಂದ ಸಂಚಾರ ಹೊರಟವರು ಕೋಲಾರದ ಮುಳುಬಾಗಿಲಿಗೆ ಬಂದು ಅಲ್ಲಿಯ ಪ್ರಶಾಂತ ಪ್ರಕೃತಿಯ ಸಿರಿಗೆ ಮಾರುಹೋಗಿ ಅಲ್ಲಿಯ ನೃಸಿಂಹತೀರ್ಥದ ಸನ್ನಿಧಿಯಲ್ಲಿ ತಮ್ಮ ಮಠವನ್ನು ಸ್ಥಾಪಿಸಿದರು. ಮಧ್ವಾಚಾರ್ಯರ ನೇರ ಶಿಷ್ಯರಾದ ಪದ್ಮನಾಭತೀರ್ಥರ ಪೀಳಿಗೆಯ ಮಠವಾದ ಆ ಮುಳುಬಾಗಿಲ ಮಠ ಇಂದಿಗೂ

'ಶ್ರೀಪಾದರಾಜಮಠ'ವೆಂದೇ ಪ್ರಸಿದ್ಧವಾಗಿದೆ. ವಿಜಯನಗರದ ಅರಸರ ಆಡಳಿತಕ್ಕೆ ಒಳಪಟ್ಟಿದ್ದ ಮುಳುಬಾಗಿಲು ಶ್ರೀ ಮಧ್ವಚಾರ್ಯರ ನೇರಶಿಷ್ಯರಲ್ಲಿ ಮತ್ತೊಬ್ಬರಾದ ಶ್ರೀ ಅಕ್ಷೋಭ್ಯತೀರ್ಥರು ಅಂಗಾರದಿಂದ ಯೋಗಾನರಸಿಂಹನನ್ನು ಬರೆದ ಪವಿತ್ರಕ್ಷೇತ್ರವೆಂದು ಪರಿಗಣಿತವಾಗಿದ್ದುದಲ್ಲದೆ ಅವರು ಶ್ರೀವಿದ್ಯಾರಣ್ಯರೊಂದಿಗೆ ವಾದಮಾಡಿ ಜಯಿಸಿದ್ದ ಪುಣ್ಯಭೂಮಿಯೂ ಆಗಿತ್ತೆಂಬುದು ಗಮನಾರ್ಹ. ಕೌಂಡಿನ್ಯ ಮುನಿಗಳು ತಪಸ್ಸು ಮಾಡಿದ ಪುಣ್ಯಭೂಮಿಯದು. ಪುತ್ರಕಾಮ್ಯಾರ್ಥವಾಗಿ ಅಂಜನಾದೇವಿ ತಪಸ್ಸು ಮಾಡಿದಳೆನ್ನುವ ಅಂಜನಾದ್ರಿಯಿರುವುದೂ ಅಲ್ಲಿಯೇ. ಕಪಿಧ್ವಜನಾದ ಅರ್ಜುನನು ಮಹಾಭಾರತ ಯುದ್ಧಾ ನಂತರ ತನ್ನ ರಥಾಗ್ರದಲ್ಲಿದ್ದ ಹನುಮಂತನನ್ನು ಮುಳುಬಾಗಿಲಿನಲ್ಲಿಯೇ ಪ್ರತಿಷ್ಠಾಪಿಸಿದ್ದೆಂದು ಸ್ಥಳಪುರಾಣ ಹೇಳುತ್ತದೆ. ಅಗಸ್ತ್ಯಮುನಿಗಳು ಪ್ರತಿಷ್ಠಾಪಿಸಿದ ಅಗಸ್ತ್ಯೇಶ್ವರನ ದರ್ಶನವೂ ಅಲ್ಲಿ ನಮಗಾಗುತ್ತದೆ. ಇಂತಹ ಪುಣ್ಯ ಕ್ಷೇತ್ರದಲ್ಲಿ ಶ್ರೀಪಾದರಾಜರು ನೆಲೆನಿಂತ ಬಳಿಕ ಮುಳುಬಾಗಿಲು ದ್ವೈತದರ್ಶನದ ಮಹಾವಿಶ್ವವಿದ್ಯಾನಿಲಯವೂ ಆಗಿ ಖ್ಯಾತಿಪಡೆಯಿತು. ಅಲ್ಲಿ ಪಾಂಡಿತ್ಯ ವಿದ್ವತ್ತುಗಳ ಗಳಿಕೆಯೊಂದಿಗೇ ಸಮಾಜೋದ್ಧಾರದ ಚಿಂತನೆಯನ್ನು ಮಾಡಿದ ಪರಮ ಗುರುಗಳು, ಅಪೂರ್ವ ಯತಿವರ್ಯರು ಶ್ರೀಪಾದರಾಜರು.

ಮುಳುಬಾಗಿಲಿನ 'ಶ್ರೀ ಪಾದರಾಜ ಮಠ'ದ ಖ್ಯಾತಿಯನ್ನರಿತ ಶ್ರೀವ್ಯಾಸತೀರ್ಥರು ಹೆಚ್ಚಿನ ವ್ಯಾಸಂಗಕ್ಕಾಗಿ ಅಲ್ಲಿಗೆ ಬಂದರು. ಅಬ್ಬೂರಿನ ಬ್ರಹ್ಮಣ್ಯತೀರ್ಥರಿಂದ ಬಾಲ್ಯದಲ್ಲಿಯೇ ಸನ್ಯಾಸಪಡೆದು ಅವರ ಪೀಠಕ್ಕೆ ಉತ್ತರಾಧಿಕಾರಿಗಳಾಗಿದ್ದವರು ಶ್ರೀವ್ಯಾಸತೀರ್ಥರು. ಕೆಲವು ಕಾಲು ಮುಳುಬಾಗಿಲಿನಲ್ಲಿಯೇ ಇದ್ದು ಶ್ರೀಪಾದರಾಜರಲ್ಲಿ ವಿದ್ಯಾಭ್ಯಾಸ ಮಾಡಿದರು. ಜಗತ್ತು ಕಂಡ ಅಪೂರ್ವ ಗುರು-ಶಿಷ್ಯ ಸಂಬಂಧಗಳಲ್ಲಿ ಇವರದೂ ಒಂದು. ಅವರ ಪರಸ್ಪರ ಪ್ರೀತಿ ವಾತ್ಸಲ್ಯಗಳು ಅಸದೃಶ ಹಾಗೂ ಅನುಕರಣೀಯ. ವ್ಯಾಸರಾಯರು ತಮ್ಮ ಗುರುಗಳಾದ ಶ್ರೀಪಾದರಾಜರನ್ನು ಕುರಿತು ರಚಿಸಿರುವ ಕನ್ನಡದ ಎರಡು ಪ್ರತ್ಯೇಕ ಕೀರ್ತನೆಗಳು ಮತ್ತು ಸಂಸ್ಕೃತದ 'ಪಂಚರತ್ನ ಮಾಲಿಕೆ'- ಎಂಬ ಸ್ತುತಿಯೂ ಅವರ ಜೀವನ ವಿಚಾರಗಳನ್ನು ತಿಳಿಸುವ ಸಮಕಾಲೀನ ಹಾಗೂ ಮಹತ್ವದ ದಾಖಲೆಗಳಾಗಿವೆ:

*ವಾದಿಗಜ ಮಸ್ತಕಾಂಕುಶ ಸುಜನ ಬುಧಗೇಯ*
*ಮೇದಿನೀಸುರ ವಂದ್ಯ ಶ್ರೀಪಾದರಾಯ* ||ಪ||

*ಸಕಲಶಾಸ್ತ್ರಕಲಾಪ ಸಂನ್ಯಾಸಕುಲದೀಪ*
*ಸಕಲ ಸತ್ಯಸ್ಥಾಪ ಸುಜ್ಞಾನದೀಪ*
*ಪ್ರಕಟ ಪಾವನರೂಪ ಅರಿಕುಜನಮತ ಲೋಪ*
*ನಿಕಟ ವರ್ಜಿತ ಪಾಪ ಕೀರ್ತಿಪ್ರತಾಪ* ||೧||

*ಹರಿಪಾದಾಂಬುಜ ಭೃಂಗ ಪರಮತಾಹಿ ವಿಹಂಗ*
*ಪರಮ ಸುಗುಣಾಂರಂಗ ಭವದುರಿತಭಂಗ*
*ಶರಣ ಕೀರ್ತಿತರಂಗ ಶತ್ರುತಿಮಿರ ಪತಂಗ*
*ಶರಣು ಶುಭಚರಿತಾಂಗ ಷಟ್ಶಾಸ್ತ್ರ ಸಂಗ* ||೨||

*ಸಿರಿಕೃಷ್ಣ ದಿವ್ಯ ಪಾದಾಬ್ಜ ಚಿಂತಾಲೋಲ*
*ವರ ಹೇಮವರ್ಣ ಮುನಿಪತಿಯ ಸುಕುಮಾರ*
*ಗುರುಕಲುಲತಿಲಕ ಶ್ರೀಪಾದರಾಯ ಅಮಿತೋದ್ಧಾರ*
*ಶರಣಜನ ಸುರಧೇನು ಭಕ್ತಮಂದಾರ* ||೩||

ಶ್ರೀಪಾದರಾಜರ ಹರಿಭಕ್ತಿ, ಮಾಧ್ವಮತನಿಷ್ಠೆ, ವಿದ್ವತ್ತು, ಸಜ್ಜನಿಕೆ, ಸೌಜನ್ಯ, ದಯಾಪರತೆ, ಶ್ರೇಷ್ಠೆ-ಎಲ್ಲವೂ ಈ ಕೀರ್ತನೆಯಲ್ಲಿ ಹೆಪ್ಪುಗಟ್ಟಿವೆ. ಶ್ರೀಪಾದರಾಜರು 'ಹೇಮ' ವರ್ಣ ತೀರ್ಥರ 'ಸುಕುಮಾರ'ರೆಂಬ ಹೇಳಿಕೆ ಗಮನಾರ್ಹವಾದುದು. ಸ್ವರ್ಣವರ್ಣತೀರ್ಥರು

ಶ್ರೀಪಾದರಾಜರ ದೀಕ್ಷಾಗುರುಗಳೆಂಬ ವಿಚಾರ ವ್ಯಾಸರಾಯರ ಬಾಯಿಂದಲೇ ಬಂದಿದೆ. ಮತ್ತೊಂದು ಕೀರ್ತನೆಯಲ್ಲಿ ಶ್ರೀಪಾದರಾಜರ ಜೀವನದ ಕೆಲವು ಪವಾಡ ಸದೃಶ ಘಟನೆಗಳನ್ನು ಪ್ರಸ್ತಾಪಿಸಲಾಗಿದೆ.

*ಮಹಿಮೆ ಸಾಲದೆ ಇಷ್ಟೇ ಮಹಿಮೆ ಸಾಲದೆ ॥ಪ॥*

*ಅಹಿಶಯನನ ಒಲುಮೆಯಿಂದ*
*ಮಹಿಯೊಳೆಮ್ಮ ಶ್ರೀಪಾದರಾಯರ ॥ಅ.ಪ॥*

*ಮುತ್ತಿನಕವಚ ಮೇಲ್ಕುಲಾವಿ*
*ರತ್ನಕೆತ್ತಿದ ಕರ್ಣಕುಂಡಲ*
*ಕಸ್ತೂರಿತಿಲಕ ಶ್ರೀಗಂಧಲೇಪನ*
*ವಿಸ್ತಾರದಿಂದ ಮೆರೆದುಬರುವ ॥೧॥*

*ವಿಪ್ರಹತ್ಯ ದೋಷ ಬರಲು*
*ಕ್ಷಿಪ್ರ ಶಂಖೋದಕದಿ ಕಳೆಯೆ*
*ಅಪ್ರಬುದ್ಧರು ದೂಷಿಸೆ ಗೇರೆಣ್ಣೆ*
*ಕಪ್ಪುವಸನ ಶುಭ್ರಮಾಡಿದ ॥೨॥*

*ಹರಿಗೆ ಸಮರ್ಪಿಸಿದ ನಾನಾ*
*ಪರಿಯ ಶಾಕಗಳನು ಭುಂಜಿಸೆ*
*ನರರು ನಗಲು ಶ್ರೀಶ ಕೃಷ್ಣನ*
*ಕರುಣದಿಂದ ಹಸಿಯ ತೋರಿದ ॥೩॥*

-ಶ್ರೀಪಾದರಾಜರ ಹಿರಿಯ ವ್ಯಕ್ತಿತ್ವವನ್ನು ಸಾರುವ ಕೀರ್ತನೆಯಿದು, ಅವರು ಸಿದ್ಧಪುರುಷರೆಂಬುದನ್ನು ಇಲ್ಲಿ ಸಮರ್ಥಿಸಿದೆ. ಅವರ ಮಹಿಮೆಯನ್ನು ತಿಳಿಯದೆ ಅವರನ್ನು ಹಂಗಿಸಿ, ಆಡಿಕೊಂಡ ಜನರಿಗೆ ವ್ಯಾಸರಾಯರು ಉತ್ತರಿಸಿದ ರೀತಿಯಿಂದಾಗಿರಬಹುದು. ಇದರ ಹಿಂದೆ ಪ್ರಚಲಿತವಿರುವ ಕಥೆಯೊಂದುಂಟು. ವ್ಯಕ್ತಿಯೊಬ್ಬನಿಗೆ ಒದಗಿದ್ದ ಬ್ರಹ್ಮಹತ್ಯಾದೋಷವ್ನು ಶ್ರೀಪಾದರಾಜರು ತಮ್ಮ ಶಂಖೋದಕ ಪ್ರೋಕ್ಷಣೆಯ ಮೂಲಕ ಹೋಗಲಾಡಿಸಿದ್ದರಂತೆ. ಅದನ್ನು ಕಂಡು ಕುಹಕಿಗಳು ಆಡಿಕೊಂಡು ನಕ್ಕಾಗ ಶ್ರೀಪಾದರಾಜರು ಅವರ ಎದುರಿನಲ್ಲೇ ಬಿಳಿಬಟ್ಟೆಯೊಂದನ್ನು ಗೇರೆಣ್ಣೆಯಲ್ಲಿ ಅದ್ದಿ ಅನಂತರ ಅದರ ಕಪ್ಪನ್ನು ಶಂಖೋದಕದ ಮೂಲಕ ಹೋಗಲಾಡಿಸಿದರಂಎ. ಈ ವಿಚಾರ ಕರ್ಣಾಕರ್ಣಿಕೆಯಾಗಿ ಹಬ್ಬಿ ಅಂದಿನ ವಿಜಯನಗರದ ರಾಜಪ್ರತಿನಿಧಿಯಾಗಿದ್ದ ಸಾಳುವ ನರಸಿಂಹನ ಕಿವಿಗೂ ಬಿದ್ದು, ಅವನು ಶ್ರೀಪಾದರಾಜರನ್ನು ಕಂಡು, ಅವರಿಗೆ ರಾಜಮನ್ನಣೆಯಿತ್ತು ಗೌರವಿಸಿದನಂತೆ. ಕಾರಣ ಸಾಳುವ ನರಸಿಂಹನೂ ಬ್ರಹ್ಮಹತ್ಯಾದೋಷದಿಂದ ಪರಿತಪಿಸುತ್ತಿದ್ದುದು. ತಿರುಪತಿ ದೇವಸ್ಥಾನದ ಅರ್ಚಕನು ದೇವಸ್ಥಾನದ ಪರಿಶುದ್ಧತೆಗೆ ಭಂಗ ಬರುವ ರೀತಿಯಲ್ಲಿ ವರ್ತಿಸುತ್ತಾ ಹಲವು ದುಷ್ಕಾರ್ಯಗಳನ್ನು ಮಾಡುತ್ತಿದ್ದನು. ತಿರುಪತಿ ತಿಮ್ಮಪ್ಪನ ಭಕ್ತನಾಗಿದ್ದ ನರಸಿಂಹನಿಗೆ ಅದನ್ನು ನೋಡಿ ಸಹಿಸಲಾಗಲಿಲ್ಲ. ಅವನು ಆ ಅರ್ಚಕನನ್ನೂ ಅವನ ಸಂತತಿಯನ್ನೂ ನಿರ್ನಾಮಗೊಳಿಸಿದನೆಂದು ಪ್ರತೀತಿ. ಅದೆ ವೇಳೆಗೆ ಯತಿಗಳಾದ ಶ್ರೀಪಾದರಾಜರ ಮಹಿಮೆ ನರಸಿಂಹನ ಕಿವಿಗೆ ಬಿದ್ದು, ಅವನು ತನ್ನ ಬ್ರಹ್ಮ ಹತ್ಯಾದೋಷವನ್ನು ಪರಿಹರಿಸಿಕೊಳ್ಳುವ ಯೋಚನೆ ಮಾಡಿದ್ದಿರಬೇಕು. ನರಸಿಂಹನು ಯತಿಗಳನ್ನು ಕಂಡು ತನ್ನ ಅಳಲನ್ನು ಅವರ ಮುಂದೆ ತೋಡಿಕೊಂಡಾಗ ಭವದುರಿತ ಭಂಗರೂ ಪರಮಕರುಣಾಂತರಂಗರೂ ಆದ ಅವರು ಅವನಿತಗೆ ಧರ್ಮಸೂಕ್ಷ್ಮ ಬೋಧಿಸಿ ಸಮಾಧಾನಪಡಿಸಿದರೆಂದು ಕಾಣುತ್ತದೆ. ಬಳಿಕ ಆ ಮಂಡಲಾಧಿಪತಿ ಶ್ರೀಪಾದರಾಜರನ್ನು ತನ್ನ ಸಿಂಹಾಸನದಲ್ಲಿ ಕೂಡಿಸಿ, ರಾಜಗುರುಗಳೆಂದು ಕರೆದು ರಾಜ ಮರ್ಯಾದೆಯಿತ್ತು ಗೌರವಿಸಿ ಮನ್ನಣೆಯಿತ್ತನು. ಮತ್ತು ಕೊನೆಯವರೆಗೂ ತನ್ನ ಬಳಿಯಲ್ಲೇ ಇದ್ದುಬಿಡುವಂತೆ ಬಿನ್ನವಿಸಿದನು. ಆದರೆ

ಮುಳುಬಾಗಿಲಿನ ವಿದ್ಯಾಕೇಂದ್ರದ ಕರ್ತವ್ಯದ ಕರೆ ಅವರನ್ನು ಕೈಬೀಸಿ ಕರೆಯುತ್ತಿತ್ತು. ಉತ್ತರ ಭಾರತದ ಪ್ರವಾಸದಿಂದ ಹಿಂತಿರುಗಿದ್ದ ತಮ್ಮ ಶಿಷ್ಯ ವ್ಯಾಸರಾಯರನ್ನು ಒಪ್ಪಿಸಿ, ಸಾಳುವ ನರಸಿಂಹನ ಹಿತವನ್ನೂ ವಿಜಯನಗರದ ಭವಿಷ್ಯವನ್ನೂ ಅವರ ಕೈಗೆ ಒಪ್ಪಿಸಿದ ಶ್ರೀಪಾದರಾಜರು ಮತ್ತೆ ಮುಳುಬಾಗಿಲಿಗೆ ಹಿಂತಿರುಗಿದರು. ತಮ್ಮ ಗುರುಗಳ ಜೀವನದಲ್ಲಿ ನಡೆದ ಈ ಸಂಗತಿಗಳನ್ನು ತಮ್ಮ ಪೂರ್ವೋಕ್ತ ಕೀರ್ತನೆಯ ಮೊದಲ ಎರಡು ನುಡಿಗಳಲ್ಲಿ ಹೇಳಿ ಉಪಕರಿಸಿದ್ದಾರೆ. ವ್ಯಾಸರಾಯರು, ತಮ್ಮ ಪಂಚರತ್ನ ಮಾಲಿಕೆಯಲ್ಲಿಯೂ:

*ಬಿಭ್ರಾಣಂ ಕ್ಷೌಮವಾಸಃ ಕರಧೃತವಲಯಂ ಹಾರಕೇಯೂರ ಕಾಂಚೀ*
*ಗ್ರೈವೇಯ ಸ್ವರ್ಣಮಾಲಾ ಮಣಿಗಣ ಖಚಿತಾನೇಕ ಭೂಷಾ ಪ್ರಕರ್ಷಮ್*
*ಭುಂಜಾನಂ ಷಷ್ಟಿಶಾಕಂ ಹಯಗಜ ಶಿಬಿಕಾನರ್ಘ್ಯ ಶಯ್ಯಾರಥಾಢ್ಯೈರ್ಯ*
*ವಂದೇ ಶ್ರೀಪಾದರಾಜಂ ತ್ರಿಭುವನ ವಿದಿತಂ ಘೋರದಾರಿದ್ಯ ಶಾಂತ್ಯೈ॥*

-ಎಂದು ಮುಂತಾಗಿ ಸುಖಪ್ರಾರಬ್ಧಿಗಳೆನ್ನಿಸಿಕೊಂಡಿರುವ ಶ್ರೀಪಾದರಾಜರ ರಾಜ ವೈಭವವನ್ನು ವರ್ಣಿಸಿದ್ದಾರೆ. ಶ್ರೀಪಾದರಾಜರು ಎಲ್ಲೇ ಇರಲಿ ಪ್ರತಿದಿನ ಅಭ್ಯಂಗನ ಮಾಡಿ, ಅರುವತ್ತು ಬಗೆಯ ಶಾಕಾಹಾರವನ್ನು ಶ್ರೀಹರಿಗೆ ನೈವೇದ್ಯ ಮಾಡಿ, ಪ್ರಸಾದರೂಪವಾಗಿ ಅವುಗಳನ್ನು ತಾವು ಸ್ವೀಕರಿಸುತ್ತಿದ್ದರಂತೆ. ಶ್ರೀಪಾದರಾಜಮಠದ ಯತಿಪರಂಪರೆಗೆ ಸೇರಿದ ಶ್ರೀನಿಧಿತೀರ್ಥರು ತಮ್ಮ 'ಶ್ರೀಪಾದರಾಜಾಷ್ಟಕ'ದಲ್ಲಿ, ದೊರೆ ನರಸಿಂಹನು ಶ್ರೀಪಾದರಾಜರನ್ನು ಗೌರವಿಸಿದ ಪರಿಯನ್ನು ಹೀಗೆ ವರ್ಣಿಸುತ್ತಾರೆ:

*ಶ್ರೀಮದ್ವೀರ ನೃಸಿಂಹನಾಮ ನೃಪತೇರ್ಭೂದೇವಹತ್ಯಾ ವ್ಯಥಾಂ*
*ದೂರೀಕೃತ್ಯ ತದರ್ಪಿಕೋಜ್ವಲ ಮಹಾ ಸಿಂಹಾಸನೇ ಸಂಸ್ಥಿತಃ*

ವ್ಯಾಸರಾಯರು ತಮ್ಮ ಗುರುಗಳಿಗೆ ಹೀಗೆ ಗೌರವಾದರಗಳನ್ನು ಸಮರ್ಪಿಸಿದ್ದರೆ ಗುರುಗಳಾದ ಶ್ರೀಪಾದರಾಜರು ತಮ್ಮ ಶಿಷ್ಯ ವ್ಯಾಸರಾಯರನ್ನು, ಅವರ ಸಂನ್ಯಾಸದ ರೀತಿಯನ್ನು

*'ಸಾಸಿರ ಜಿಹ್ವೆಗಳುಳ್ಳ ಶೇಷನೇ ಕೊಂಡಾಡಬೇಕು*
*ವ್ಯಾಸಮುನಿರಾಯರ ಸಂನ್ಯಾಸದಿರವ ॥ಪ॥*

……

*ಕೆರೆ ಬಾವಿ ಪುರ ಅಗ್ರಹಾರಂಗಳ ಮಾಡಿ ಭೂ*
*ಸುರರೊಂದು ಲಕ್ಷ ಕುಟುಂಬಗಳ*
*ಪೊರೆವ ವೈಭವ ಕೀರ್ತಿಯಿಂದಲಿ ವ್ಯಾಸರಾ*
*ಯರ ಗುಣಗಣ ಗಾಂಭೀರ್ಯಾದಿಗಳ ॥೧॥*

*ಹಗಲಿರುಳೆನ್ನದೆ ಆವಾಗ ಶ್ರೀಹರಿ ಪದಪದ್ಮ*
*ಯುಗಳವನರ್ಚಿಸಿ ಭಕುತಿಯಿಂದ*
*ರಘುಪತಿ ಭಜಕ ಬ್ರಹ್ಮಣ್ಯತೀರ್ಥರ ಕುವರ*
*ರಂಗವಿಠಲನನ್ನು ಬಿಡೆಬಿಡೆನು ಎಂಬ ॥೨॥*

-ಸಾರ್ವಜನಿಕರಿಗಾಗಿ ಕೆರೆ ಬಾವಿ ಪುರ ಅಗ್ರಹಾರಗಳನ್ನು ಕಟ್ಟಿಸಿ, ಲಕ್ಷಾಂತರ ಕುಟುಂಬಗಳಿಗೆ ಆಸರೆಯಾಗಿ ನಿಂತ ವ್ಯಾಸರಾಯರ ಸಾಮಾಜಿಕ ಕಾರ್ಯಕ್ಷಮತೆಯೊಂದಿಗೆ ಆಧ್ಯಾತ್ಮಸಾಧನೆಯ ರೀತಿಯನ್ನೂ ಪ್ರೀತಿಯಿಂದ ಬಣ್ಣಿಸುತ್ತಾರೆ. ಪ್ರಪಂಚಕ್ಕೆ ಅಂಟಿಯೂ

ಅಂಟದಂತೆ ಇರುವ ಅವರ ಸಂನ್ಯಾಸದ ರೀತಿಯನ್ನು ವರ್ಣಿಸಲು ನರನಾಲಿಗೆಗಳಿಗೆ ಸಾಧ್ಯವಿಲ್ಲ; ಸಾವಿರ ನಾಲಿಗೆಗಳನ್ನುಳ್ಳ ಆದಿಶೇಷನೇ ಕೊಂಡಾಡಬೇಕು ಎಂದಿರುವರು. ಇನ್ನೊಂದು ಕೀರ್ತನೆಯಲ್ಲಿ ಶಿಷ್ಯನ ಪಾಂಡಿತ್ಯ, ಪ್ರೌಢಿಮೆಗಳನ್ನು ಕುರಿತು:

*ಇದಿರದಾವನು ನಿನಗೀ ಧರೆಯೊಳು*
*ಪದುಮನಾಭವ ದಾಸ ಪರಮೋಲ್ಲಾಸಾ ||ಪ||*

*ವಾದಿತಿಮಿರ ಮಾರ್ತಾಡನೆಂದೆನಿಸಿದ*
*ವಾದಿಶರಭ ಭೇರುಂಡ ವ್ಯಾಸರಾಯಾ||೧||*

*ಯತಿಗಳೊಳಗೆ ಮಾರ್ತಾಂಡನೆಂದೆನಿಸಿದೆ*
*ಪ್ರತಿಗಾಣೆನು ಈ ಕ್ಷಿತಿಯೊಳು ಯತಿರಾಯಾ ||೨||*

-ಎಂದು ಮುಂತಾಗಿ ಹಾಡಿರುವರು. ಶಿಷ್ಯನನ್ನು ಕುರಿತ ಶ್ರೀಪಾದರಾಜರ ಇಂಥ ಮಾತುಗಳು ಅವರ ಹೃದಯವೈಶಾಲ್ಯವನ್ನು, ಮುಕ್ತಮನಸ್ಸನ್ನು, ಔದಾರ್ಯಗುಣವನ್ನು, ಶಿಷ್ಯ ವಾತ್ಸಲ್ಯವನ್ನು, ಪರಿಶುದ್ಧ ಹೃದಯವಂತಿಕೆಯನ್ನೂ ಬಿಂಬಿಸುತ್ತವೆ. ನಿಜಕ್ಕೂ ಇದು ಬಹಳ ದೊಡ್ಡ ಗುಣ; ಅಪರೂಪದ ಅಪೂರ್ವಮನಸ್ಸು.

ಶ್ರೀಪಾದರಾಜರು ತಮ್ಮ ಸಂಸ್ಥಾನದ ಪೂಜಾಕಾರ್ಯವನ್ನು ಕೂಡಾ ಶಿಷ್ಯ ವ್ಯಾಸರಾಯರಿಗೆ ವಹಿಸುತ್ತಿದ್ದರಂತೆ. ಒಮ್ಮೆ ಹಾಗೆ ಒಪ್ಪಿಸಿದ್ದಾಗ ವ್ಯಾಸರಾಯರು ಪೂಜೆಗೆ ಕುಳಿತರು. ಅಲ್ಲಿದ್ದ ಸಂಪುಟಗಳನ್ನೆಲ್ಲ ಒಂದೊಂದಾಗಿ ತೆರೆದು ಅವುಗಳೊಳಗಿದ್ದ ಮೂರ್ತಿಗಳನ್ನು ಪೂಜೆಗೆ ಅಣಿಗೊಳಿಸಿ ಇಟ್ಟುಕೊಂಡರು. ವಿಶೇಷವೆಂದರೆ ಅಲ್ಲಿದ್ದ ಒಂದು ಸಂಪುಟದ ಮುಚ್ಚಳವನ್ನು ಅಂದಿನವರೆಗೆ ಯಾರೂ ತೆರೆದಿರಲಿಲ್ಲವಂತೆ. ವ್ಯಾಸರಾಯರು ಆ ವಿಶಿಷ್ಟ ಸಂಪುಟದ ಮುಚ್ಚಳವನ್ನು ತೆರೆಯುತ್ತಲೇ ಒಳಗಿದ್ದ ವೇಣುಗೋಪಾಲನ ಮೂರ್ತಿ ಕೊಳಲನ್ನೂದುತ್ತಾ ಕುಣಿಯಲಾರಂಭಿಸಲು ಆನಂದಪರವಶರಾದ ವ್ಯಾಸರಾಯರು ಅಲ್ಲಿದ್ದ ಸಾಲಿಗ್ರಾಮಗಳನ್ನೆತ್ತಿಒಂಡು ತಾಳಗಳಂತೆ ಬಡಿಯುತ್ತಾ ತಾವೂ ನರ್ತಿಸಲಾರಂಭಿಸಿದರು. ವ್ಯಾಸರಾಯರ ಪೂಜೆಯ ಪರಿಯನ್ನು ಕಂಡು ಮಠದವರೆಲ್ಲ ಶ್ರೀಪಾದರಾಜರಲ್ಲಿಗೆ ಹೋಗಿ ನಿವೇದಿಸಿಕೊಳ್ಳಲು ಅವರು ಸ್ವತಃ ಪೂಜೆ ನಡೆಯುತ್ತಿದ್ದ ಸ್ಥಳಕ್ಕೆ ಬಂದು ಕುಣಿಯುತ್ತಿದ್ದ ವೇಣುಗೋಪಾಲನನ್ನೂ ಶಿಷ್ಯ ವ್ಯಾಸರಾಯರನ್ನೂ ಕಂಡು ಮೂಕವಿಸ್ಮಿತರಾದರು. ಗುರುಗಳ ದೃಷ್ಟಿ ಬೀಳುತ್ತಿದ್ದಂತೆಯೇ ವೇಣುಗೋಪಾಲ ತಟಸ್ಥನಾಗಿ ನಿಂತು ಬಿಟ್ಟನು; ಆ ಸಮಯದಲ್ಲಿ ಬಲಗಾಲಿನ ಮೇಲೆ ಎಡಗಾಲನ್ನಿಟ್ಟು ನರ್ತಿಸುತ್ತಿದ್ದ ಗೋಪಾಲ ಅದೇ ಭಂಗಿಯಲ್ಲಿ ನಿಂತುಬಿಟ್ಟನೆಂಬುದು ಭಕ್ತರ ಬಲವಾದ ನಂಬಿಕೆ. ಸಾಮಾನ್ಯವಾಗಿ ಈ ಭಂಗಿಯ ವೇಣುಗೋಪಾಲಮೂರ್ತಿ ಇರುವುದಿಲ್ಲ; ಎಡಗಾಲ ಮೇಲೆ ಬಲಗಾಲನ್ನಿಟ್ಟು ಕೊಳಲೂದುತ್ತಿರುವ ಭಂಗಿಯನ್ನೇ ಎಲ್ಲೆಡೆ ಕಾಣುವುದು. ಅಪರೂಪದ ಭಂಗಿಯಲ್ಲಿ ನರ್ತಿಸುತ್ತಿರುವ ಗೋಪಾಲಕೃಷ್ಣನನ್ನು ಗುರುಶಿಷ್ಯರ ಭಕ್ತಿಭರಿತ ಭಾವುಕ ಕಣ್ಣುಗಳು ಕಂಡಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಭಕ್ತಿಯೆಂಬುದು ಅಂತಹ ವಿಶಿಷ್ಟ ಮನೋವ್ಯಾಪಾರವೇ ಅಲ್ಲವೆ? ಶಿಷ್ಯನ ಸೌಭಾಗ್ಯವನ್ನು ಕಂಡು ಶ್ರೀಪಾದರಾಜರು ತಮಗೆ ಭೀಮಾನದಿಯ ತಟದಲ್ಲಿ ಎರಡು ಸಂಪುಟಗಳು ದೊರೆತದ್ದನ್ನೂ, ಒಂದರಲ್ಲಿದ್ದ ರಂಗವಿಠಲನು ತಮಗೆ ಅನುಗ್ರಹಿಸಿ ಪೂಜೆಗೊಳ್ಳುತ್ತಿದ್ದುದನ್ನೂ ತಿಳಿಸುವರು. ಇದುವರೆಗೂ ಯಾರಿಗೂ ಅನುಗ್ರಹಿಸದ ಎರಡನೆಯ ಸಂಪುಟದಲ್ಲಿದ್ದ ವೇಣುಗೋಪಾಲ ಆ ದಿನ ವ್ಯಾಸರಾಯರಿಗೆ ಅನುಗ್ರಹಿಸಿದನೆಂದು ಹೇಳಿ ಆ ಮೂರ್ತಿಯನ್ನು ಅವರಿಗೇ ಕೊಟ್ಟುಬಿಟ್ಟರಂತೆ! ರಂಗವಿಠಲನನ್ನೂ ಅವನ ಅಂದಚೆಂದವನ್ನೂ ಕಂಡು ತಮಗಾದ ಆನಂದವನ್ನು ಶ್ರೀಪಾದರಾಜರು ತಮ್ಮ ಒಂದು ಕೀರ್ತನೆಯಲ್ಲಿ ಹಾಡಿ ರಂಗವಿಠಲನನ್ನು ನೆತ್ತಿಯಿಂದ ಉಂಗುಷ್ಠದವರೆಗೆ ವರ್ಣಿಸಿ ತಣಿದಿರುವರು:

*ಶ್ರೀರಂಗವಿಠಲನ ಶ್ರೀ ಮುಕುಟಕೆ ಶರಣ ||ಪ||*
*ಶಿರದಲೊಪ್ಪುವ ನೀಲಕುಂತಳಕೆ ಶರಣು*
*ಸಿರಿಸಹೋದರನರ್ಧದ ವಳಿಗೆ ಶರಣು ||ಅ.ಪ.||*

*ಸೊಂಪು ನೋಟದ ಚೆಲುವ ಸೋಗೆಗಣ್ಣಿಗೆ ಶರಣು*
*ಸಂಪಿಗೆಯ ಕುಸುಮ ಸಮ ನಾಸಿಕಕೆ ಶರಣು*
*ಗುಂಪುರತ್ನದ ಕರ್ಣಕುಂಡಲಗಳಿಗೆ ಶರಣು*
*ಇಂಪು ದರ್ಪಣ ನಿಭ ಕಪೋಲಗಳಿಗೆ ಶರಣು ||೧||*

*ಕುಂದಕುಟ್ಮಲಪೋಲ್ವ ದಂತಪಂಕ್ತಿಗೆ ಶರಣು*
*ಅಂದವಾಗಿರುವ ಬಿಂಬೋಷ್ಠಕೆ ಶರಣು*
*ಚಂದ್ರಿಕಾನಿಭ ಮುದ್ದು ಮಂದಹಾಸಕೆ ಶರಣು*
*ನಂದಗೋಪನ ಮುದ್ದು ಕಂದನಿಗೆ ಶರಣು ||೨||*

*ಅಬ್ಜನಾಭನ ಕಂಬುಕಂಠಕೆ ಶರಣು*
*ಅಬ್ಜಮುಖಿಯಿರುವ ವಕ್ಷಸ್ಥಳಕೆ ಶರಣು*
*ಕುಬ್ಜೆಯನು ಡೊಂಕ ತಿದ್ದಿದ ಭುಜಗಳಿಗೆ ಶರಣು*
*ಅಬ್ಜಜಾಸನನ ಪೆತ್ತ ನಾಭಿಗೆ ಶರಣು ||೩||*

*ರನ್ನಗಂಟೆಗಳಿರುವ ನಿನ್ನ ಕಟಿಗೆ ಶರಣು*
*ಪೊನ್ನ ಕದಳೀ ಪೋಲ್ವ ತೊಡೆಗಳಿಗೆ ಶರಣು*
*ಪುನ್ನಾಗಕರಗೆತ್ತ ದ್ವಯ ನಿತಂಬಕೆ ಶರಣು*
*ಚೆನ್ನಾಗಿ ಕುಣಿವ ಸಮಜಾನುವಿಗೆ ಶರಣು ||೪||*

*ಮಂಗಳ ವೈಭೋಗಂಗಳ ಅಂಘ್ರಿದ್ವಯಕೆ ಶರಣು*
*ತುಂಗ ಕುಚಗಳ ಪಿಡಿದ ಕರಂಗಳಿಗೆ ಶರಣು*
*ಪೊಂಗೊಳಲನೂದುವಾ ಅಂಗುಲಿಗಳಿಗೆ ಶರಣು*
*ರಂಗವಿಠಲನ ಸರ್ವಾಂಗಕೆ ಶರಣು ||೫||*

*-ಎಂದು ಆ ರಂಗವಿಠ್ಠಲನಿಗೆ ಶರಣಾಗಿರುವರು..*

ಶ್ರೀಪಾದರಾಜರಿಗೆ ದೊರೆ ಸಾಳುವ ನರಸಿಂಹನ ನೆರವಿನೊಂದಿಗೆ ಉತ್ತರದ ಕಾಶೀ ವಿಶ್ವೇಶ್ವರನ ದರ್ಶನ ಮಾಡುವ ಅವಕಾಶ ಒದಗಿಬಂದಾಗ ಅವರು ಶಾಸ್ತ್ರವಾಕಾರ್ಥದಲ್ಲಿ ಕಾಶಿಯ ಮಹಾಮಹಾ ಪಂಡಿತರುಗಳನ್ನು ಸೋಲಿಸಿ ಸೋತ ಪಂಡಿತರು ಸಂನ್ಯಾಸ ಸ್ವೀಕರಿಸುವಂತೆ ಮಾಡಿದರೆಂಬ ಮಾತಿದೆ. ಅಂತಹ ತರ್ಕ ಮೀಮಾಂಸಾದಿ ತತ್ವಪಂಡಿತೋತ್ತಮರಾಗಿದ್ದ ಶ್ರೀಪಾದರಾಜರ ಪೂಜಾಸಮಯಕ್ಕೆ ಸರಿಯಾಗಿ ಒಮ್ಮೆ ಮ್ಲೇಚ್ಛ ಸರದಾರನೊಬ್ಬನು ಹರಿವಾಣವೊಂದರಲ್ಲಿ ಅನೇಕ ಬಗೆಯ ಹಸಿಮಾಂಸವನ್ನಿರಿಸಿಕೊಂಡು, ಅದು ಸ್ವಲ್ಪವೂ" ಕಾಣದಂತೆ ಮುಚ್ಚಿತಂದು ಶ್ರೀಗಳೆದುರಿನಲ್ಲಿಡಲು ಅವರು ತಮ್ಮ ಶಂಖೋದಕವನ್ನು ಪ್ರೋಕ್ಷಿಸಿ ಶ್ರೀಹರಿಗೆ ಸಮರ್ಪಿಸಿ ಮುಚ್ಚಳ ತೆಗೆದಾಗ ಅವು ಹಣ್ಣು ಹೂವುಗಳಾಗಿದ್ದುದು; ಮತ್ತೊಮ್ಮೆ ಶ್ರೀಪಾದರಾಜರು ಪರಿವಾರಸಹಿತರಾಗಿ ಸಂಚರಿಸುತ್ತಿದ್ದಾಗ ದಾರಿತಪ್ಪಿ ಅರಣ್ಯವನ್ನು ಸೇರುವಂತಾಯಿತು. ಎಲ್ಲರಿಗೂ ಊಟ ವಸತಿಗಳ ಚಿಂತೆ ಬಲವಾಗತೊಡಗಿತು. ತಡೆಯಲಾಗದ ಹಸಿವೆಯಿಂದ ಅವರುಗಳೆಲ್ಲರೂ ಸಂಕಟಪಡುತ್ತಿದ್ದ ಸಮಯದಲ್ಲಿ ವ್ಯಾಪಾರಿಯೊಬ್ಬನು ಯತಿಗಳಲ್ಲಿಗೆ ಬಂದು ಬಂಡಿಗಟ್ಟಲೆ ಆಹಾರ ಪದಾರ್ಥಗಳನ್ನು ಸಮರ್ಪಿಸಿ ಹೋದದ್ದು; ನೃಸಿಂಹತೀರ್ಥದ ಈಶಾನ್ಯ ಮೂಲೆಯಲ್ಲಿ ಗಂಗೆ ಅವತರಿಸಿ ಬಂದದ್ದು - ಇತ್ಯಾದಿ ಪವಾಡ ಸದೃಶ ಘಟನೆಗಳು ಶ್ರೀಪಾದ ರಾಜರ ಜೀವನದಲ್ಲಿ ನಡೆದುವೆಂಬುದು ಆಸ್ತಿಕರಲ್ಲಿ ಜನಜನಿತವಾಗಿರುವ ವಿಚಾರ. ಇಂಥವು ಶ್ರೀಪಾದರಾಜರಲ್ಲಿ ಜನರಿಗಿದ್ದ ನಂಬಿಕೆ, ವಿಶ್ವಾಸ, ಭಕ್ತಿ, ಗೌರವಗಳಿಗೆ ಸಾಕ್ಷಿಯಾಗಿವೆ.

ಹೀಗೆ, ಸುಮಾರು ಆರುನೂರು ವರ್ಷಗಳ ಹಿಂದೆ ಕರ್ನಾಟಕದ ಒಂದು ಸಣ್ಣ ಊರಾದ ಅಬ್ಬೂರಿನಲ್ಲಿ ಹುಟ್ಟಿ, ಶ್ರೀರಂಗಕ್ಷೇತ್ರದ ಸ್ವರ್ಣವರ್ಣತೀರ್ಥರಿಂದ ಸಂನ್ಯಾಸ ಸ್ವೀಕರಿಸಿ, ದ್ವೈತ ಸಿದ್ಧಾಂತ ಸಾಮ್ರಾಜ್ಯದ ರಾಜರಾಗಿ, ರಾಜಗುರುಗಳಾಗಿ ಪ್ರಸಿದ್ಧರಾದ ಶ್ರೀಪಾದರಾಜರು, ಮುಳುಬಾಗಿಲಿಗೆ ಬಂದು ಅಲ್ಲಿ ಕೊನೆಯವರೆಗೂ ನೆಲೆಯಾಗಿ ನಿಂತರು. ಸುಮಾರು ತೊಂಬತ್ತೆಂಟು ವರ್ಷಗಳ ಕಾಲ ಜೀವಿಸಿದ್ದ ಅವರದು ತುಂಬುಜೀವನ. ಇಂತಹ ಮಹನೀಯರು ತಾವು ನಂಬಿ ನೆಚ್ಚಿದ ದ್ವೈತಸಿದ್ಧಾಂತದ ಸಾರವನ್ನು ಕನ್ನಡ ಭಾಷೆಯಲ್ಲಿ ತಂದು ಕನ್ನಡ ಜನತೆಗೆ ಮುಟ್ಟಿಸುವ ಮನಸ್ಸು ಮಾಡಿದ್ದು ನಾಡಿನ ಪುಣ್ಯ. ಭಕ್ತಮಂದಾರರು, ಷಟ್ಛಾಸ್ತ್ರ ಸಂಪನ್ನರು, ಸಕಲಶಾಸ್ತ್ರಕಲಾಪರು, ವಾದಿಭಯಂಕರರು ಎಂದು ಮುಂತಾಗಿ ಕೀರ್ತಿಪಡೆದಿದ್ದ ಅವರು ಕನ್ನಡ ಭಾಷೆಯಲ್ಲಿ ದ್ವೈತಸಿದ್ಧಾಂತವನ್ನು ಹೇಳಿದ್ದು ಅನೇಕ ಆಕಸ್ಮಿಕ ಹಾಗೂ ಆಶ್ಚರ್ಯಕರ ಸಂಗತಿಗಳಲ್ಲಿ ಒಂದು. ಮಠಾಧಿಪತಿಗಳಾಗಿದ್ದ ಅವರು ಸಂಸ್ಕೃತ ಭಾಷೆಯ, ದ್ವೈತಸಿದ್ಧಾಂತದ ಹರಿಕಾರರಾಗಿದ್ದವರು, ಆ ಕಾಲದಲ್ಲಿ ಆಡಿದರೆ ಮೈಲಿಗೆಯೆಂದು ಭಾವಿಸಿದ್ದ ಕನ್ನಡ ಭಾಷೆಯಲ್ಲಿ, ಅದರಲ್ಲೂ ಮಠದ ಪರಿಸರದಲ್ಲಿ ಕನ್ನಡದಲ್ಲಿ ಚಿಕ್ಕ ಚಿಕ್ಕ ಸ್ತುತಿಗೀತೆಗಳನ್ನು ರಚಿಸಿ ತಮ್ಮ ಪೂಜಾಕಾಲದಲ್ಲಿ ಹರಿಗೆ ನಿವೇದಿಸಿದ್ದಂತೂ ನಿಜಕ್ಕೂ ಕ್ರಾಂತಿಕಾರೀ ವಿಚಾರವೇ ಸರಿ. ಶ್ರೀಪಾದರಾಜರು ಬೃಂದಾವನಸ್ಥರಾಗಲು ಎರಡು ವರ್ಷ ಆರುತಿಂಗಳ ಅವಧಿಯಿದದಾಗಲೇ ಅವರ ವಿದ್ವತ್ತನ್ನು ಮೆಚ್ಚಿ ಅವರನ್ನು 'ಶ್ರೀಪಾದರಾಜರೆಂದು ಕರೆದು ಆಶೀರ್ವದಿಸಿದ್ದ ಶ್ರೀರಘುನಾಥತೀರ್ಥರು ಹರಿಸಾನ್ನಿಧ್ಯವನ್ನು ಸೇರಿದರು. ಅವರು ತಮ್ಮ ವೈಕುಂಠಯಾತ್ರೆಯ ಗಗನ ಮಾರ್ಗದಲ್ಲಿದ್ದಾಗ ಕೆಳಗೆ ಅಂಗಳದಲ್ಲಿ ಶಿಷ್ಯರಿಗೆ ಪಾಠ ಹೇಳುತ್ತಾ ಕುಳಿತಿದ್ದ ಶ್ರೀಪಾದರಾಜರ ಮೇಲೆ ಕುಸುಮವನ್ನೆಸೆದರಂತೆ. ಕತ್ತೆತ್ತಿ ನೋಡಿದ ಶ್ರೀಪಾದರಾಜರಿಗೆ ಶ್ರೀ ರಘುನಾಥತೀರ್ಥರ ದರ್ಶನವಾಯಿತೆಂದೂ ಹೇಳುವುದುಂಟು. ಹಾಗೆ ಹೂವು ಬಿದ್ದಿತೆಂದು ಹೇಳುವ ಸ್ಥಳದಲ್ಲಿ ಇಂದಿಗೂ ಒಂದು ವೃಂದಾನವನವಿದೆ; ಪ್ರತಿದಿನವೂ ಮಠದಲ್ಲಿ ಪೂಜೆಯಾದ ಬಳಿಕ ಆ ವೃಂದಾವನಕ್ಕೆ ದೇವರ ತೀರ್ಥ, ತುಳಸಿ, ಹೂವು, ಅಂಗಾರಗಳನ್ನು ಹಾಕುವ ಪದ್ಧತಿಯಿದೆಯೆಂದು ತಿಳಿದುಬರುತ್ತದೆ. ಶ್ರೀ ಶ್ರೀನಿಧಿಯತಿವರೇಣ್ಯರ ನವಪದ್ಯ ಸುರತ್ನಮಾಲೆಯಲ್ಲಿ ಮೇಲಿನ ಘಟನೆಯ ಪ್ರಸ್ತಾಪ ಹೀಗಿದೆ:

*ಶ್ರೀ ಮದ್ಯತೀಶ ರಘುನಾಥ ಮುನೇರ್ವಿಮಾನಾತ್*
*ಪುಷ್ಪೇ ಸ್ವಮೂರ್ಧ್ನಿ ಪ್ರತತಿ ಪ್ರಶಮೀಕ್ಷ್ಯಚೋಸ್ತ್ವಾ*
*ಸಂಪ್ರೇರಿತೋರು ರಘುನಾಥಮುನೀಶ್ವರಾಯ*
*ಶ್ರೀಪಾದರಾಜ ಗುರವೇಸ್ತು ನಮಶ್ಶುಭಾಯ*

ಶ್ರೀಪಾದರಾಜರನ್ನು ಗುರುಗಳೆಂದು ಗೌರವಿಸಿ ಸ್ತುತಿಸುವ ರೂಢಿ ಹರಿದಾಸ ಪರಂಪರೆಯಲ್ಲಿ ಬೆಳೆದುಬಂದಿದೆ. ಅವರ ಶಿಷ್ಯರಾದ ವ್ಯಾಸರಾಯರಿಂದ ಹಿಡಿದು ಇತ್ತೀಚಿನ ಹರಿದಾಸರ ಕೃತಿಗಳಲ್ಲೂ" ಈ ಗುರುವಂದನೆಯನ್ನು ಕಾಣಬಹುದು. ಇವರ ಕರುಣೆಯುಂಟಾದರೆ ವ್ಯಾಸರಾಯರು, ಪುರಂದರದಾಸರೇ ಮೊದಲಾದವರ ಕರುಣೆ ತಾನಾಗಿ ಸಿದ್ಧಿಸುವುದೆಂಬ ನಂಬಿಕೆ ಭಕ್ತರದು.

[1] ಶ್ರೀ ಪಾದರಾಜರ ಕೃತಿಗಳು, ಸಂ. ಡಾ. ವರದರಾಜ ರಾವ್, ಪೀಠಿಕೆ, ಪು-XXII, ೧೯೭೩, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

## ೧. ಶ್ರೀಪಾದರಾಜರ ಕಾಲ-ದೇಶ-ಜೀವನವಿಚಾರ (೧)

**ಹರಿದಾಸ ಸಾಹಿತ್ಯ ಪ್ರವರ್ತಕರು-ಶ್ರೀಪಾದರಾಜರು**

ಕನ್ನಡ ಹರಿದಾಸ ಸಾಹಿತ್ಯದ ಉಗಮ ಹಾಗೂ ಪ್ರಾಚೀನತೆಗಳನ್ನು ಕುರಿತಂತೆ ವಿದ್ವಾಂಸರಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಆರಂಭ ಕಾಲದಲ್ಲಿ ಈ ವಿಷಯವಾಗಿ ಸಾಕಷ್ಟು ವಿಷಯ ಸಂಗ್ರಹಣೆ ಮಾಡಿ ಚರ್ಚೆಗೆ ಚಾಲನೆ ಕೊಟ್ಟವರು ಬೇಲೂರು ಕೇಶವದಾಸರು; ತಮ್ಮ 'ಕರ್ಣಾಟಕ ಭಕ್ತ ವಿಜಯ'ದಲ್ಲಿ. ಅವರು 'ಕಾಶೀತಿಸಂಖ್ಯಾ ಶಕಕಾಲಕಾಬ್ದೇ'-ಎನ್ನುವ ಪದ್ಯವೊಂದನ್ನಾಧರಿಸಿ ಹರಿದಾಸ ಪರಂಪರೆಗೆ

ಕ್ರಿ.ಶ.ಒಂಬತ್ತನೆಯ ಶತಮಾನದಲ್ಲಿದ್ದ ಅಚಲಾನಂದದಾಸರೆಂಬುವವರು ಮೊದಲಿಗರೆಂದು ಹೇಳಿರುವರು.[1] ಅಚಲಾನಂದ ವಿಠಲ' ಅಂಕಿತದಲ್ಲಿ ದೊರೆತಿರುವ ಕೆಲವು ಉಗಾಭೋಗಗಳನ್ನೂ ಅವರು ಉದಾಹರಿಸಿದ್ದಾರೆ.[2] ಆದರೆ ಆ ರಚನೆಗಳ ಭಾಷೆಗೂ ಅಚಲಾನಂದರ ಕಾಲವಾದ ಒಂಬತ್ತನೆಯ ಶತಮಾನದ ಭಾಷೆಗೂ ತಾಳೆ ಬರುವುದಿಲ್ಲವಾದದರಿಂದ ಅವು ಆ ಮನೆತನದವರು ಇತ್ತೀಚೆಗೆ ಬರೆದ ರಚನೆಗಳಿರಬಹುದೆಂಬ ಅನುಮಾನವೂ ಅವರಿಗೆ ಬಂದಂತಿದೆ. ಮುಂದೆ ಶ್ರೀ ಹುಲಗೂರು ಕೃಷ್ಣಾಚಾರ್ಯರು ಕೇಶವದಾಸರು ಹೇಳುವ ಅಚಲಾನಂದರ ಕಾಲ ಕ್ರಿ.ಶ.೮೦೧ ಎಂಬುದನ್ನು ಒಪ್ಪದೆ, ಅದೇ ಪದ್ಯದ ಸಂಖ್ಯಾಶಬ್ದವನ್ನಾಧರಿಸಿ, ಅದು ೧೨೮೧ ಶಕ, ವಿಳಂಬಿ ಸಂವತ್ಸರ ಎಂದಾಗುವುದು; ಆದ್ದರಿಂದ ಕ್ರಿ.ವ.೧೩೫೯ ಎಂದು ಗ್ರಹಿಸಬೇಕಾಗುತ್ತದೆನ್ನುವ ಅಭಿಪ್ರಾಯವನ್ನು ಮುಂದಿಟ್ಟರು. ಜೊತೆಗೆ ಅಚಲಾನಂದ ವಿಠಲಾಂಕಿತ ಕೃತಿಯೊಂದರಲ್ಲಿ 'ಕೇಳೋ ಜೀವವೆ ನೀ ಮಧ್ವ ಮತನನುಸರಿಸಿ ಶ್ರೀಲೋಲನಂಘ್ರಿಗಳ ನೆನೆದು ಸುಖಿಸೋ'-ಎಂದು ಇರುವುದರಿಂಧ ಅವರು ಮಧ್ವಾಚಾರ್ಯರಿಗಿಂತ ಈಚಿನವರೆನ್ನುವ ಅಭಿಪ್ರಾಯವನ್ನು ಮಂಡಿಸಿದರು. ಈ ವಾದವನ್ನು ವಿದ್ವಾಂಸರು ಒಪ್ಪಿದ್ದಾರೆ. ಇತ್ತೀಚೆಗೆ ಡಾ.ಜಿ. ವರದರಾಜರಾಯರು ಅಚಲಾನಂದದಾಸರ ಮನೆತನದವರಲ್ಲಿದ್ದ ಕೆಲವು ಓಲೆಯಗರಿಗಳನ್ನು ಅಭ್ಯಾಸಮಾಡುತ್ತಿದ್ದಾಗ, ಕನ್ನಡದಲ್ಲಿ ರಚಿತವಾದ ಒಂದು ಗ್ರಂಥದ ನಾಲ್ಕು ಓಲೆಗರಿಗಳಲ್ಲಿ ಅಚಲಾನಂದರನ್ನು ಕುರಿತ ಕೆಲವು ವಿಚಾರಗಳು ದೊರೆತವು. ಕೇಶವದಾಸರಿಗೆ ಪದ್ಯದಲ್ಲಿ ದೊರೆತಿದ್ದ ವಿವರಗಳು ಇವರಿಗೆ ಗದ್ಯದಲ್ಲಿ ದೊರೆತಿವೆ:

*ಸ್ವಸ್ತಿ ಶ್ರೀ ವಿಜಯಾಭ್ಯುದಯ ಶ್ರೀಮನ್ನೃಪ*
*ಶಾಲೀವಾಹನ ಶಕವರ್ಷ ೮೦೧ನೆ ವಿಳಂಬಿ*
*ಸಂವತ್ಸರದ ಚೈತ್ರಶುದ್ಧ ೧೦ಯಲು ಶ್ರೀಮದ...*

*ನದಿಯಲು ಮಾಧ್ಯಾಹ್ನಿಕಾರ್ಘ್ಯಪ್ರದಾನಕಾಲ*
*ದಲ್ಲಿ ಪ್ರತ್ಯಕ್ಷರಾಗಿ ಹಸ್ತಗತರಾದ ಶ್ರೀವಿಠಲ*
*ಮೂರ್ತಿಯ...*

-ಎಂದು ಬರೆದಿದೆ. ಅದರೊಂದಿಗೆ ಅಚಲಾನಂದರ ಕಾಲದಿಂದ ಪೂಜೆಗೊಳ್ಳುತ್ತಿರುವ ವಿಗ್ರಹಗಳ ಪಟ್ಟಿಯಲ್ಲಿ 'ಅಚಲಾನಂದ ದಾಸರಿಗೆ ಪಾಂಡುರಂಗೆಯಲ್ಲೂ ಅರ್ಘ್ಯಕಾಲದಲ್ಲೂ ಪ್ರತ್ಯಕ್ಷವಾದ ವಿಠಲಮೂರ್ತಿ ಎಂಬ ವಿವರ ದಾಖಲಾಗಿದೆ. ಅಚಲಾನಂದರು ಸ್ಥಾಪಿಸಿರುವ ಆರು ಮಠಗಳ ಪಟ್ಟಿ; ಅವರ ಶಿಷ್ಯರ ಪಟ್ಟಿ; ಮಠಕ್ಕೆ ಉಂಬಳಿಯಾಗಿ ಬಿಟ್ಟ ಗ್ರಾಮಗಳ ಪಟ್ಟಿ; ಅವರ ಕಾಲದಿಂದ ಪೂಜೆಗೊಳ್ಳುತ್ತಿರುವ ವಿಗ್ರಹಗಳಪಟ್ಟಿ - ಎಲ್ಲವನ್ನೂ ಹೇಳಿದೆ. ಅಚಲಾನಂದರೇ ತಮ್ಮ ಪೂಜಾದಿಕಾರ್ಯ ನಿಮಿತ್ತ ಒಂದು ಮಠವನ್ನು ನಿರ್ಮಿಸಿದರೆಂದೂ ಗೋಪೀನಾಥದಾಸರು, ಮುದ್ದುವಿಠಲದಾಸರು ಮತ್ತು ಪಾಂಡುರಂಗದಾಸರು ಕಾಲಾನುಕ್ರಮದಲ್ಲಿ ಮಠದ ಆಡಳಿತವನ್ನು ವಹಿಸಿಕೊಂಡು ಪೂಜಾದಿಗಳನ್ನು ಸಾಂಗವಾಗಿ ನೆರವೇರಿಸಿದರೆಂದೂ ದಾಖಲಾಗಿದೆ.[3]

ಈ ಎಲ್ಲ ವಿವರಗಳನ್ನೂ ಪರಿಶೀಲಿಸಿದಾಗ ಕ್ರಿ.ಶ.೯ನೇ ಶತಮಾನದಲ್ಲಿ ಒಬ್ಬರು ಅಚಲಾನಂದರಿದ್ದುದು ಸ್ಪಷ್ಟ. ಅವರು ಮಠಾಧಿಪತಿಗಳಾಗಿದ್ದರೆಂಬುದೂ ಸತ್ಯ. ಆದರೆ ಅಚಲಾನಂದವಿಠಲ ಅಂಕಿತದ ಕೃತಿಗಳ ಭಾಷೆ ಮಾತ್ರ ೯ನೇ ಶತಮಾನದ್ದಲ್ಲ; ಮೊದಲೇ ಅನುಮಾನಿಸಿದ್ದಂತೆ ಅದು ಸು.೧೫-೧೬ನೇ ಶತಮಾನದ ಕನ್ನಡವೆಂಬುದು ವಿದ್ವಾಂಸರ ತೀರ್ಮಾನ. ಅಚಲಾನಂದ ವಿಠಲ ಅಂಕಿತದ ಸುಳಾದಿಯ ಒಂದು ನುಡಿ ಹೀಗಿದೆ:

**ರಾಗ:ದೇಶಾಕ್ಷಿ ಏಕತಾಳ**

*ಮನ್ನವಚನಕಾಯದಿಂಧ ಅನ್ಯವನರಿಯದ*
*ಹನುಮಂತನವೊಲು ನಿನ್ನ ದಾಸನೆಂದೆನಿಸಯ್ಯ*
*ಎನ್ನಂದದ ಕೃಪಣಂಗೆ ಕೃಪಾಕರ ನಿನ್ನ ದಾಸನೆಂದೆನಿಸಯ್ಯ*

*ಉನ್ನಂತ ಭಕುತಿಯನಿತ್ತೆನಗನುದಿನ*
*ನಿನ್ನವನೆನಿಸಚಲಾನಂದ ವಿಠಲ*

-ಡಾ. ವರದರಾಜರಾಯರು ಈ ಕಾಲ-ಭಾಷೆಗಳ ವೈರುಧ್ಯವನ್ನು ಪರಿಗಣಿಸಿ "ಭಾಷಾ ಸ್ವರೂಪವನ್ನು ಕಡೆಗಣಿಸಿ ಅಚಲಾನಂದವಿಠಲಾಂಕಿತವಾದ ರಚನೆಗಳನ್ನು ಕ್ರಿ.ಶ.೯ನೆಯ ಶತಮಾನಕ್ಕೆ ಸೇರಿದ ಅಚಲಾನಂದ ಸ್ವಾಮಿಗಳು ಬರೆದರೆನ್ನುವುದಾಗಲಿ ಅಥವಾ ಆ ಕೃತಿಗಳ ಸಲುವಾಗಿಯೇ ಅವರನ್ನು ಇತ್ತೀಚಿನ ಕಾಲಕ್ಕೆ ಸರಿಸುವುದಾಗಲಿ ಸರಿಯೆನ್ನಿಸುವುದಿಲ್ಲ. ಆದುದರಿಂದ ಬೇರೆ ಬೇರೆ ಕಾಲಕ್ಕೆ ಸೇರಿದ ಇಬ್ಬರು ಅಚಲಾನಂದರು ಇದ್ದಿರಬೇಕು ಎನ್ನುವುದು ಸೂಕ್ತವಾದುದು" ಎಂದಿದ್ದಾರೆ.[4]

ಡಾ. ಜಿ. ವರದರಾಜರಾಯರ ಈ ಊಹೆಗೆ ಪೂರಕವಾಗಿ ಶ್ರೀರಂಗಪಟ್ಟಣದ ಬಳಿಯಿರುವ ತೊಣ್ಣೂರು ದೇವಾಲಯದ ತಾಮ್ರಶಾಸನವನ್ನು ಪರಿಗಣಿಸಬಹುದು. ೧೫ ಹಲಗೆಗಳಲ್ಲಿ ಲಿಖಿತವಾಗಿರುವ ಶಾಸನವಿದು. ಮೈಸೂರಿನ ದೊರೆ ಮೊದಲನೇ ಕೃಷ್ಣರಾಜನು ತೊಂಡೂರು-ಅತ್ತಿಕುಪ್ಪೆ ಹಳ್ಳಿಗಳನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ, ಆ ಅಗ್ರಹಾರವನ್ನು ೧೧೨ ವೃತ್ತಿಗಳಾಗಿ ವಿಭಜಿಸಿ, ಹೊರನಾಡುಗಳಿಂದ ಆಹ್ವಾನಿತರಾಗಿ ಬಂದ ಬ್ರಾಹ್ಮಣರಿಗೆ ಅಲ್ಲಿಯೇ ನೆಲೆಸಲೆಂದು ಹಂಚಿಕೊಟ್ಟ ವಿಚಾರ ಅದರಲ್ಲಿದೆ:

*...ಅಚಲಾನನ್ದದಾಸಾಖ್ಯ*
*ವಿಷ್ಣುಭಕ್ತ ಕುಲೋದ್ಭವಃ ಆಶ್ವಲಾಯನ ವಾಸಿಷ್ಠ*
*ಋಕ್ಶಾಖ್ಯಪ್ಪಣ ಪುತ್ರಜಃ। ವೃತ್ತಿಂ*
*ನೃಸಿಂಹಜೋತ್ಯೈಕಾಂ ಹರಿದಾಸಸ್ಸಮಶ್ನುತೇ**[5]***

-ವೃತ್ತಿಗಳನ್ನು ಪಡೆದ ನೂರಾಹನ್ನೆರಡು ಜನರಲ್ಲಿ ವೈಷ್ಣವ ಮನೆತನದಲ್ಲಿ ಹುಟ್ಟಿದ, ನೃಸಿಂಹನ ಮಗನೂ ಅಪ್ಪಣನ ಮೊಮ್ಮಗನೂ ಆದ, ವಾಸಿಷ್ಠಗೋತ್ರ ಆಶ್ವಲಾಯನ ಸೂತ್ರ ಋಕ್ ಶಾಖಾಧ್ಯಾಯಿ ಅಚಲಾನಂದದಾಸನೂ ಒಬ್ಬನು. ಈ ಶಾಸನದ ಕಾಲ ಕ್ರಿ.ಶ.೧೭೨೨ ಡಿಸೆಂಬರ್ ೧೧. ಕರ್ನಾಟಕದಲ್ಲಾಗಲೇ ಹರಿದಾಸರಿಂದ ವಿಪುಲವಾಗಿ ಭಕ್ತಿಸಾಹಿತ್ಯ ಕೃಷಿ ನಡೆದಿದ್ದ ಕಾಲ. ಶ್ರೀರಂಗಪಟ್ಟಣದ ರಂಗನಾಥನನ್ನೂ ಹರಿದಾಸರು ಹಾಡಿಹೊಗಳಿದ್ದರು.

ಅಚಲಾನಂದರ ಪ್ರಸ್ತಾಪವಿರುವ ಇನ್ನೊಂದು ಶಾಸನ ಹಾಸನಜಿಲ್ಲೆ ಆಲೂರು ತಾಲೂಕಿನ ನಲ್ಲೂರು ಶಾಸನ.[6] ಒಂದು ಬಯಲಿನಲ್ಲಿ ಹೂತಿರುವ ಕಲ್ಲಿನ ಮೇಲೆ ಅರ್ಧಚಂದ್ರಾಕೃತಿಯಲ್ಲಿ 'ಶ್ರೀ ಅಚಳಾನಂದ ವಿಠಲ' - ಎಂಬ ಬರಹವಿದೆ. ಈ ಶಾಸನದ ಕಾಲ ೧೫-೧೬ನೇ ಶತಮಾನ.

ಈ ಶಾಸನಗಳ ದಾಖಲೆಗಳಿಂದ ಇಬ್ಬರು ಅಚಲಾನಂದರಿದ್ದುದು ಸ್ಪಷ್ಟ. ಒಬ್ಬರು ಕ್ರಿ.ಶ.೯ನೇ ಶತಮಾನದಲ್ಲಿದ್ದ ಮಠಾಧಿಪತಿಗಳು. ಪಾಂಡುರಂಗ, ಕಳಸ, ವಿದ್ಯಾನಗರ, ಪೆನುಗೊಂಡೆ, ರಾಮೇಶ್ವರ, ಕಾಶಿ, ಕೆಳದಿ,; ಬಿದುಲೂರುಗಳಲ್ಲಿ ಒಂದೊಂದು, (ಒಟ್ಟು ಏಳು) ಮಠವನ್ನು ಸ್ಥಾಪಿಸಿದ 'ಅಚಲಾನಂದ ಸ್ವಾಮಿಗಳು'. ಇನ್ನೊಬ್ಬರು ಮೈಸೂರಿನ ದೊರೆ ಮೊದಲನೇ ಕೃಷ್ಣರಾಜನಿಂದ ವೃತ್ತಿಯನ್ನು ಪಡೆದ 'ಅಚಲಾನಂದದಾಸರು'. ದೊರೆತಿರುವ ಅಚಲಾನಂದ ವಿಠಲಾಂಕಿತ ಕೃತಿಗಳು ಈ ಎರಡನೇ ಅಚಲಾನಂದರಿಂದ ರಚಿತವಾದವುಗಳೇ ಆಗಿರಬೇಕು. ಹೀಗೆ ಭಾಷಾ ದೃಷ್ಟಿ, ಆಂತರಿಕ ಹಾಗೂ ಬಾಹ್ಯ ಪ್ರಮಾಣಗಳು ಹಾಗೂ ಶಾಸನದ ಆಧಾರಗಳಿಂದ ಅಚಲಾನಂದರು ಹರಿದಾಸ ಪರಂಪರೆಗೆ ಮೊದಲಿಗರೆನ್ನುವ ವಾದವನ್ನು ಕೈಬಿಡಬಹುದು.

ಹಾಗೆಯೇ ಶ್ರೀಮಧ್ವಾಚಾರ್ಯರ ಸಮಕಾಲೀನರಾದ ಶ್ರೀ ನರಹರಿತೀರ್ಥರು ಹರಿದಾಸ ಪರಂಪರೆಗೆ ಮೊದಲಿಗರೆನ್ನುವ ಒಂದು ವಾದವೂ ವಿದ್ವಾಂಸರ ಚರ್ಚೆಗೆ ಆಹಾರವಾಗಿದೆ. ಶ್ರೀ ಆರ್.ಎಸ್. ಪಂಚಮುಖಿ, ಗೋರಬಾಳ ಹನುಮಂತರಾಯರು, ಡಾ.ಕೆ.ಎಂ.ಕೃಷ್ಣರಾಯರು ಈ" ಬಗ್ಗೆ ಸಾಕಷ್ಟು ವಿಚಾರ ವಿವರಗಳನ್ನು ಕೊಟ್ಟು ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ನರಹರಿತೀರ್ಥರೆ ಮೊದಲಿಗರೆಂದು ಭಾವಿಸಬಹುದೆನ್ನುವ ಪಂಚಮುಖಿಯರ ಹಾಗೂ ಗೋರಬಾಳರ ಅಭಿಮತವನ್ನು ಗ್ರಹಿಸಿದ ಡಾ.ಕೆ.ಎಂ.ಕೃಷ್ಣರಾಯರು ನರಹರಿತೀರ್ಥರ ಬಗ್ಗೆ ಕೆಲವು ಆಕ್ಷೇಪಣೆಗಳನ್ನೆತ್ತಿದ್ದಾರೆ:

೧. ನರಹರಿತೀರ್ಥರ ಉಪಲಬ್ಧ ಕೃತಿಗಳು ಮೂರೇ ಮೂರು. ಅವು ಕೂಡ 'ರಘುಕುಲ ತಿಲಕ', 'ರಘುಪತಿ'-ಎನ್ನುವ ಅಂಕಿತಗಳಲ್ಲಿವೆ. ಈ ಅಂಕಿತಗಳೂ ನರಹರಿತೀರ್ಥರವು ಎನ್ನುವ ಊಹೆಯ ಮೇಲೆ ಪರಂಪರೆಗೆ ಅವರು ಮೊದಲಿಗರೆನ್ನುವ ಮಾತು ನಿಂತಿದೆ, ಅಷ್ಟೇ.

೨. ನರಹರಿತೀರ್ಥರ ಬಳಿಕ ಸುಮಾರು ನೂರುವರ್ಷಗಳು ದಾಸಸಾಹಿತ್ಯವನ್ನು ರಚಿಸಿದ. ಅವರ ಶಿಷ್ಯಪರಂಪರೆ ಇಲ್ಲ.

೩. ಹರಿದಾಸ ಪರಂಪರೆಯ ವಂದನಾಶ್ಲೋಕದಲ್ಲಿ ನರಹರಿತೀರ್ಥರ ಹೆಸರಿಲ್ಲ. ಹೀಗೆ ಆದ್ಯರನ್ನು ಬಿಡಲು ಕಾರಣವೇನು?

೪. ಅವರ ಮಾತೃಭಾಷೆ ಕನ್ನಡವಲ್ಲ. ಮತ್ತು ಅವರು ಕನ್ನಡ ನಾಡಿಗೆ ಬಂದದ್ದೇ ತಮ್ಮ ಇಳಿವಯಸ್ಸಿನಲ್ಲಿ. ಅನಂತರ ಕನ್ನಡ ಕಲಿತು ಕೃತಿರಚನೆ ಮಾಡಿದರೇ ಎಂಬುದು ವಿಚಾರಣೀಯ.

೫. ಒಂದು ವೇಳೆ ನರಹರಿತೀರ್ಥರು ಹೀಗೆ ಒಂದು ಹೊಸಮಾರ್ಗವನ್ನು ಹಾಕಿಕೊಟ್ಟಿದ್ದಿದ್ದರೆ ಮಠಾಧಿಪತಿಗಳಾಗಿದ್ದ ಅವರಿಗೆ ಶಿಷ್ಯ ಪ್ರಶಿಷ್ಯರಿದ್ದೇ ಇರುತ್ತಿದ್ದರು. ಅಂತಹ ಪರಂಪರೆ ಯಾವುದೂ ಇದ್ದಂತಿಲ್ಲ.

೬. ಹರಿದಾಸ ಪಂಥದ ಆರಾಧ್ಯಮೂರ್ತಿ ಪಂಢರಾಪುರದ ವಿಠಲನ ಅಂಕಿತ ನರಹರಿ ತೀರ್ಥರವೆನ್ನಲಾಗಿರುವ ಕೃತಿಗಳಲ್ಲಿ ಇಲ್ಲ.

-ಈ ಎಲ್ಲ ವಾದ-ಪ್ರತಿವಾದಗಳನ್ನೂ ಗಮನಿಸಿದ ಡಾ.ಜಿ.ವರದರಾಜರಾಯರು ನರಹರಿತೀರ್ಥರು ತಮ್ಮ ಇಳಿವಯಸ್ಸಿನಲ್ಲಿ, ತಮ್ಮ ಮಾತೃ ಭಾಷೆಯಲ್ಲದ ಕನ್ನಡದಲ್ಲಿ ಕೃತಿ ರಚನೆ ಮಾಡಿರುವ ಸಾಧ್ಯತೆಯನ್ನು ತಳ್ಳಿ ಹಾಕಿಲ್ಲ. 'ವಿಠಲ' ಎಂಬ ಅಂಕಿತವಿಲ್ಲದಿದ್ದರೂ ಯತಿಗಳೂ ತಮ್ಮ ಆಶ್ರಮನಾಮವನ್ನು ಅಂಕಿತವಾಗಿ ಬಳಸದೆ ಇಷ್ಟದೇವತೆಯ ಹೆಸರನ್ನೇ ಬಳಸಿರುವುದಕ್ಕೆ ನಿದರ್ಶನವಾಗಿ ವ್ಯಾಸರಾಯರ 'ಶ್ರೀಕೃಷ್ಣ' ವಾದಿರಾಜರ 'ಹಯವದನ' ಅಂಕಿತಗಳನ್ನು ಉದಾಹರಿಸಿರುವರು. ಅದರಿಂದ ಬಾಧಕವೇನೂ ಇಲ್ಲವೆಂದು ಒಪ್ಪಿಕೊಂಡರೂ ನರಹರಿತೀರ್ಥರ ಜೀವನದಲ್ಲಿ ಮೂಲಸೀತಾರಾಮ ದೇವರ ಪ್ರಸಂಗ ಎಲ್ಲಕ್ಕಿಂತ ಮಿಗಿಲಾಗಿದೆ. ಹಾಗಾಗಿ 'ರಘುಪತಿ' ಅಂಕಿತವಿದ್ದಿರಬಹುದಾದರೂ 'ನರಹರಿ' ಅವರ ಅಂಕಿತವಾಗಲು ಸಾಧ್ಯವಿಲ್ಲವೆನ್ನುವರು. ಅಂತೆಯೇ ನರಹರಿ ತೀರ್ಥರದೆನ್ನಲಾಗಿರುವ ಇನ್ನುಳಿದ ಕೀರ್ತನೆಗಳ ಪಾಠ ಸಮಸ್ಯೆಗಳನ್ನೂ ಎತ್ತಿ ತೋರಿಸಿ ಒಂದೇ ಕೀರ್ತನೆ ವಿವಿಧ ಆಕರಗಳಲ್ಲಿದ್ದರೂ ರಚನೆಯ ಶುದ್ಧ ಪಾಠದ ಬಗ್ಗೆಯೇ ಸಂದೇಹ ವ್ಯಕ್ತಪಡಿಸಿದ್ದಾರೆ . ಮತ್ತು 'ಅನುಪಲ್ಲವಿ' ನಿಯತವಾಗಿ ಬರುವ ಆ ರಚನೆಗಳು ಹೇಗೆ ಸಂಗೀತಶಾಸ್ತ್ರದ ದೃಷ್ಟಿಯಿಂದಲೂ ಐತಿಹಾಸಿಕ ಅಸಂಗತವಾಗಿವೆಯೆಂಬುದನ್ನು ಎತ್ತಿತೋರಿಸಿ, ನರಹರಿತೀರ್ಥರನ್ನು ಸ್ತುತಿಸಿರುವ ಪುರಂದರಾದಿ ಹರಿದಾಸರೂ ಕೂಡ ಅವರ ಪಾಂಡಿತ್ಯ ವಿದ್ವತ್ತುಗಳನ್ನೂ ಅವರು ಕಳಿಂಗರಾಜನ ಭಂಡಾರದಲ್ಲಿದ್ದ ಮೂಲ ಸೀತಾರಾಮರ ಮೂರ್ತಿಯನ್ನು ಶ್ರೀಮದಾಚಾರ್ಯರಿಗೆ ನೀಡಿದ ಸಂಗತಿಯನ್ನೂ ಎತ್ತಿಹೇಳಿರುವರೇ ವಿನಾ ಅವರು ಕನ್ನಡ ಕೀರ್ತನೆಗಳನ್ನು ರಚಿಸಿರುವರೆಂದು ಎಲ್ಲಿಯೂ ಸೂಚಿಸಿಲ್ಲವೆನ್ನುವರು. ಪರಿಣಾಮವಾಗಿ "ಸದ್ಯಕ್ಕೆ ದೊರೆತಿರುವ ರಚನೆಗಳನ್ನೇ ಅವಲಂಬಿಸಿ ಅವರನ್ನು ಹರಿದಾಸ ಸಾಹಿತ್ಯದ ಆದ್ಯ ಪ್ರವರ್ತಕರೆಂದು ಭಾವಿಸುವುದಾಗಲೀ ಪೂರ್ವಾಪರ ವಿಚಾರಗಳನ್ನು ನಿಷ್ಪಕ್ಷಪಾತವಾಗಿ ವಿಮರ್ಶಿಸದೆ ನಿರಾಕರಿಸುವುದಾಗಲೀ ಸಲ್ಲದು" - ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.[7]

ಮತ್ತೊಂದು ಮುಖ್ಯವಾದ ವಿಚಾರವೆಂದರೆ ಕನ್ನಡ ಹರಿದಾಸ ಪರಂಪರೆಯನ್ನು ಪೌರಾಣಿಕ ವ್ಯಕ್ತಿ ಮಹಿದಾಸನಿಂದ ಗುರುತಿಸುವ ಸಂಪ್ರದಾಯವಿದೆ.[8] ಈ ಸಂಪ್ರದಾಯಕ್ಕೆ ಅರುವತ್ತು ಜನ ಆದ್ಯರು, ಒಂಬತ್ತು ಜನ ಆರಾಧ್ಯರು ಪ್ರಮುಖರೆಂದು ಹೇಳುವುದುಂಟು. ಆದರೆ ಪುರಂದರಾದಿ ಮೊದಲಘಟ್ಟದ ಹರಿದಾಸರು ಆದ್ಯರೆಂದು ಯಾರನ್ನೂ ನೆನೆಯದೆ ಮೌನವಾಗಿರುವುದರಿಂದ ಈ ಅರುತ್ತು ಜನ ಆದ್ಯರ ಕಾಲದ ಬಗ್ಗೆ ನಿರ್ದಿಷ್ಟ ನಿಲುವನ್ನು ತೆಗೆದುಕೊಳ್ಳುವುದು ಕಷ್ಟವಾಗಿದೆ. ಅಂತೆಯೇ ವಿಜಯದಾಸರಿಗೂ ಮುಂಚಿನವರಾದ ಮಹಿಪತಿರಾಯರು ಗುರು ಪರಂಪರೆಯನ್ನು ಸ್ತುತಿಸುತ್ತಾ-

*ನೆನೆದು ನಮಿಸುವೆ ವಾರಂ ವಾರ*

*………..*

*ಶರಣೆಂದು ಆದ್ಯರ ಸಕಲಪ್ರಸಿದ್ಧರ*

*ಶ್ರೀ(ಸಿರಿ) ಪಾದಪ್ರೀಯ ಶುಭವ್ಯಾಸರಾಯರ*
*ವರ ಹಯಗ್ರೀವ ಜಗವರಿತ ವಾದಿರಾಜ*
*ಪುರಂದರದಾಸರ ಪುನ್ನರವ ಮಾಳವ(?)*
*ನೆರೆ ತಾಳಪಾಕರ ಸಂತಮತಿ ಕನಕರ*
*ಹರಿಭಕ್ತಿ ಉಲ್ಲಾಸರ ಬಂಡರಂಗನರಿತಿಹ ನಿಜದಾ*
*ಸರ ಮಹೀಪತಿ ಗುರುಶರಣರ ತೋಷರ ವಾರಂ ವಾರ*

-ಎಂದು ಶ್ರೀಪಾದರಾಜರು ವ್ಯಾಸರಾಯರು ವಾದಿರಾಜರು ಪುರಂದರದಾಸರು ತಾಳ್ಳಪಾಕರು ಕನಕರು-ಇವರುಗಳನ್ನೇ ಆದ್ಯರೆಂದು ಕರೆದಿರುವುದು ಗಮನಾರ್ಹ ಸಂಗತಿ.[9]

ಅದೇ ಪುಸ್ತಕದಲ್ಲಿರುವ ಮೇಲ್ಗಿರಿ ವಿಠಲರ ಒಂದು ಉಗಾಭೋಗದಲ್ಲಿ ಹರಿದಾಸರ ಪರಂಪರೆ ಹೀಗೆ ಉಕ್ತವಾಗಿದೆ:

*…. ಶ್ರೀಪಾದ ರಾಜಯತಿ*
*ಗುರುವ್ಯಾಸ, ವಾದಿರಾಜಾ ಮಾಧವಾಕ್ಷೋಭ್ಯಾ*
*ಸಿರಿ ವೈಷ್ಣವ ಮತಜ ವೈಕುಂಠದಾಸರು*
*ಅರವತ್ತು ಆದ್ಯರು ಪುರಂದರ ದಾಸರು ಸುತರಾ*
*ಮೆರೆಸುವೆ ಈ ಪರಿ ವಿಜಯದಾಸರಿಗೆಂದು*
*ವರವು ಕೊಟ್ಟನು*

ವಿಜಯದಾಸರು ಆದ್ಯರೆಂದು ಕರೆದವರು ಬಹುಶಃ ಪುರಂದರದಾಸರ ಸಮಕಾಲೀನ ಹರಿದಾಸರಿರಬೇಕೆಂದು 'ಇವರು (ಆದ್ಯರು) ಈ ಪರಿಯಲ್ಲಿ ಅಂಕಿತವನು ಹಾಕಿ ಅವನಿಯೊಳಗೆ ಸಂಚರಿಸುತ್ತಿರಲು ಭವದೂರರಾಗಿ ದಾಸರು ತಮ್ಮ ಸುತರೊಡನೆ ವಿರಚಿಸಿದರು'-ಎಂಬ ವಿಜಯದಾಸರ ಮಾತುಗಳಿಂದಲೇ ಗ್ರಹಿಸಬಹುದಾಗಿದೆ. ಆದ್ಯರೆಂದರೆ ಶ್ರೀಪಾದರಾಜರಿಗಿಂತಲೂ ಹಿಂದಿನವರೆಂದೇ ಗ್ರಹಿಸಿ ತಮ್ಮ ವಾದವನ್ನು ಮಂಡಿಸಿರುವ ವಿದ್ವಾಂಸರಲ್ಲಿ ಶ್ರೀ ಕಪಟರಾಳ ಕೃಷ್ಣರಾಯರೂ ಒಬ್ಬರು.[10] ಈ ಎಲ್ಲ ವಿಚಾರಗಳನ್ನೂ ಗಮನಿಸಿದಾಗ 'ಒಂದು ವೇಳೆ ಇದೇ ಆದ್ಯಪರಂಪರೆಯನ್ನು ಶ್ರೀಪಾದರಾಜರೋ ಪುರಂದರದಾಸರೋ ಸ್ಮರಿಸಿದ್ದರೆ ಅವರನ್ನು ಪ್ರಾಚೀನರೆಂದು ನಿರ್ಧರಿಸಬಹುದಿತ್ತೆನ್ನುವ ಮತ್ತು ಶ್ರೀ ಗೋರಬಾಳ ಹನುಮಂತರಾಯ ಆದ್ಯರದೆಂದು ನಿರ್ದೇಶಿಸಿ ಉದಾಹರಿಸಿರುವ ಉಗಾಭೋಗ ಹಾಗೂ ಸುಳಾದಿಗಳ ಅಂಕಿತ ವಿಜಯದಾಸರ ಅನಂತರ ಉದಾಹರಿಸಿರುವ ಉಗಾಭೋಗ ಹಾಗೂ ಸುಳಾದಿಗಳ ಅಂಕಿತ ವಿಜಯದಾಸರ ಅನಂತರ ಬೇರಾರಲ್ಲೂ ಕಂಡುಬರದಿದ್ದಲ್ಲಿ ಮಾತ್ರ ಅವುಗಳನ್ನು ಸ್ವೀಕರಿಸಿಬಹುದು' ಎನ್ನುವ ಡಾ.ವರದರಾಜರಾಯರ ಅಭಿಪ್ರಾಯ ಸಮರ್ಥನೀಯವಾಗಿದೆ.

ಮೇಲಿನ ಎಲ್ಲ ವಾದ-ವಿವಾದಗಳನ್ನೂ ಪರಿಶೀಲಿಸಿ ನೋಡಿದಾಗ ವಿಜಯದಾಸರ ಕಾಲದಲ್ಲೋ ಅಥವಾ ಅನಂತರದಲ್ಲೋ ಹರಿದಾಸ ಪರಂಪರೆಯ ಪ್ರವರ್ತಕರು ಯಾರೆಂಬ ಪ್ರಶ್ನೆ ಹುಟ್ಟಿದ್ದಿರಬಹುದು. ಮತ್ತು ಜಿಜ್ಞಾಸುಗಳು ಆ ಬಗ್ಗೆ ತಮ್ಮ ಅಭಿಪ್ರಾಯವನ್ನು.

*ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ*
*ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇ ನಮಃ -*

-ಎಂಬ ಸ್ತುತಿಪದ್ಯದಲ್ಲಿ ಕ್ರೋಡೀಕರಿಸಿ ಹೇಳಿರಬಹುದು. ಅದರಂತೆ ಮೊತ್ತ ಮೊದಲಿಗೆ ತಮ್ಮ ಪೂಜಾ ಕಾಲದಲ್ಲಿ ಚಿಕ್ಕ ಚಿಕ್ಕ ಕನ್ನಡದ ಸ್ತುತಿಗೀತೆಗಳನ್ನು ಹಾಡಿ, ಮಠದ ಪರಿಸರದಲ್ಲಿ ಜನರ ಆಡು ಭಾಷೆಗೆ ಪ್ರಾಶಸ್ತ್ಯವಿತ್ತ ಕೀರ್ತಿ ಶ್ರೀಪಾದರಾಜರದು. ಇಂದು ಕನ್ನಡ ಹರಿದಾಸ ಸಾಹಿತ್ಯದಲ್ಲಿ ಕಾಣಸಿಗುವ ಉಗಾಭೋಗ, ಸುಳಾದಿ, ವೃತ್ತನಾಮ, ದಂಡಕ - ಈ ಎಲ್ಲ ಪ್ರಕಾರಗಳಲ್ಲೂ ಕೃತಿರಚಿಸುವ ಮೂಲಕ ಹರಿದಾಸ ಸಾಹಿತ್ಯಕ್ಕೆ ಒಂದು ನಿರ್ದಿಷ್ಟ ಸ್ವರೂಪವನ್ನು ಕೊಟ್ಟವರು ಶ್ರೀಪಾದರಾಜರು. ಆ ಪರಂಪರೆಯನ್ನು ಸಶಕ್ತವಾಗಿ

ಮುಂದುವರಿಸಿದ ಅವರ ಶಿಷ್ಯ ವ್ಯಾಸರಾಯರು ತಮ್ಮ ಶಿಷ್ಯರಾದ ಪುರಂದರ-ಕನಕಾದಿ ಹರಿದಾಸರ ಮೂಲಕ ಕನ್ನಡ ಹರಿದಾಸ ಸಾಹಿತ್ಯವನ್ನು ಇನ್ನಷ್ಟು ಮತ್ತಷ್ಟು ಬೆಳೆಸಿದರು. ಕನಕ-ಪುರಂದರರಂತೂ ಹರಿಭಕ್ತಿಯನ್ನು, ಮಧ್ವಸಿದ್ಧಾಂತವನ್ನು ಸಂಗೀತದ ಮೂಲಕ ಜನಸಾಮಾನ್ಯರ ಮನೆಮನೆಯ ಬಾಗಿಲಿಗೆ ಕೊಂಡೊಯ್ದವರು; ಕನ್ನಡವನ್ನು ಭಕ್ತಿ ಭಾಷೆಯಾಗಿ, ತತ್ವಭಾಷೆಯಾಗಿ ಮೆರೆಸಿದವರು. ಪುರಂದರದಾಸರ ಅನಂತರ ಕಾಖಂಡಕಿಯ ಮಹಿಪತಿರಾಯರು ಮತ್ತು ಅವರ ಮಗ ಕೃಷ್ಣರಾಯರುಗಳಿಂದ ಜೀವಂತವಾಗಿದ್ದ ಕನ್ನಡ ಹರಿದಾಸ ಸಾಹಿತ್ಯವಾಹಿನಿ ವಿಜಯದಾಸರಿಂದ ಪುನರುಜ್ಜೀವನಗೊಂಡಿತೆನ್ನುವ ವಿಚಾರ ಸರ್ವವಿದಿತ. ಮುಂದೆ ಅವರ ಶಿಷ್ಯ ಪ್ರಶಿಷ್ಯರುಗಳಿಂದ ಪುಂಖಾನುಪುಂಖವಾಗಿ ರಚಿತವದ ಕೀರ್ತನೆ ಸುಳಾದಿ ಉಗಾಭೋಗಗಳಿಂದ ಕನ್ನಡ ಹರಿದಾಸ ಸಾಹಿತ್ಯ ಸಮೃದ್ಧವಾಗಿ ಬೆಳೆಯಿತು. ಗೋಪಾಲದಾಸರು, ಹೆಳವನಕಟ್ಟೆ ಗಿರಿಯಮ್ಮ, ಜಗನ್ನಾಥದಾಸರು, ಪ್ರಸನ್ನವೆಂಕಟದಾಸರು, ಹರಪನಹಳ್ಳಿ ಭೀಮವ್ವನೇ ಮೊದಲಾದ ನೂರಾರು ಹರಿದಾಸರು ರಚಿಸಿದ ಸಾವಿರಾರು ಕೃತಿಗಳಿಂದ ಸಂಪನ್ನವಾಯಿತು. ಮೋಹನವಿಠಲ, ಶ್ರೀದವಿಠಲ, ಶ್ರೀಶವಿಠಲ; ವರದೇಂದ್ರ ವಿಠಲ, ಏರಿವೆಂಕಟರು, ಇಂದಿರೇಶ ವಿಠಲರು, ಪ್ರಸನ್ನ ಶ್ರೀನಿವಾಸರೇ ಮೊದಲಾದ ಹರಿದಾಸರಿಂದ ಹರಿದಾಸ ಸಾಹಿತ್ಯ ಸ್ತೋತ್ರ ಇಂದಿಗೂ ಜೀವಂತವಾಗಿದ್ದು ಇಪ್ಪತ್ತನೇ ಶತಮಾನದಲ್ಲಿ ನಿರಂತರಾಗಿ ಕೃತಿರಚನೆ ನಡೆದು, ಈ ಇಪ್ಪತ್ತೊಂದನೇ ಶತಮಾನಕ್ಕೂ ಸಾಗಿಬಂದಿದೆ.

ಹೀಗೆ, ಹರಿದಾಸ ಸಾಹಿತ್ಯ ಪ್ರವರ್ತಕರೆಂದು ವಿದ್ವದ್ಮಾನ್ಯರಾಗಿರುವ ಶ್ರೀಪಾದರಾಜರು ಕ್ರಿ.ಶ.ಸು.೧೪೦೬ರಲ್ಲಿ, ಚನ್ನಪಟ್ಟಣದ ಬಳಿಯ ಅಬ್ಬೂರಿನಲ್ಲಿ ಹುಟ್ಟಿದವರು. ಲಕ್ಷ್ಮೀನಾರಾಯಣನೆಂಬ ಹುಟ್ಟು ಹೆಸರಿನ ಬಾಲಕ ಶ್ರೀರಂಗದಲ್ಲಿ ಪದ್ಮನಾಭತೀರ್ಥರ ಪೀಳಿಗೆಯ ಏಳನೆಯ ಮಠಾಧಿಪತಿಗಳಾದ ಸ್ವರ್ಣವರ್ಣತೀರ್ಥರಿಂದ ಸಂನ್ಯಾಸ ಸ್ವೀಕರಿಸಿ ಲಕ್ಷ್ಮೀ ನಾರಾಯಣ ತೀರ್ಥರಾದದ್ದು. ವಿಬುಧೇಂದ್ರ ತೀರ್ಥರ ಶಿಷ್ಯತ್ವವಹಿಸಿ ಉನ್ನತ ವಿದ್ಯಾಭ್ಯಾಸ ಪಡೆದು ವಿದ್ಯಾಪಾರಂಗತರಾಗಿ ಬಳಿಕ ರಘುನಾಥತೀರ್ಥರಿಂದ ವಿದ್ವತ್ಸಭೆಯಲ್ಲಿ ಮೆಚ್ಚುಗೆ ಗಳಿಸಿ 'ಶ್ರೀಪಾದರಾಜ'ರೆನಿಸಿಕೊಂಡು ತೊಂಬತ್ತೆಂಟು ವರ್ಷಗಳ ತುಂಬುಬಾಳನ್ನು ಬಾಳಿದರು. ಸಂಸ್ಕೃತ-ಕನ್ನಡ ಭಾಷೆಗಳಲ್ಲಿ ಪರಿಣತರಾಗಿದ್ದ ಅವರು ತಮ್ಮ ಕೃತಿಗಳ ಮೂಲಕ ಮಧ್ವ ಮತತತ್ವಗಳನ್ನು ಬಿತ್ತರಿಸಿದ್ದಲ್ಲದೆ ಸಮಾಜದ ಉನ್ನತಿಗಾಗಿ ಶ್ರಮಿಸಿದರು. ತಮ್ಮ ಶಿಷ್ಯರಾದ ಶ್ರೀ ಹಯಗ್ರೀವ ತೀರ್ಥರಿಗೆ ಸಂಸ್ಥಾನವನ್ನು ಒಪ್ಪಿಸಿ ಕ್ರಿ.ಶ. ೧೫೦೪ನೇ ಇಸವಿ ಏಪ್ರಿಲ್ ೧೪ರಂದು, ಜೇಷ್ಠಶುದ್ಧ ಚತುರ್ದಶಿಯಂದು, ತಮ್ಮ ಇಹಲೋಕ ವ್ಯಾಪಾರವನ್ನು ಮುಗಿಸಿ ಬೃಂದಾವನಸ್ಥರಾದರು.

ಶ್ರೀಪಾದರಾಜರ ಬೃಂದಾವನವು ಕೋಲಾರ ಜಿಲ್ಲೆಯ ಮುಳುಬಾಗಿಲಿಗೆ ಒಂದೂವರೆ ಮೈಲಿ ದೂರದಲ್ಲಿರುವ ನೃಸಿಂಹತೀರ್ಥದ ಬಳಿಯಿದೆ. ಗುರುಗಳ ಬೃಂದಾವನದ ಸೇವೆಯಿಂದ ಅನನ್ಯ ಫಲ ಪ್ರಾಪ್ತಿಯೆಂಬುದು ಇಂದಿಗೂ ಭಕ್ತರ ನಂಬಿಕೆಯಾಗಿದೆ.

*ಯದ್ವೃಂದಾವನಂ ಸೇವಯಾ ಭುವಿಜಃ ಪ್ರಾಪ್ನೋತಿ ಸೌಖ್ಯಂಮಹತ್*
*ಯದ್ವೃಂದಾವನ ಮೃತ್ತಿಕಾಪಿ ನಿಟಿಲೇ ಭಕ್ತ್ಯಾಧೃತಾ ಸೇವಿತಾ*
-ಶ್ರೀಪಾದರಾಜಾಷ್ಟಕ

ಶ್ರೀನಿವಾಸರಾಯರು ತಮ್ಮ ಶ್ರೀಪಾದರಾಜ ಪಂಚರತ್ನ ಮಾಲಿಕೆಯಲ್ಲಿ ಯದ್ವೃಂದಾವನ ಸೇವಯಾ ಸುವಿಮಲಾಂ ವಿದ್ಯಾಂ ಪಶೂನ್ ಸಂತತಿಂ। ಜ್ಞಾನ ಧ್ಯಾನ ಮನಲ್ಪ ಕೀತಿ ನಿವಹಂ ಪ್ರಾಪ್ನೋತಿ ಸೌಖ್ಯಂ ಜನಃ'- ಎಂದು ಮುಂತಾಗಿ ಫಲಸ್ತುತಿ ಮಾಡಿದ್ದಾರೆ.

ಶ್ರೀಪಾದರಾಜರು ಸಂಸ್ಕೃತ-ಕನ್ನಡಗಳೆರಡಲ್ಲೂ ಪಾಂಡಿತ್ಯವಿದ್ದ ಸವ್ಯಸಾಚಿಗಳಾಗಿದ್ದರೂ ಕನ್ನಡದಲ್ಲಿ ಕೃತಿರಚನೆ ಮಾಡಿ ತತ್ವ ಪ್ರಸಾರ ಮಾಡಲು ಮನಸ್ಸು ಮಾಡಿದ್ದು ಆ ಕಾಲದ ಧಾರ್ಮಿಕ ಪರಿಸರದಲ್ಲಿ ಒಂದು ಕ್ರಾಂತಿಕಾರಕ ನಿಲುವೇ ಸರಿ. ಅವರ ಆ ನಿರ್ಧಾರಕ್ಕೆ ಪೂರಕವಾಗಿ ಒದಗಿಬಂದ ಪ್ರೇರಣೆಗಳನ್ನು ಹೀಗೆ ಊಹಿಸಬಹುದು.

೧. ತಾವು ನಂಬಿ ನೆಚ್ಚಿದ ಮತತತ್ವಗಳನ್ನು ಸಾಮಾನ್ಯ ಜನರಿಗೂ ತಿಳಿಸುವ ಅವರ ಅದಮ್ಯ ಬಯಕೆ.

೨. ಶ್ರೀಪಾದರಾಜರು ಶ್ರೀರಂಗದಲ್ಲಿದ್ದಾಗ ಪರಿಚಯವಾಗಿದ್ದ ಅಲ್ಲಿಯ ಆಳ್ವಾರರ ತಮಿಳಿನ ಕೃತಿಗಳು ಸಾಮಾನ್ಯ ಜನರನ್ನು ಮುಟ್ಟಿದ್ದ ತಟ್ಟಿದ್ದ ರೀತಿಯನ್ನು ಕಣ್ಣಾರ ಕಂಡು ಕೇಳಿದ್ದುದು.

೩. ಜೈನ ಬೌದ್ಧ ವೀರಶೈವ ಶ್ರೀವೈಷ್ಣವರುಗಳಿಂದ ರಚಿತವಾದ ಪ್ರಾಕೃತ, ಪಾಳಿ, ಕನ್ನಡ, ತಮಿಳು ಕೃತಿಗಳಿಂದ ಸಾಮಾನ್ಯ ಜನತೆಯ ಮೇಲುಂಟಾದ ಪರಿಣಾಮ ಶ್ರೀಪಾದರಾಜರಿಗೆ ತಿಳಿದಿದ್ದುದರಿಂದ ಧರ್ಮ ಹಾಗೂ ಜನತೆಯ ನಡುವೆ ಮಾತೃಭಾಷೆಯಲ್ಲಿ ಮಾತ್ರ ನೇರ ಸಂಪರ್ಕ ಮತ್ತು ಉದ್ದಿಶ್ಯ ಪರಿಣಾಮ ಸಾಧ್ಯವೆಂಬ ಅವರ ಅನುಭವಜನ್ಯ ತಿಳುವಳಿಕೆ.

೪. ಶ್ರೀವೈಷ್ಣವ ಮತದ ಅನುಯಾಯಿಗಳು ತಮ್ಮ ಮಾತೃಭಾಷೆಯಲ್ಲದ ಕನ್ನಡದಲ್ಲಿ ತತ್ವಪ್ರಚಾರ ಮಾಡದ ಕಾರಣ ಶಂಕರಾಚಾರ್ಯರ ಶೈವಧರ್ಮ, ಬಸವಣ್ಣನವರ ವೀರಶೈವ ಧರ್ಮಗಳೆದುರು ವೈಷ್ಣವಧರ್ಮ ತಲೆಯೆತ್ತಿ ನಿಲ್ಲಬೇಕಾದ ಅನಿವಾರ್ಯತೆ.

೫. ಶ್ರೀ ವೀರಶೈವ ಧರ್ಮದ ವಿಶಾಲ ಮನೋಭಾವದಿಂದಾಗಿ ತತ್ತರಿಸಿದ್ದ ವೈದಿಕರ ಸಾಂತ್ವನ.

೬. ಪರಧರ್ಮೀಯರ ಆಕ್ರಮಣದ ಭಯದಲ್ಲಿ ತತ್ತರಿಸುತ್ತಿದ್ದ ಜನತೆಗೆ ಶ್ರೀರಕ್ಷೆಯಾಗಿ ನಿಲ್ಲಬೇಕಾಗಿ ಬಂದ ತುರ್ತುಪರಿಸ್ಥಿತಿ.

೭. ತತ್ವಗಳನ್ನು ತಿಳಿಯುವ ಜನಸಾಮಾನ್ಯರ ಬಯಕೆಯನ್ನು ಸಂಸ್ಕೃತ ವಿದ್ವಾಂಸರು ಪೂರೈಸಲಾರದ ಪರಿಸ್ಥಿತಿ.

೮. ಆಳರಸರ ಪರಸ್ಪರ ಕಾದಾಟದಿಂದ ಪ್ರಕ್ಷುಬ್ಧಗೊಂಡಿದ್ದ ಜನತೆಯ ಮನಶ್ಶಾಂತಿಯನ್ನು ಹರಿಭಕ್ತಿಯ ಮೂಲಕ ಮರಳಿ ತಂದುಕೊಡುವ ಉದ್ದೇಶ.

೯. ಭಕ್ತಿಪೂರ್ಣ ಭಾವಗೀತೆಯೂ ದ್ವೈತಪರಹರಿಸುತ್ತಿಯೂ ಆಗಿದ್ದ ಮಧ್ವಾಚಾರ್ಯರ ದ್ವಾದಶಸ್ತೋತ್ರದ ಸ್ವರೂಪ, ಪರಿಣಾಮ, ಪ್ರಭಾವಗಳು.

೧೦. ಕನ್ನಡ ಭಾಷೆಯಲ್ಲಿ ರಚಿತವಾಗಿದ್ದ ಮಧ್ಯಕಾಲೀನ ಯುಗದ ಧಾರ್ಮಿಕ ಸಾಹಿತ್ಯ.

೧೧. ಇಸ್ಲಾಂ ಧರ್ಮದ ಎದುರಿನಲ್ಲಿ ವೈಭವ ಪ್ರದರ್ಶನವಿಲ್ಲದ ಭಕ್ತಿ ಪಂಥಕ್ಕೆ ಮಾತ್ರ ಉಳಿಗಾಲವಿದ್ದದ್ದು.

೧೨. ವಿಠಲೋಪಾಸಕರಾಗಿದ್ದ ಮಹಾರಾಷ್ಟ್ರದ ವಾರಕರಿ ಪಂಥದ ಪ್ರಭಾವ.

೧೩. ಇವೆಲ್ಲಕ್ಕೂ ಒಪ್ಪವಿಟ್ಟಂತೆ ಶ್ರೀರಂಗದ ರಂಗನಾಥಸ್ವಾಮಿಯ ದೇವಾಲಯದಲ್ಲಿ ಉತ್ಸವಮೂರ್ತಿಯ ಮೆರವಣಿಗೆಯಲ್ಲಿ ತಮಿಳು ಪ್ರಬಂಧಗಳನ್ನು ಹಾಡುತ್ತಾ ನರ್ತಿಸುತ್ತಾ ಸೇವೆಸಲ್ಲಿಸುತ್ತಿದ್ದ 'ಇಶೈ' ಕಾರ್ಯಕ್ರಮ* ಶ್ರೀ ಪಾದರಾಜರ ಮನಸ್ಸನ್ನು ಸೆರೆ ಹಿಡಿದಿದ್ದುದು.

-ಈ ಎಲ್ಲ ಪ್ರೇರಣೆ - ಪ್ರಭಾವಗಳ ಹಿನ್ನೆಲೆಯಲ್ಲಿ ಮಧ್ವಾಚಾರ್ಯರ ಮಾಧ್ವತತ್ವಗಳ ಪ್ರಸಾರದ ಉದ್ದೇಶದಿಂದ ಶ್ರೀಪಾದರಾಜರು ೧೫ನೇ ಶತಮಾನದಲ್ಲಿ ಕೀರ್ತನೆ ಸುಳಾದಿ ಉಗಾಭೋಗ ವೃತ್ತನಾಮ, ದಂಡಕ - ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಮೊತ್ತಮೊದಲಿಗೆ ಕನ್ನಡಭಾಷೆಯಲ್ಲಿ ತಂದ ಕೀರ್ತಿಗೆ ಭಾಜನರಾದರು. ಮತ್ತು ಹರಿದಾಸ ಸಾಹಿತ್ಯ ಪರಂಪರೆಗೇ ಮೊದಲಿಗರೆನ್ನಿಸಿಕೊಂರು. ದ್ವೈತಸಿದ್ಧಾಂತ, ಸಾಹಿತ್ಯ, ಸಂಗೀತ ಹಾಗೂ ಜೀವನ ಮೌಲ್ಯಗಳನ್ನು ಕನ್ನಡ ಭಾಷೆಯಲ್ಲಿ ಬಿತ್ತರಿಸಿದ ಕೀರ್ತಿ ಶ್ರೀಪಾದರಾಜರದು. ಆ ಹಿಂದೆಯೇ ಇದ್ದುವೆನ್ನಲಾದ ಶಿವದಾಸರ ಕೀರ್ತನೆಗಳು, ಕನ್ನಡ ಜನತೆಯ ಪುರಾಣ ಪ್ರಜ್ಞೆ, ಜನಸಾಮಾನ್ಯರಲ್ಲಿ ನೆಲೆಗೊಂಡಿದ್ದ ಭಕ್ತಿ ಭಾವನೆ, ಧರ್ಮಜಾಗೃತಿಗಳು ಶ್ರೀಪಾದರಾಜರಿಗೆ ದೊರೆತ ಸಹಾಯಕ ಅಂಶಗಳೆಂದು ಗುರುತಿಸಬಹುದು. ಶ್ರೀಪಾದರಾಜರ ಲಕ್ಷ್ಮೀನೃಸಿಂಹ ಪ್ರಾದುರ್ಭಾವ ದಂಡಕವನ್ನು ತಮಿಳಿನ 'ಇಯಲ್' ಪ್ರಕಾರಕ್ಕೂ ಅದರ ಇನ್ನುಳಿದ ಗೇಯ ರಚನೆಗಳನ್ನು ತಮಿಳಿನ ಗೇಯ ರೂಪವಾದ 'ಇಶೈ' ಪ್ರಕಾರಕ್ಕೂ ಹೋಲಿಸುವ ಮೂಲಕ ಪ್ರೊ.ಎಸ್.ಕೆ. ರಾಮಚಂದ್ರರಾಯರು ಶ್ರೀಪಾದ ರಾಜರಿಗೆ ತಮಿಳು ಭಕ್ತಿ ಸಾಹಿತ್ಯದ ಪ್ರೇರಣೆ ಪ್ರಭಾವಗಳು ಎಷ್ಟರಮಟ್ಟಿಗಿದ್ದುವೆಂಬುದನ್ನು ಸ್ಪಷ್ಟವಾಗಿ ಗುರುತಿಸಿಕೊಟ್ಟಿದ್ದಾರೆ.[11]

ಸಂಸ್ಕೃತ ಭಾಷೆಯಲ್ಲಿ ಖಂಡನ - ಮಂಡನ ಗ್ರಂಥಗಳ ಮೂಲಕ ಮಾಧ್ವಮತ ತತ್ವ ಬೋಧನೆ ಮಾಡುತ್ತಿದ್ದ ವಿದ್ವಾಂಸರನ್ನು 'ವ್ಯಾಸಕೂಟ'ದವರೆಂದೂ ಅವೇ ಮತತತ್ವಗಳನ್ನು ಕನ್ನಡ ಭಾಷೆಯ ಕೀರ್ತನೆ ಸುಳಾದಿ ಉಗಾಭೋಗಾದಿ ಕೃತಿಗಳ ಮೂಲಕ ಪ್ರಸಾರ ಮಾಡುತ್ತಿದ್ದ ಪುರಂದರಾದಿ ಹರಿದಾಸರನ್ನು 'ದಾಸಕೂಟ'ದವರೆಂದೂ ಕರೆಯುವುದು ರೂಢಿ. ವ್ಯಾಸಕೂಟದವರ ದೃಷ್ಟಿ ತತ್ವ, ಪಾಂಡಿತ್ಯ, ವಾಕ್ಯಾರ್ಥ ಖಂಡನೆ-ಮಂಡನೆಗಳತ್ತ ಕೇಂದ್ರೀಕೃತವಾಗಿದ್ದರೆ ದಾಸ ಕೂಟದವರ ಗಮನ ಆತ್ಮಾವಲೋಕನ, ಆತ್ಮೋದ್ಧಾರ, ಲೋಕನೀತಿ, ಲೋಕೋದ್ಧಾರಗಳತ್ತ. ಈ ಎರಡೂ ದೃಷ್ಟಿಗಳನ್ನು ಇರಿಸಿಕೊಂಡಿರುವ ಶ್ರೀಪಾದರಾಜರು, ವ್ಯಾಸರಾಯರು, ವಾದಿರಾಜರು - ಈ ಯತಿತ್ರಯರು ವ್ಯಾಸ-ದಾಸಕೂಟಗಳಿಗೆ ಸೇತುವೆಯಾಗಿ ಪರಿಣಮಿಸಿದ್ದಾರೆ.

[1]ಕರ್ಣಾಟಕ ಭಕ್ತ ವಿಜಯ, ಪು.೯, ಭಾಗ.೧, ೧೯೩೩.

[2]ಹರಿದಾಸ ಸಾಹಿತ್ಯ, ಪು.೭೭-೭೯ಮ ೧೯೪೪

[3]ನೋಡಿ, ಶ್ರೀಪಾದರಾಜರ ಕೃತಿಗಳು, ಪೀಠಿಕೆ, ಪುಟ-V

[4]ಶ್ರೀಪಾದರಾಜರ ಕೃತಿಗಳು, ಪೀಠಿಕೆ ಪುಟ-VII.

[5]ಎಫಿಗ್ರಾಫಿಯಾ ಕರ್ನಾಟಿಕಾ, Vol.VI, ಪು.೧೮೨, ೯೯ (ಶ್ರೀರಂಗಪಟ್ಟಣ ೬೪) ಕನ್ನಡ ಅಧ್ಯನ ಸಂಸ್ಥೆ, ಮೈಸೂರು.

[6]ಎಫಿಗ್ರಾಫಿಯಾ ಕರ್ನಾಟಿಕಾ, Vol.VIII, ಪು.೪೫೬-೫೮

[7]ಶ್ರೀಪಾದರಾಜರ ಕೃತಿಗಳು, ಪೀಠಿಕೆ, XIV

[8]ಕರ್ನಾಟಕ ಹರಿದಾಸರ ಉಗಮ ಮತ್ತು ಶ್ರೀ ಪುರಂದರದಾಸರ ಸುಳಾದಿಗಳು, ಪು.೯೭-೧೦೩, ೧೯೫೭.

[9]ಶ್ರೀಜಗನ್ನಾಥ ದಾಸರು ತತೆಶಿಷ್ಯ ಪ್ರಶಿಷ್ಯರ ಸುಳಾದಿಗಳು, ಉಗಾಭೋಗಗಳು, ಪು.೫, ಶ್ರೀ ಗೋರಬಾಳ ಹನುಮಂತರಾಯರು, ೧೯೫೮.

[10]ಹರಿದಾಸ ಪರಂಪರೆ, ಕರ್ನಾಟಕ ಸಂಸ್ಕೃತಿಯ ಸಂಶೋಧನೆ, ಪು.೨೭೧-೨೯೧, ೧೯೭೦.

*ಪುರಂದರ ಸಾಹಿತ್ಯ ದರ್ಶನ, ಸಂಪುಟ-೪, ಪು.೫, ಸಂ. ಪ್ರೊ.ಎಸ್.ಕೆ. ರಾಮಚಂದ್ರರಾವ್.)

[11]ಅದೇ

## ೩. ಕೃತಿಗಳು (೧)

ಶಿವಶರಣರು ತಮ್ಮ ವಚನಗಳಲ್ಲಿ ಕೂಡಲಸಂಗಮದೇವ ಚನ್ನಮಲ್ಲಿಕಾರ್ಜುನ ಇತ್ಯಾದಿ 'ಅಂಕಿತ'ಗಳನ್ನು ಇಟ್ಟುಕೊಂಡಿರುವಂತೆ ಹರಿದಾಸರೂ ತಮ್ಮ ಕೃತಿಗಳಲ್ಲಿ ಅಂಕಿತಗಳನ್ನಿಟ್ಟಿರುವುದು ಗಮನಾರ್ಹ. ವ್ಯತ್ಯಾಸವೆಂದರೆ ಹರಿದಾಸರಿಗೆ ಈ ಅಂಕಿತ ಗುರುಮುಖೇನ ದೊರೆತಿರುವಂಥದ್ದು; 'ಶ್ರೀಶನ್ನ ಭಜಿಸುವುದಕ್ಕಧಿಕಾರ'. 'ಅಂಕಿತ'ವೆಂದರೆ 'ಇದು ಇಂಥವರ ರಚನೆ'- ಎಂದು ಗುರುತಿಸಲು ಅನುವಾಗುವ ಗುರುತು, ಮುದ್ರಿಕೆ, ಮಾಹಿತಿ ಎನ್ನಬಹುದು. ಸಾಮಾನ್ಯವಾಗಿ ಯತಿಗಳು ತಮ್ಮ ಇಷ್ಟದೈವದ ಹೆಸರನ್ನೇ ಅಂಕಿತವಾಗಿ ಬಳಸಿರುವುದು ಕಂಡುಬರುತ್ತದೆ. ಶ್ರೀಪಾದರಾಜರು 'ರಂಗವಿಠಲ', ವ್ಯಾಸರಾಯರು 'ಶ್ರೀ ಕೃಷ್ಣ' ವಾದಿರಾಜರು 'ಹಯವದನ' ಅಂಕಿತ ಬಳಸಿರುವರು. ಮುಂದೆ ವ್ಯಾಸರಾಯರ ಶಿಷ್ಯರಾಗಿ ಬಂದ ಪುರಂದರಾದಿ ಹರಿದಾಸರ ಅಂಕಿತದಲ್ಲಿ

ಸಾಮಾನ್ಯವಾಗಿ 'ವಿಠಲ' ಶಬ್ದ ಸೇರಿರುತ್ತದೆ. 'ಪುರಂದರ ವಿಠಲ' 'ವಿಜಯವಿಠಲ', 'ಗೋಪಾಲ ವಿಠಲ', 'ಜಗನ್ನಾಥ ವಿಠಲ', 'ಪ್ರಾಣೇಶ ವಿಠಲ', 'ಶ್ರೀದ ವಿಠಲ', 'ಶ್ರೀಶ ವಿಠಲ'-ಹೀಗೆ. ಮತ್ತು ಗುರುವಿನಿಂದ ಶಿಷ್ಯನಿಗೆ ಅಂಕಿತಪ್ರದಾನವಾಗುವ ಮೂಲಕ ಹರಿದಾಸರಲ್ಲಿ ಗುರು-ಶಿಷ್ಯರ ಪರಂಪರೆ ಅನೂಚಾನವಾಗಿ ನಡೆದುಬರುತ್ತಿದೆ. ಹಾಗೆ ಗುರುಗಳು ಶಿಷ್ಯರಿಗೆ ಅಂಕಿತಪ್ರದಾನ ಮಾಡುವಗ ಗುರುಗಳ ಅಂಕಿತದೊಂದಿಗೆ ಶಿಷ್ಯನ ಅಂಕಿತವೂ ಸೇರಿದ ಹಾಗೆ 'ಅಂಕಿತ ಪದ' ರಚನೆಯಾಗಿರುತ್ತದೆ. ಶ್ರೀನಿಧಿ ವಿಠಲರು ಶ್ರೀವರ ವಿಠಲರಿಗೆ ನೀಡಿದ ಅಂಕಿತಪದ ಹೀಗಿದೆ:

*'ಶ್ರೀವರ ವಿಠಲ' ಬೇಗ ಸಲಹೋ ಹರಿಯೇ ||ಪ||*
*ಸಾವಧಾನದಿ ಕೈಪಿಡಿಯೋ ಸತತ ||ಅ.ಪ.||*

*ಸಿರಿಬೊಮ್ಮ ಹರಮೊದಲು ಸರ್ವದೇವತೆಗಳಿಗೆ*
*ಸರ್ವಸೌಖ್ಯವ ಕೊಟ್ಟ ಸರ್ವಾದಿವಂದ್ಯ ಹರಿಯೇ*
*ಗರ್ವರಹಿತನು ನೀನು ಕರುಣಿ ಕರುಣಿಸಿವನ*
*ನರಹರಿಯೆ ನಾ ನಿನ್ನ ಸ್ಮರಣೆ ಮಾಡುವೆ ನಿತ್ಯ ||೧||*

*ಜ್ಞಾನಭಕುತಿ ವಿರಕುತಿಯನ್ನು ನೀನೇ ಕೊಡುವುದು ಸ್ವಾಮಿ*
*ಜ್ಞಾನಿಗಳ ಕೈಯ ಮನ್ನಣೆ ಮಾಡಿಸೋ*
*ಶ್ರೀನಿವಾಸನೆ ಸಕಲೇಷ್ಟ ಕಾಮವ ಕೊಟ್ಟು*
*ದಾನ ಧರ್ಮಗಳೆಲ್ಲ ನೀನೆ ಮಾಡಿಸೋ ನಿತ್ಯ |೨||*

*ಕರುಣಾಪಯೋನಿಧೆ ನಮ್ಮ ಗುರುಹೃದಯವಾಸ ಶ್ರೀ*
*ಕರವೆಂಬ ಶ್ರೀನಿಧಿವಿಠಲನೆ*
*ಸರ್ವದಾ ನೆರೆನಂಬಿದವನ ದುರಿತವ ಕಳೆದು ಸು-*
*ಸ್ಥಿರ ಪದವೀವ ಪರಮ ಪುರುಷನೆನೀನು ||೩||*

ಎಲ್ಲ ಹರಿದಾಸರ ಅಂಕಿತಪದಗಳೂ ದೊರೆತಿಲ್ಲ. ಇತ್ತೀಚಿನ ಹರಿದಾಸರ ಪೈಕಿ ಶ್ರೀ ಗುರು ಗೋವಿಂದ ವಿಠಲದಾಸರು ತಮ್ಮ ಶಿಷ್ಯರಿಗೆ ಕೊಟ್ಟಿರುವ ಅಂಕಿತ ಪದಗಳೆಲ್ಲವೂ ದೊರೆತಿವೆ. ಹೀಗೆ ಅಂಕಿತ ಪಡೆಯುವ ಮೂಲಕ ಭಕ್ತ ಹರಿದಾಸನಾಗುವ ಅರ್ಹತೆ ಪಡೆಯುತ್ತಾನೆ. ದಾಸಕೂಟದವರಿಗೆ ಮಾತ್ರ ಈ ಅಂಕಿತ ಪ್ರಧಾನವಿಧಿ. ವ್ಯಾಸಕೂಟದ ಯತಿಗಳಾಗಿದ್ದು ಹರಿದಾಸರಾದವರು ತಮ್ಮ ಉಪಾಸ್ಯ ಮೂರುತಿಯ ಹೆಸರನ್ನೇ ತಮ್ಮ ಕನ್ನಡ ಕೃತಿಗಳಲ್ಲಿ ಅಂಕಿತವಾಗಿ ಬಳಸಿರುವುದನ್ನು ಈ ಹಿಂದೆಯೇ ಗಮನಿಸಲಾಗಿದೆ. ದಾಸದೀಕ್ಷೆಯನ್ನು ಪಡೆದ ಭಕ್ತ ಅಂಕಿತಾಂತರ್ಗತ ದೈವವೇ ತನ್ನ ಬಿಂಬ ಮೂರುತಿಯೂ ಹೌದೆನ್ನುವ ಭಾವನೆಯಿಂದ ವ್ಯವಹರಿಸುವನು. ಕೆಲವರಿಗೆ ಸ್ವಪ್ನದ್ವಾರಾ ಗುರುಗಳ ಅಂಕಿತವಾಗಿರುವುದೂ ಉಂಟು. ವಿಜಯ ದಾಸರಿಗೆ ಹಾಗೆ ಸ್ವಪ್ನದಲ್ಲಿ ಪುರಂದರದಾಸರಿಂದ ಅಂಕಿತ ದೊರೆಯಿತೆನ್ನುವ ವಿವರವನ್ನಿಲ್ಲಿ ನೆನೆಯಬಹುದು. ಪುರಂದರದಾಸರಿಗೆ ವ್ಯಾಸರಾಯರಿಂದ ದಾಸದೀಕ್ಷೆ ದೊರೆತ ಸಂಗತಿ ಪುರಂದರದಾಸರ 'ಗುರುರಾಯಾ... ಶ್ರೀಶನ ಭಜಿಸುವುದಕಧಿಕಾರಿ ನಾನಾದೆ' ... ಇತ್ಯಾದಿ ಮಾತುಗಳಿಂದ ತಿಳಿಯುತ್ತದೆ.

**(ಅ) ಸ್ವರೂಪ ವೈವಿಧ್ಯ**

**ಅ. ಕೀರ್ತನೆ:** ಶ್ರೀಪಾದರಾಜರು ಶ್ರೀರಂಗದ ರಂಗನಾಥಸ್ವಾಮಿಯ ಅಂತರಂಗ ಭಕ್ತರಾಗಿದ್ದುದರಿಂದ ಮತ್ತು ಬಹುಶಃ ಪಂಢರಾಪುರದ ವಿಠ್ಠಲನ ಭಕ್ತರಾಗಿದ್ದ ವಾರಕರೀ ಪಂಥದ ವಿಠ್ಠಲ ಭಜನೆಯ ಪ್ರಭಾವದಿಂದಲೂ 'ರಂಗವಿಠ್ಠಲ' ಅಂಕಿತದಿಂದ ಕೃತಿ ರಚನೆ ಮಾಡಿರುವರು. ಕೀರ್ತನೆ, ಸುಳಾದಿ, ಉಗಾಭೋಗ, ವೃತ್ತನಾಮ, ದಂಡಕ - ಈ ಎಲ್ಲ ಪ್ರಕಾರಗಳಲ್ಲೂ ಕೃತಿರಚನೆ

ಮಾಡಿರುವರಾದರೂ ಎಲ್ಲವನ್ನೂ ಒಟ್ಟಾಗಿ 'ಕೀರ್ತನೆ', 'ಪದ', 'ದೇವರನಾಮ'ಗಳೆಂದೇ ಕರೆದು ವ್ಯವಹರಿಸುವುದು ರೂಢಿ. ಸಂಖ್ಯಾದೃಷ್ಟಿಯಿಂದ 'ಕೀರ್ತನೆ'ಗಳಿಗೆ ಮೊದಲಸ್ಥಾನ. 'ಕೀರ್ತನೆ' ಒಟ್ಟಾರೆ ಹರಿದಾಸ ಸಾಹಿತ್ಯದ ಪ್ರಮುಖ ಆಕರ್ಷಣೆಯೂ ಹೌದು. ಸ್ಥೂಲವಾಗಿ ಕೀರ್ತನೆಯ ಸ್ವರೂಪ ಹೀಗಿದೆ:

ಪಲ್ಲವಿ ಅನುಪಲ್ಲವಿ ಮತ್ತು ನುಡಿಗಳಿಂದ ಕೂಡಿದ ತ್ರಿಧಾತುಕ ರಚನೆ ಕೀರ್ತನೆ. ರಚನಕಾರರ ಆಶಯ, ಅನುಭವ, ದರ್ಶನ, ಕಾಣ್ಕೆಗಳು ಪಲ್ಲವಿಯಲ್ಲಿ, ಸೂತ್ರರೂಪಾದಿಯ ಅಭಿವ್ಯಕ್ತಿ ಪಡೆದಿರುತ್ತವೆ. 'ಪಲ್ಲವಿ'ಯ ಆ ಭಾವ 'ಅನುಪಲ್ಲವಿ'ಯಲ್ಲಿ ಮುಂದುವರಿದು 'ನುಡಿ'ಗಳಲ್ಲಿ ದೃಷ್ಟಾಂತಗಳ ಮೂಲಕವೋ ಇತರ ಅನುಭವದ ನುಡಿಗಳ ಮೂಲಕವೋ ಸಮರ್ಥನೆ ಪಡೆಯುತ್ತದೆ. ನುಡಿಗಳು ಹೆಚ್ಚಾಗಿ ನಾಲ್ಕು ಸಾಲಿನವು. ಎರಡು ಸಾಲುಗಳ ನುಡಿಗಳೂ ಇವೆ. ನಾಲ್ಕಕ್ಕಿಂತ ಹೆಚ್ಚು ಸಾಲುಗಳು ಬಂದಿರುವ ನಿದರ್ಶನಗಳೂ ಉಂಟು. ಸಾಮಾನ್ಯವಾಗಿ ಇಂತಹ ಮೂರು, ಐದು, ಏಳು- ಹೀಗೆ ನುಡಿಗಳು ಬೆಸಸಂಖ್ಯೆಯಲ್ಲಿರುತ್ತವೆ. ಪ್ರತಿಯೊಂದು ಕೀರ್ತನೆಯ ಕೊನೆಯ ನುಡಿಯಲ್ಲಿ ಆಯಾ ರಚನಕಾರರ ಅಂಕಿತವಿರುತ್ತದೆ. ಶ್ರೀಪಾದರಾಜರ ಕೀರ್ತನೆಗಳಲ್ಲಿ ಮೂರರಿಂದ ಇಪ್ಪತ್ತೇಳರವರೆಗೂ ನುಡಿಗಳಿದ್ದು ಇಪ್ಪತ್ತೇಳು ನುಡಿಗಳಿರುವ 'ಮಧ್ವನಾಮ'ವೇ ಅವುಗಳಲ್ಲಿ ದೊಡ್ಡದು. ಮೂರರಿಂದ ಐದು ನುಡಿಗಳಿರುವ ಕೀರ್ತನೆಗಳೇ ಹೆಚ್ಚು. 'ರಂಗವಿಠಲ' ಎಂಬ ಅವರ ಅಂಕಿತ ಅವರ ಎಲ್ಲ ಕೃತಿಗಳ ಕೊನೆಯಲ್ಲೂ ಬರುತ್ತದೆ. ಶ್ರೀಪಾದರಾಜರ ಒಂದು ಸುಪ್ರಸಿದ್ಧ ಕೀರ್ತನೆ ಹೀಗಿದೆ:

*ಕಂಗಳಿದ್ಯಾತಕೋ ಕಾವೇರಿರಂಗನ ನೋಡದ ||ಪ||*

*ಜಗಂಗಳೊಳಗೆ ಮಂಗಳ ಮೂರುತಿ*
*ರಂಗನ ಶ್ರೀಪಾದಂಗಳ ನೋಡದ ||ಅ.ಪ||*

*ಎಂದಿಗಾದರೊಮ್ಮೆ ಜನರು*
*ಬಂದು ಭೂಮಿಯಲ್ಲಿ ನಿಂದು*
*ಚಂದ್ರ ಪುಷ್ಕರಿಣಿ ಸ್ನಾನವ ಮಾಡಿ ಆ*
*ನಂದದಿಂದಲಿ ರಂಗನ ನೋಡದ ||೧||*

*ಹರಿಪಾದೋದಕ ಸಮ ಕಾವೇರಿ*
*ವಿರಜಾನದಿ ಸ್ನಾನವ ಮಾಡಿ*
*ಪರಮ ವೈಕುಂಟ ರಂಗಮಂದಿರ*
*ಪರವಾಸುದೇವನ ನೋಡದ ||೨||*

*ಹಾರ ಹೀರ ವೈಜಯಂತಿ*
*ತೋರ ಮುತ್ತಿನ ಸರವ ಧರಿಸಿ*
*ತೇರನೇರಿ ಬೀದಿಲಿ*
*ಮೆರೆವ ರಂಗವಿಠಲನ ನೋಡದ ||೩||*

'ಕೀರ್ತನೆ' ಎಂದರೆ 'ಸ್ತುತಿ', 'ಹೊಗಳುವಿಕೆ' ಎಂಬುದು ಶಬ್ದಾರ್ಥ. ನವವಿಧ ಭಕ್ತಿ ಮಾರ್ಗಗಳಲ್ಲಿ ಕೀರ್ತನಭಕ್ತಿಯೂ ಒಂದು. ಅಂದರೆ ಭಗವಂತನನ್ನು ಗಾಯನ ಮುಖೇನ ಸ್ತುತಿಸುವುದು ಎಂದಿಟ್ಟುಕೊಳ್ಳಬಹುದು. ಕನ್ನಡದ ಈ ಪ್ರಕಾರಕ್ಕೆ ಸುಮಾರು ಎಂಟುನೂರು ವರ್ಷಗಳ ಹಳಮೆಯಿದೆ; ಬಸವಾದಿ ಶಿವಶರಣರು ರಚಿಸಿದ ಹಾಡುಗಳು ಈ ಕೀರ್ತನ ಪ್ರಕಾರಕ್ಕೆ ಮೂಲವೂ ಮಾದರಿಯೂ ಆಗಿದ್ದವೆಂಬುದು ಡಾ.ಎಲ್. ಬಸವರಾಜುರವರ ಅಭಿಪ್ರಾಯ.[1] ಜೊತೆಗೆ ಸಮಾನಧರ್ಮಿಗಳಾದ, ಶ್ರೀರಂಗದಲ್ಲೇ ಇದ್ದ ಶ್ರೀವೈಷ್ಣವ ಆಳ್ವಾರರ 'ಪ್ರಬಂಧ' ಗಳಿಂದಲೂ ಶ್ರೀಪಾದರಾಜರಿಗೆ ಸಾಕಷ್ಟು ಸ್ಫೂರ್ತಿ ಪ್ರೇರಣೆಗಳು ದೊರೆತಿರಬೇಕು. ಬಹುಶಃ

ವಿಷ್ಣುದೇವಾಲಯಗಳಲ್ಲಿ ಪ್ರಬಂಧಗಳನ್ನು ನಿತ್ಯಾನುಸಂಧಾನ ಮಾಡುತ್ತಿದ್ದ ರೀತಿಯಲ್ಲೇ ಶ್ರೀಪಾದರಾಜರು ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿ ಪೂಜಾಕಾಲದಲ್ಲಿ ಹಾಡಿದ್ದಿರಬೇಕು.

ಕೀರ್ತನೆಗಳ ವಸ್ತು ಭಿನ್ನಭಿನ್ನವೆಂಬಂತೆ ಕಂಡರೂ ಎಲ್ಲ ಕೀರ್ತನೆಗಳಲ್ಲಿ ಸೂತ್ರಪ್ರಾಯವಾಗಿರುವ ವಸ್ತು ಹರಿಭಕ್ತಿ. ಸಂಗೀತದ ಹಿನ್ನೆಲೆಯಲ್ಲಿ, ನೀತಿಯ ಚೌಕಟ್ಟಿನಲ್ಲಿ, ಸಾಮಾಜಿಕ ವರ್ತುಲಗಳಲ್ಲಿ ಅಧ್ಯಾತ್ಮವನ್ನು ಬಿತ್ತರಿಸುವ, ಹರಿಭಕ್ತಿ ಹಾಗೂ ಭಕ್ತರ ಹಿರಿಮೆ-ಗರಿಮೆಗಳನ್ನು ಸಾರುವ ಈ ಕೀರ್ತನ ಪ್ರಕಾರ ಪಂಡಿತ ಪಾಮರರಿಬ್ಬರನ್ನೂ ರಂಜಿಸಬಲ್ಲದು. ರಾಗ-ತಾಳಗಳೆರಡೂ ಪ್ರಧಾನವಾಗಿರುವ ಕೀರ್ತನೆ ತಾಳಪ್ರಧಾನವಾದ ಸುಳಾದಿಗಿಂತ ಸರಳವಾದ; ರಾಗ ಪ್ರಧಾನವಾದ ಉಗಾಭೋಗಕ್ಕಿಂತ ಬಿಗಿಯಾದ ರಚನೆ. ಪಲ್ಲವಿ, ಅನುಪಲ್ಲವಿ, ನುಡಿಗಳಲ್ಲಿ ದ್ವಿತೀಯ ಪ್ರಾಸವಿರುತ್ತದೆ. ಮತ್ತು 'ವಡಿ' ಎದ್ದು ಕಾಣುತ್ತದೆ. ಅಲ್ಲಲ್ಲಿ ಒಳಪ್ರಾಸವಿರುವುದೂ ಉಂಟು. ಉಪಮೆ ರೂಪಕಾದಿ ಅಲಂಕಾರಗಳಿಂದ ಕೂಡಿದ, ಜೀವನಾನುಭವದಿಂದ ತುಂಬಿ ತುಳುಕುತ್ತಿರುವ ಕೀರ್ತನೆಗಳು ಓದುಗರು, ಕೇಳುಗರು ಮತ್ತು ಹಾಡುವವರು-ಎಲ್ಲರಿಗೂ ಆಪ್ಯಾಯಮಾನವಾಗಿರುತ್ತವೆ. ಕೀರ್ತನೆಗಳನ್ನು ಅಲ್ಪಸ್ವಲ್ಪ ಸಂಗೀತಜ್ಞಾನವುಳ್ಳವರೂ ಹಾಡಬಹುದು.

**ಆ. ಸುಳಾದಿ:** ಸುಳಾದಿ ಹರಿದಾಸರು ಬಳಸಿರುವ ಇನ್ನೊಂದು ವಿಶಿಷ್ಟ ಗೇಯರಚನೆ. ತಾಳಪ್ರಧಾನ ರಚನೆಗಳಿವು. ಒಂದೊಂದು ನುಡಿಯೂ ಒಂದೊಂದು ತಾಳದಲ್ಲಿದ್ದು ಅಂತಹ ಐದು ಅಥವಾ ಏಳು ನುಡಿಗಳಿರುತ್ತವೆ. ಧ್ರುವ ಮಠ್ಯ ರೂಪಕ ಝಂಪೆ ತ್ರಿಪುಟ, ಅಟ್ಟ ಮತ್ತು ಏಕ- ಇವುಗಳನ್ನು ಸುಳಾದಿಯ ಸಪ್ತತಾಳಗಳೆಂದೇ ಕರೆಯಲಾಗಿದೆ. ಈ ಏಳುತಾಳಗಳೊಂದಿಗೆ ಆದಿತಾಳವೂ ಬರುವುದು. ಹಾಗಾಗಿ ಕೆಲವೊಮ್ಮೆ ಎಂಟು ನುಡಿಗಳಿರುವುದೂ ಉಂಟು. ನುಡಿಗಳ ಪಾದಗಳಲ್ಲಿ ನಿಯತ ಸಂಖ್ಯಾ ನಿಯಮವಿರುವುದಿಲ್ಲ. ಸುಳಾದಿಯ ಪ್ರತಿ ನುಡಿಯ ಕೊನೆಯಲ್ಲೂ ಆಯಾ ರಚನಕಾರರ 'ಅಂಕಿತ'ವಿರುತ್ತದೆ. ಮತ್ತು ಸುಳಾದಿಯ ಕಡೆಯಲ್ಲಿ ಎರಡು ಸಾಲುಗಳ ಒಂದು 'ಜತೆ'ಯಿದ್ದು, ಜತೆಯಲ್ಲೂ ರಚನಕಾರರ ಅಂಕಿತ ನಿಯತವಾಗಿ ಬರುತ್ತದೆ. ಕೀರ್ತನೆಯ ಸಾರ ಪಲ್ಲವಿಯಲ್ಲಿರುವಂತೆ ಸುಳಾದಿಯ ಸಾರ 'ಜತೆ'ಯಲ್ಲಿರುತ್ತದೆ. 'ಕನ್ನಡ ದಾಸ ಸಾಹಿತ್ಯದ ವಿನಾ ಈ ಜಾತಿ ಬೇರೆಲ್ಲಿಯೂ ಕಂಡುಬರುವುದಿಲ್ಲ'[2]ವೆಂಬ ಮಾತಿದೆ. ಅಂತೆಯೇ ಸಧ್ಯಕ್ಕೆ, ನಮಗೆ ತಿಳಿದಂತೆ ಶ್ರೀಪಾದರಾಜರೇ ಅಧಿಕೃತವಾಗಿ ಮೊದಲ ಸುಳಾದಿ ರಚನಕಾರರು. ಐದು ತಾಳಗಳಲ್ಲಿರುವ ಅವರ ಒಂದು ಸುಳಾದಿ ಹೀಗಿದೆ:

**ಧ್ರುವ ತಾಳ**

*ನಿನ್ನಾಧೀನ ಶರೀರ ಕರಣ ಚೇಷ್ಟೆಗಳೆಲ್ಲ*
*ನಿನ್ನಾಧೀನ ಬಂಧ ಮೋಕ್ಷ ನಿರಯಗಳು*
*ನಿನ್ನಾಧೀನ ಯೋಗ್ಯತೆ ಸಾಧನ ಸಾಧ್ಯಗಳೆಲ್ಲ*
*ನಿನ್ನಾಧೀನ ಸುಕೃತ ದುಷ್ಕೃತ ಫಲವು*
*ನಿನ್ನಾಧೀನ ಚರಾಚರವೆಂದು ಶ್ರುತಿಸಾರುತಲಿವೆ*
*ಇಂತು ಪುಣ್ಯ ಪಾಪವೆಲ್ಲ ನಿನ್ನ ಲೇಪಿತವೊ ದೇವ*
*ಎಂತು ಜೀವರನು ಪುಣ್ಯ ಪಾಪಂಗಳನುಣಿಸುವೆ*
*ಅಂತರಾತ್ಮನೆ ನಿನ್ನ ಮಹಿಮೆಗೆ ನಮೋ ಎಂಬೆ*
*ಎಂತೋ ಚಿತ್ತವಿನ್ನೆಂತೋ ಪಾಲಿಸೋ ರಂಗವಿಠಲ ॥೧॥*

**ಮಠ್ಯ ತಾಳ**

*ಮುನ್ನ ನಿನ್ನ ಚರಣ ಕಮಲವ ನಂಬಿದೆ*
*ಭವಭವಂಗಳಲಿ ಬಂದೆನೋ*

*ಪನ್ನಗೇಶ ಶಯನ ಶ್ರೀಹರೇ*
*ಇನ್ನು ಬಿಡೆನೋ ಬಿಡೆನಯ್ಯಾ ಸಂಪನ್ನ*
*ಎನ್ನ ಗುಣದೋಷವರಸದೆ*
*ಇನ್ನು ಕಾಯೋ ರಂಗವಿಠಲ ॥೧॥*

**ರೂಪಕತಾಳ**

*ಕರಣಗಳು ಬಿಡದೆ ತಮ್ಮ ತಮ್ಮ*
*ವಿಷಯಂಗಳಿಗೆ ಎಳೆವುತಲಿವೆ*
*ಎನ್ನ ಹರಣ ನಿನ್ನದು ಕರಣಾಕರನೆ*
*ಈ ಧರೆ ಹವಣ ಮಾಣಿಸೋ ಹರಿಯೇ*
*ನಿನ್ನ ಚರಣ ಭಕುತರ ಶರಣಾದೆನು*
*ಹೊರೆವುದು ಎನ್ನ ರಂಗವಿಠಲರೇಯ ॥೨॥*

**ಅಟ್ಟ ತಾಳ**

*ಬಂದು ಬಂದು ನಾನಾಭವದಲಿ ಬೆಂದೆನಯ್ಯ*
*ನಂದನಂದನ ಇಂದಿರಾನಂದ*
*ಕುಂದ ಶುದ್ಧ ಧವಳದಂತೆ ಮಂದಹಾಸ*
*ನಂದನ ಕಂದ ಇಂದಿರಾನಂದ*
*ಇಂದೆನ್ನ ಸಲಹಯ್ಯ ರಂಗವಿಠಲ ॥೪॥*

**ಏಕತಾಳ**

*ಹರಿಯೇ ನಿನ್ನ ಒಮ್ಮೆ ನೆನೆದವ*
*ನರಕವ ಹೊಗನಂತೆ*
*ಆನು ಒಮ್ಮೆ ಇಮ್ಮೆ ನೆನೆವೆನಯ್ಯ*
*ಆನು ನಿನ್ನ ನಂಬಿದೆ ಕರುಣೆಗಳರಸ*
*ಹೊರೆದೆನ್ನ ಕಾಯೋ ರಂಗವಿಠಲ ॥೫॥*

**ಜತೆ**

*ಮಂಗಳಮಹಿಮ ಭುಜಂಗಶಯನ ನಮೋ*
*ಜಂಗುಳಿ ದೈವದ ಗಂಡ ರಂಗವಿಠಲ ॥*

ಸಂಗೀತದ ಹಿನ್ನೆಲೆಯಲ್ಲಿ, ಸಾಹಿತ್ಯದ ಸ್ವರೂಪದಲ್ಲಿ, ಆಧ್ಯಾತ್ಮಿಕ ಮಹತ್ವದೊಂದಿಗೆ ಮಾಧ್ವತತ್ವಗಳನ್ನು ಬಿತ್ತರಿಸುವ ಸುಳಾದಿಗಳು ನಿಜಕ್ಕೂ ಕನ್ನಡ ಸಾಹಿತ್ಯ, ಧರ್ಮ ಹಾಗೂ ಸಂಗೀತ ವಲಯಗಳಿಗೆ ಹರಿದಾಸರ ಅಮೂಲ್ಯ ಕೊಡುಗೆ.

**೩. ಉಗಾಭೋಗ:** ಉಗಾಭೋಗವೂ ಹರಿದಾಸರು ಬಳಸಿರುವ ಇನ್ನೊಂದು ಗೇಯ ಪ್ರಕಾರ. ಯಾವುದೇ ರಾಗತಾಳಗಳ ಕಟ್ಟಿಗೆ ಒಳಪಡದ, ಬೇಕೆನಿಸಿದ ರಾಗವನ್ನು ಅಳವಡಿಸಬಹುದಾದ ಸರಳ ಬಂಧವಿದು . ಪಾದಗಳಲ್ಲಿ ನಿಯತ ಸಂಖ್ಯಾನಿಯಮವಿಲ್ಲ.

ರಚನೆಯ ಕೊನೆಯಲ್ಲಿ ರಚನಕಾರರ ಅಂಕಿತವಿರುತ್ತದೆ. ಮೇಲ್ನೋಟಕ್ಕೆ ಇವು ವಚನಗಳನ್ನು ಹೋಲುತ್ತವೆಯಾದರೂ ಮೂಲಭೂತವಾಗಿ ಇವು ಸಂಗೀತ ಪ್ರಧಾನ ರಚನೆಗಳು. ನುಡಿಗಳ ತಡೆಯಿಲ್ಲ. ರಾಗ-ತಾಳ ಪ್ರಧಾನ ಕೀರ್ತನೆ ಹಾಗೂ ತಾಳಪ್ರಧಾನ ರಚನೆಯಾದ ಸುಳಾದಿಗಿಂತ ಲಘುವಾದ ರಚನೆ ಘನೀಭೂತವಾದ ಭಾವನೆಗಳ ಅಭಿವ್ಯಕ್ತಿಯನ್ನಿಲ್ಲಿ ಕಾಣುತ್ತೇವೆ. ಶ್ರೀಪಾದರಾಜರ ಒಂದು ಉಗಾಭೋಗ ಹೀಗಿದೆ:

*ಧ್ಯಾನವು ಕೃತಯುಗದಿ*
*ಯಜನಯಜ್ಞವು ತ್ರೇತಾಯುಗದಿ*
*ದಾನವಾಂತಕನ ದೇವತಾರ್ಚನೆ ದ್ವಾಪರಯುಗದಿ*
*ಆ ಮಾನವರಿಗೆಷ್ಟು ಫಲವೋ ಅಷ್ಟು ಫಲವು*
*ಕಲಿಯುಗದಿ ಗಾನದಲಿ ಕೇಶವಯೆನಲು*
*ಕೈಗೂಡುವನು ರಂಗವಿಠಲ.*

-ಶ್ಲೋಕವನ್ನು ಹೋಲುವ ಈ ಪ್ರಕಾರವನ್ನು ಒಂದೇ ರಾಗದಲ್ಲಿ ಅಥವಾ ರಾಗಮಾಲಿಕೆಯಲ್ಲಿ ಹಾಡಿದರೆ ಕೇಳಲು ಸೊಗಸಾಗಿರುತ್ತದೆ. ಬಹುತೇಕ ಉಗಾಭೋಗಗಳು ದ್ವಿತೀಯ ಪ್ರಾಸದಿಂದ ಕೂಡಿವೆ. ವಚನಗಳಲ್ಲಿ ಸಾಮಾನ್ಯವಾಗಿ ದ್ವಿತೀಯ ಪ್ರಾಸವಿರುವುದಿಲ್ಲ. ಕೆಲವು ಉಗಾಭೋಗಗಳಂತೂ ಅಂಕಿತವನ್ನು ಬದಲಿಸಿಬಿಟ್ಟರೆ ವಚನಗಳಾಗಿಬಿಡುತ್ತವೆ. ವಚನಗಳೇ ಉಗಾಭೋಗಗಳಿಗೆ ಮೂಲವೋ ಅಥವಾ ಇವೆರಡಕ್ಕೂ ಬೇರೆ ಒಂದು ಮೂಲವಿರಬಹುದೋ ಎನ್ನುವ ಪ್ರಶ್ನೆಯನ್ನೆತ್ತಿದ್ದಾರೆ, ಡಾ. ಚಿದಾನಂದಮೂರ್ತಿಯವರು.[3] ಉಗಾಭೋಗ ಹಾಗೂ ಶರಣರ ವಚನಗಳೆರಡಕ್ಕೂ ಪ್ರಾಚೀನವಾದ ಉಗಾಭೋಗವೆಂಬ ತಾಳವೃತ್ತವೆ ಮೂಲವೆನ್ನುತ್ತಾರೆ ಆರ್.ಎಸ್. ಪಂಚಮುಖಿಯವರು.[4] ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಸಂಶೋಧನೆ ಆಗಬೇಕಾಗಿದೆ.

ಜೀವನದ ಹಲವಾರು ಅನುಭವಗಳನ್ನು ಗರ್ಭೀಕರಿಸಿಕೊಂಡಿರುವ ಉಗಾಭೋಗಗಳಿಗೆ ಶುದ್ಧಸಾಹಿತ್ಯದ ದೃಷ್ಟಿಯಿಂದ ವಿಶೇಷ ಮೌಲ್ಯವಿದೆ. ಹರಿನಾಮಮಹಿಮೆ, ಹರಿಭಕ್ತಿ, ಹರಿದಾಸರ ಮನಸ್ಸಿನ ತಳಮಳಗಳೆಲ್ಲ ಈ ಉಗಾಭೋಗಗಳಲ್ಲಿ ದಾಖಲಾಗಿವೆ. ಕೀರ್ತನೆಗಳಿಗಿಂತ ಬಿಗಿಯಾದ ಬಂಧವನ್ನಿಲ್ಲಿ ಕಾಣುತ್ತೇವೆ. ಲಾಲಿತ್ಯ, ರಂಜನೆಗಳು ಹಿತಮಿತವಾಗಿ ಮೇಳೈಸಿರುವ ಉಗಾಭೋಗಗಳು ಓದುಗರ ಮನವನ್ನು ತಟ್ಟನೆ ಸೆರೆಹಿಡಿಯಬಲ್ಲವು.

ಕೀರ್ತನೆ ಸುಳಾದಿ ಉಗಾಭೋಗ-ಮುಖ್ಯವಾದ ಈ ಮೂರು ಪ್ರಕಾರಗಳನ್ನು ಬಿಟ್ಟರೆ ಉಳಿದಂತೆ ವೃತ್ತನಾಮ ಮತ್ತು ದಂಡಕ-ಈ ಎರಡು ಪ್ರಕಾರಗಳು ಶ್ರೀಪಾದರಾಜರಲ್ಲಿ ಕಾಣಿಸಿಕೊಂಡಿವೆ.

**ಈ. ವೃತ್ತನಾಮ:** ವೃತ್ತನಾಮವೆಂಬುದು ಪಲ್ಲವಿ, ಅನುಪಲ್ಲವಿ ಬಳಿಕ ಪದ-ಶ್ಲೋಕ-ಪದ ಶ್ಲೋಕ ಹೀಗೆ ಮುಂದುವರಿಯುವ ಒಂದು ಸಾಹಿತ್ಯ ಪ್ರಕಾರ. ಶ್ರೀಪಾದರಾಜರ ವೃತ್ತನಾಮ ಹೀಗಿದೆ:

*ಮಾನನಿಧಿ ಶ್ರೀಕೃಷ್ಣ ಮಧುರೆಗೈದುವನಂತೆ*
*ಏನು ಪಥವಮ್ಮ ನಮಗೆ ||ಪ||*

*ಮಾನವೇ ನಿನ್ನಿದಕೆ ಮಾನಿನಿಯರೆಲ್ಲರು*
*ಆಣೆಯನು ಕಟ್ಟಿವನಿಗಡ್ಡ ನಿಲ್ಲುವ ಬನ್ನಿ ||ಅ.ಪ||*

*ಕಳ್ಳತನವೇ ನಮ್ಮ ವಲ್ಲಭರು ಈ ಸುಳಿವು*
*ಎಲ್ಲವನು ಬಲ್ಲರಮ್ಮ*
*ಒಲ್ಲದಲೆ ನಮ್ಮ ಬಿಟ್ಟರೆ ಒಳಿತು ವನಜಾಕ್ಷ*

*ಎಲ್ಲಿಗೈದಿದರೆ ನಾವಲ್ಲಿಗೈದುವ ಬನ್ನಿ ॥೧॥*

*………………………………….. ॥೨॥*

*…………………………………… ॥೩॥*

**ಶ್ಲೋಕ**

*ಹಲವು ಕಾಲವು ನಿನ್ನ ಸ್ನೇಹಸುಖವ ಹಾರೈಸಿಕೊಂಡಿರುತಿಹ*

*ಲಲನಾವ್ಯೂಹವ ಬಿಟ್ಟು ಅಕ್ರೂರನೊಡನೆ ನೀ ಮಧುರೆಗೆ ಪೋದರೆ*

*ಕಳೆಯಲಾಪೆವೇ ಕಾಂತಕೇಳು ದಿನವ ಈ ಕಂತುವಿನ ಬಾಧೆಗೆ*

*ಘಳಿಗೊಂದು ಯುಗವಾಗಿ ತೋರುತಿಹುದೋ ಜಲಜಾಕ್ಷ ನೀನಿಲ್ಲದೆ*

**ಪದ**

*ಬ್ಯಾಡ ಮಧುರಿಗೆ ಪೋಗಬ್ಯಾಡೆಲವೋ ಶ್ರೀಕೃಷ್ಣ*
*ಬೇಡಿಕೊಂಬೆವೋ ದೈನ್ಯದಿ*
*ನೋಡು ನಮ್ಮ್ಯಾಲೆ ದಯಮಾಡು ಮದನಂಗೀಡು*
*ಮಾಡುವುದೇನುಚಿತವೆಲೋ ಮಾಧವ ಕೃಪಾಕರನೆ ॥೪॥*

-ಹೀಗೆ ಹನ್ನೆರಡು ನುಡಿಗಳಲ್ಲಿ ಮುಂದುವರಿಯುವ ಈ ವೃತ್ತನಾಮದಲ್ಲಿ ಸಂಭಾಷಣಾ ತಂತ್ರದ ಸೊಗಸಿದೆ. ಬಿಲ್ಲಹಬ್ಬಕ್ಕೆಂದು ಗೋಕುಲದಿಂದ ಮಧುರೆಗೆ ಹೊರಟು ನಿಂತ ಕೃಷ್ಣನನ್ನು ಗೋಪಿಯರೆಲ್ಲ ಅಡ್ಡಗಟ್ಟಿ ನಿಲ್ಲಿಸುವುದೇ ಇಲ್ಲಿಯ ವಸ್ತು. ಕೃಷ್ಣ-ಗೋಪಿಯರ ಮಾತಿನ ಚಕಮಕಿಯ ಹಿನ್ನೆಲೆಯಲ್ಲಿ ಪರಸ್ಪರರ ವಿಶ್ವಾಸ ಕಳೆಗಟ್ಟಿದೆ. ಈ ಕೃತಿಗೆ 'ಶೃಂಗಾರ ಪಾರಿಜಾತ' ವೆಂಬ ಹೆಸರೂ ಇದೆ.

**ಉ. ದಂಡಕ:** 'ಶ್ರೀ ಲಕ್ಷ್ಮೀನೃಸಿಂಹ ಪ್ರಾದುರ್ಭಾವ ದಂಡಕ'ವೆಂಬ ಹೆಸರಿನ ದಂಡಕ ಶ್ರೀಪಾದರಾಜರ ಮತ್ತೊಂದು ವಿಶಿಷ್ಟರಚನೆ. ಹಿರಣ್ಯ ಕಶಿಪುವಿನ ಸಂಹಾರಾರ್ಥವಾಗಿ ವಿಷ್ಣು ನರಸಿಂಹಾವತಾರಿಯಾಗಿ ಬರುವುದೇ ಕೃತಿಯ ವಸ್ತು. ಭಾಗವತ ಸಪ್ತಮಸ್ಕಂಧದ ಅಷ್ಟಮ ಅಧ್ಯಾಯದಲ್ಲಿ ಬರುವ ಹರಿಯ ನರಸಿಂಹಾವತಾರದ ಕತೆಯ ಅನುವಾದದಂತಿದೆ, ಈ ದಂಡಕ:

*ಶ್ರೀರಮಾ ಮಾನಿನೀ ಮಾನಸೇಂದಿವರೋ*
*ತ್ಫುಲ್ಲ ಸಂಪುಲ್ಲ ಚಂದ್ರಾ ಚಿದಾನಂದ ಸಾಂ*
*ದ್ರಾ ಸದಾ ಸನ್ನತೇಂದ್ರಾ ನಮೋಪೇಂದ್ರ ನಿ*
*ಸ್ತಂದ್ರ ನೀ ಕೇಳು …..*

-ಹೀಗೆ ಪ್ರಾರಂಭವಾಗಿ ೫೪೬ ಸಾಲುಗಳಲ್ಲಿ ಮುಂದುವರಿಯುವ ಈ ಕೃತಿಯಲ್ಲಿ ಪ್ರತಿಸಾಲಿನಲ್ಲೂ ಐದೈದು ಮಾತ್ರೆಗಳ ಐದೈದು ಗಣಗಳು ಬರುತ್ತವೆ. ನರಸಿಂಹಾವತಾರಿ ಹರಿಭಕ್ತ ಪ್ರಹ್ಲಾದನಿಗೆ ಅನುಗ್ರಹಿಸಿದ ಕತೆಯಿದು. ರಗಳೆಯನ್ನು ನೆನಪಿಸುವ ನಿರರ್ಗಳ ಓಟ ಈ ಪ್ರಕಾರದ ವೈಶಿಷ್ಟ್ಯ. ಇದುವರೆಗೆ ಹರಿದಾಸಸಾಹಿತ್ಯದಲ್ಲಿ ಸಿಕ್ಕಿರುವ ದಂಡಕ ಇದೊಂದೇ.

**ಆ. ಪ್ರಮುಖ ವಿಭಾಗಗಳು:** ಶ್ರೀಪಾದರಾಜರ ಇಂತಹ ಎಲ್ಲ ಉಪಲಬ್ಧ ಕೃತಿಗಳನ್ನೂ ಸಂಗ್ರಹಿಸಿ ಡಾ.ಜಿ. ವರದರಾಜರಾಯರು ಶಾಸ್ತ್ರೀಯವಾಗಿ ಸಂಪಾದಿಸಿಕೊಟ್ಟಿದ್ದಾರೆ. ಒಟ್ಟು ೧೦೧ ಕೃತಿಗಳಿವೆ. .ಆ ಪೈಕಿ ೬೫ ಕೃತಿಗಳು ಖಚಿತವಾಗಿ ಇವರವೇ ಎಂದೂ ೨೮ ಕೃತಿಗಳು ಒಂದೊಂದೇ ಆಕರದಲ್ಲಿ ದೊರೆತಿರುವುದರಿಂದ ಅಷ್ಟು ಖಚಿತವಾಗಿ 'ಅವು ಶ್ರೀಪಾದರಾಜರ ಕೃತಿಗಳೇ' ಎಂದು ಹೇಳಲು ಬರುವುದಿಲ್ಲವೆಂಬ ಅಭಿಪ್ರಾಯ ಸಂಪಾದಕರದು. ೨ ಕೃತಿಗಳನ್ನು ಪಾಠಪ್ರಭೇದಗಳೆಂದು ಗುರುತಿಸಿದ್ದರೆ ಉಳಿದ ೬ ಕೃತಿಗಳು ಅಂಕಿತ ಸಂದಿಗ್ಧವಾಗಿದ್ದು ಅವುಗಳನ್ನೂ 'ಇವು ಶ್ರೀಪಾದರಾಜರ ಕೃತಿಗಳೇ' ಎಂದು ಹೇಳಲು ಸಾಧ್ಯವಾಗಿಲ್ಲ. ಅವುಗಳಲ್ಲಿ ಮೂರು

ಸುಳಾದಿಗಳು; ಹದಿಮೂರು ಉಗಾಭೋಗಗಳು; ಒಂದು ವೃತ್ತನಾಮ; ಒಂದು ದಂಡಕ. ಉಳಿದ ಎಂಬತ್ಮೂರು ಕೀರ್ತನೆಗಳು. ಈ ಕೃತಿ ಸಮುದಾಯವನ್ನು ಅಭ್ಯಾಸದ ಅನುಕೂಲಕ್ಕಾಗಿ ನಾಲ್ಕು ಮುಖ್ಯಭಾಗಗಳಾಗಿ ವಿಂಗಡಿಸಿಕೊಳ್ಳಬಹುದು:

ಅ. ಆತ್ಮನಿವೇದನೆ

ಆ.ದೈವಭಕ್ತಿ ನಿರೂಪಣೆ

ಇ. ದ್ವೈತ ತತ್ವ ಪ್ರತಿಪಾದನೆ

ಈ. ನೀತಿಬೋಧನೆ.

[1]ಶಿವದಾಸ ಗೀತಾಂಜಲಿ, ಪುಟ-೭೭

[2]ಕರ್ನಾಟಕ ಸಂಗೀತವೂ ದಾಸಕೂಟವೂ

[3]ಸಂಶೋಧನ ತರಂಗ, ಪುಟ. ೪೭

[4]ಕರ್ಣಾಟಕದ ಹರಿದಾಸ ಸಾಹಿತ್ಯ, ಪುಟ.೧೩೧

## ೩. ಕೃತಿಗಳು (೧)

**ಅ. ಆತ್ಮನಿವೇದನೆ:**

ಸಾಮಾನ್ಯವಾಗಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಾಧನೆ, ಅಗತ್ಯಗಳಿಗನುಗುಣವಾಗಿ ತನ್ನದೇ ಆದ ಅಭಿವ್ಯಕ್ತಿ ಕ್ರಮವನ್ನು ಕಂಡುಕೊಳ್ಳುತ್ತಾನೆ. ಕೆಲವರು ಕಾಷಾಯವಸ್ತ್ರ ಧರಿಸಿ ತಪಸ್ಸು ಮಾಡಬಹುದು, ಕೆಲವರು ಚಿತ್ರ ಬಿಡಿಸಬಹುದು, ಮತ್ತೆ ಕೆಲವರು ಕಾವ್ಯ ರಚಿಸುತ್ತಲೋ, ಸಂಗೀತ ಹಾಡುತ್ತಲೋ ಮೈಮರೆಯಬಹುದು, ಹಾಗೆಯೇ ಶ್ರೀಪಾದರಾಜಾದಿ ಹರಿದಾಸರು ಹರಿಪರವಾದ ಕೀರ್ತನೆಗಳನ್ನು ರಚಿಸಿ ಹಾಡುವ ಮೂಲಕ ತಮ್ಮ ಸಾಧನೆಯ ಮಾರ್ಗವನ್ನು ಕ್ರಮಿಸಿದ್ದಾರೆ. ಅವರ ಭಕ್ತಿ, ನಿಷ್ಠೆ, ಭಕ್ತಿಯ ವೈವಿಧ್ಯ, ಗಹನವಾದ ತತ್ವವಿಚಾರಗಳನ್ನು ಸರಳ ಭಾಷೆಯ ಮೂಲಕ ಹೇಳುವ ರೀತಿ, ಹಾಗೆ ಹೇಳುವ ಸಂದರ್ಭದ ತೀವ್ರತೆ ಒತ್ತಡ ಭಾವಾವೇಶಗಳಿಗೆ ತಕ್ಕ ಭಾಷೆಯ ಬಳಕೆ, ಅದರ ಬೆಡಗು ಬಳುಕು ಬಾಗುಗಳು ಅಂತಹ ರಚನೆಗಳಿಗೆ ಕಾವ್ಯದ ಲೇಪವನ್ನಿತ್ತಿವೆ. ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅವರು ಮಾನವ ಸಮುದಾಯದ ಉತ್ತಮಿಕೆಯನ್ನು ಕುರಿತು ಚಿಂತಿಸಿದವರು. ಹಾಗಾಗಿ ಸಮಾಜದ ಬಗೆಗಿನ ಅವರ ಕಳಕಳಿ ಅವರ ಕೃತಿಗಳ ಮೂಲಕ ಹೊರಹೊಮ್ಮಿರುವುದರಿಂದ ಅವುಗಳನ್ನು ಓದಿದ. ಕೇಳಿದ ಎಲ್ಲರಿಗೂ ಅವು ಆಪ್ಯಾಯಮಾನವಾಗುತ್ತವೆ; ಹೆಚ್ಚು ಹೆಚ್ಚು ಆಪ್ತವಾಗುತ್ತಾ ಹೋಗುತ್ತವೆ. ಮತ್ತು ಪ್ರತಿಯೊಬ್ಬರಿಗೂ ತಮ್ಮ ಮನಸ್ಸಿನ ಪದರಗಳನ್ನೇ ಬಿಚ್ಚಿಟ್ಟ ಅನುಭವವಾಗುವುದೂ ದಿಟ. ಸಂತರೆಲ್ಲರೂ ಮೊದಲು ತಮ್ಮ ವೈಯಕ್ತಿಕ ಸಾಧನೆಯಿಂದ ಆತ್ಮೋದ್ಧಾರ ಮಾಡಿಕೊಂಡು ಅನಂತರ ಸಮಾಜದ ಉತ್ತಮಿಕೆಗಾಗಿ ಶ್ರಮಿಸುವುದರಿಂದ ಅವರ ಮಾತಿಗೆ ಅಧಿಕೃತತೆ ತಾನಾಗಿ ಒದಗುತ್ತದೆ. ಅವರು ಭಗವಂತನಲ್ಲಿ ತಮ್ಮ ಅಂತರಂಗವನ್ನು ತೋಡಿಕೊಂಡು ಪಶ್ಚಾತ್ತಾಪದ ಮೂಸೆಯಲ್ಲಿ ಬೆಂದು ಪರಿಶುದ್ಧರಾಗಿ ಆ ಮೂಲಕ ಲೋಕವನ್ನು ತಿದ್ದಲು ಅಧಿಕಾರವನ್ನು ಗಳಿಸುತ್ತಾರೆ. ಈ ಒಂದು ಹಂತದಲ್ಲಿ ಭಕ್ತನ ಮನಸ್ಸಿನ ಹಂಬಲ ಕಳವಳ ಕಳಕಳಿಗಳು ಹೇಗಿದ್ದವು? ಅವನ ಆಂತರಿಕ ಒಳತೋಟಿಯೇನಿತ್ತು?= ಇತ್ಯಾದಿ ವಿಚಾರಗಳು ಆಯಾ ಸಂತರ ಆತ್ಮನಿವೇದನೆಯ ಕೃತಿಗಳ ಅಭ್ಯಾಸದಿಂದ ತಿಳಿಯುತ್ತವೆ. ಅಂತೆಯೇ ಶ್ರೀಪಾದರಾಜರ ಮನದ ತಳಮಳಗಳನ್ನು ಅವರ ಆತ್ಮನಿವೇದನಾತ್ಮಕ ಕೀರ್ತನೆಗಳಿಂದ ಗ್ರಹಿಸಬಹುದು. ಅವರ ಮನಸ್ಸು ಭಗವಂತನತ್ತ ಹರಿದಾಗ, ಆ ಬೆಳಕಿನಲ್ಲಿ ಅದುವರೆಗಿನ ತಮ್ಮ ಬಾಳು ವ್ಯರ್ಥವೆಂಬ ವ್ಯಥೆ ಅವರನ್ನು ಕಾಡಿದೆ:

*ಅನ್ನಂತ ಕಾಲದಲ್ಲಿ ನಿನ್ನ ನಾನರಿಯದೆ ಭವಗಳಲ್ಲಿ ಬಂದೆನೊ*
*ಅನ್ನಂತ ಕಾಲದಲ್ಲಿ ನಿನ್ನವನೆನಿಸದೆ ಮೂರುಖನಾದೆನೊ*
*ಅನ್ನಂತ ಕಾಲದಲ್ಲಿ ನಿನ್ನ ಚರಣರತಿಯಿಲ್ಲದೆ ನೊಂದೆನೊ*
*ಅನ್ನಂತ ಕಾಲದಲ್ಲಿ ಅದಾವ ಪುಣ್ಯದಿಂದ ಬಂದು ಇಂದು*
*ನಿನ್ನವನೆನಿಸಿದೆ ಅದಾವ ಪುಣ್ಯದಿಂದಲೆನ್ನಮನ*
*ನಿನ್ನಲ್ಲೆರಗಿತೊ ನೋಯದಂತೆ*
*ಎನ್ನ ಪೊರೆದು ಪಾಲಿಸೋ ದೀನನಾಥ ಶ್ರೀ ರಂಗವಿಠಲ ॥೧॥*

…………………………

*ನೀ ಕರುಣಿಯೆಂದು ನಿನ್ನ ನಾ ಮರೆಹೊಕ್ಕೆ*
*ನೀಕರಿಸದೆ ಎನ್ನ ಶ್ರೀಕಾಂತ ಕಾಯಯ್ಯ*

…………………………

*ಕಂದರ್ಪನೆಂದೆಂದು ಕಾಡದಂತೆ ಮಾಡೋ*

………………………

*ಎನ್ನ ಮನವನು ನಿನ್ನ ಚರಣದಲೊಮ್ಮೆ ಎರಗಿಸೋ*

……………………….

*ಅಮೃತ ಒಸರುವ ಪದಪದುಮದ*
*ನೆಳಲ ನೆಲೆವನೆಯಲಿ ಎನ್ನನಿರಿಸೊ ರಂಗವಿಠಲ*

ಜತೆ

*ಬೆಂದ ಸಂಸಾರದಿ ಬಂದು ನೊಂದುಬಳಲಿದೆನಯ್ಯ*
*ನಂದನಂದನ ಕಾಯೊ ರಂಗವಿಠಲ*

-ಎಂದು ಮುಂತಾಗಿ ಆ ರಂಗವಿಠಲನೆದುರು ತಮ್ಮ ದುಗುಡ ದುಮ್ಮಾನಗಳನ್ನು ತೋಡಿಕೊಂಡು ಮಮ್ಮಲ ಮರುಗುವರು. ಇಲ್ಲಿಯ ಪದಗಳ ಪುನರುಕ್ತಿ ಹೃದಯದ ಆರ್ತತೆಯನ್ನು ಮೊಗೆಮೊಗೆದು ತೆಗೆದ ಪರಿಣಾಮವನ್ನು ಬೀರಿರುವುದಲ್ಲದೆ, ಕೀರ್ತನೆಯಲ್ಲಿ ನಾದಮಯತೆ ಭಾವುಕತೆಗಳೂ ಸಾಧಿಸಿವೆ. ಜನ್ಮಜನ್ಮಗಳಲ್ಲಿ ತೊಳಲಿ ಬಳಲಿ ಬೆಂದು ನೊಂದು ಈಗ ಮಾನವಜನ್ಮ ಪಡೆದಿರುವ ತಮ್ಮನ್ನು ಸಲಹಬೇಕೆನ್ನುವ ಶ್ರೀಪಾದರಾಜರ ಈ ಮೊರೆ ಓದುಗರ ಹೃದಯದಲ್ಲೂ ಅನುರಣಿಸುತ್ತದೆ.

*ನಾ ನಿನಗೇನು ಬೇಡುವುದಿಲ್ಲ ಎನ್ನ*
*ಹೃದಯ ಕಮಲದೊಳು ನೆಲೆಸಿರು ಹರಿಯೆ*

-ಎಂದು ಶ್ರೀಹರಿಯನ್ನು ಪ್ರಾರ್ಥಿಸುತ್ತಾ, ಶಿರನಿನ್ನಲ್ಲೆರಗಲಿ, ಚಕ್ಷುಗಳು ನಿನ್ನ ನೋಡಲಿ, ಕರ್ಣ ಗೀತಂಗಳ ಕೇಳಲಿ, ನಾಸಿಕ ನಿರ್ಮಾಲ್ಯ ಆಘ್ರಾಣಿಸಲಿ - ಎಂದು ಮುಂತಾಗಿ ತಮ್ಮ ತನುಮನಗಳನ್ನೆಲ್ಲ ಹರಿಯ ಸೇವೆಗೆ ಸಮರ್ಪಿಸಿರುವರು. ಭಗವಂತನ 'ಚರಣರತಿ'ಯನ್ನು

ಹಂಬಲಿಸಿ ಬೇಡುವರು. ನಿನ್ನ ಬಾಗಿಲು ಕಾಯುವ ಭಾಗ್ಯವನ್ನು ಕರುಣಿಸೆನ್ನುವರು. ಹೇಗೆ ತಾಯಿ ತನ್ನ ಮಗುವನ್ನು ಅನಾಥವಾಗಲು ಬಿಡುವುದಿಲ್ಲವೋ ಹಾಗೆ ನೀನು ನನ್ನನ್ನು ವ್ಯರ್ಥ ಹೋಗಲು ಬಿಡಬೇಡವೆಂದು ಹರಿಗೆ ದುಂಬಾಲು ಬೀಳುವರು.

ಮನುಷ್ಯನ ಹಠಮಾರಿ ಮನಸ್ಸು ತನ್ನ ಚಂಚಲತೆಯನ್ನು ಅಷ್ಟು ಸುಲಭವಾಗಿ ಬಿಟ್ಟು ಕೊಡುತ್ತದೆಯೆ? ಅದರ ದುರ್ಬುದ್ಧಿಯನ್ನು:

*ಕಂಡಕಂಡ ಕಡೆಗೆ ಪೋಪ ಚಂಚಲಮನವು*
*ಪಿಂಡ ತಿಂಬಲ್ಲಿ ಬಹು ನಿಷ್ಠ ತಾನು*
*ಭಂಡಾಟದವನೆಂದು ಬಯಲಿಗೆ ತಾರದೆ*
*ಕೊಂಡಾಡುವಂತೆ ಭಕುತಿಯ ಕೊಟ್ಟು ಸಲಹಯ್ಯ*

-ಎನ್ನುವಲ್ಲಿ ಬಯಲು ಮಾಡಿರುವರು.

'ಚಿತ್ತಜನಯ್ಯನ ಚಿಂತಿಸುಮನವೆ' - ಎಂದು ಮನಸ್ಸಿಗೆ ಉಪದೇಶಿಸಿರುವರು. 'ಕರುಣದಿ ತನುಮನ ಧನಂಗಳೆಲ್ಲವು ನಿನ್ನ ಚರಣಕೊಪ್ಪಿಸಿದ ಬಳಿಕ ಮರಳಿ ಎನ್ನ ಮರುಳು ಮಾಡುವರೆ', 'ಸರಕು ಒಪ್ಪಿಸಿದ ಮ್ಯಾಲೆ ಸುಂಕವುಂಟೇ ದೇವ, ಕರುಣಾಕರ ನಿನ್ನ ಚರಣದಡಿಯೊಳಿಟ್ಟು ಕಾಯೊ ರಂಗವಿಠಲ'-ಎಂದು ತಮ್ಮ ಸಮಸ್ತವನ್ನೂ ಹರಿಗೊಪ್ಪಿಸಿ ಅವನು ತಮ್ಮನ್ನು ಕಾಯಲೇ ಬೇಕೆಂದು ಆಗ್ರಹಿಸುವರು.

*ಎನ್ನಮನ ವಿಷಯಂಗಳಲಿ ಮುಣುಗಿತೊ*
*ಎನ್ನ ತನುವು ವೃದ್ಧಾಪ್ಯ ಐದಿತೊ..*
*ಅಂತಕರ ಕರೆಬಾಹೊ ಹೊತ್ತಾಯಿತೊ*
*ಕಾಲವಿಳಂಬವಿನಿತಿಲ್ಲವಯ್ಯಾ*
*ವ್ಯಾಳೆ ಅರಿತು ಬಿನ್ನಹ ಮಾಡಿದೆ*

-ಎಂದು ಮುಂತಾಗಿ, ಇರುವ ಅಲ್ಪ ಕಾಲಾವಧಿಯಲ್ಲಿ ತಮ್ಮನ್ನು ಆ ಸ್ಥಿತಿಯಿಂದ ಮೇಲೆತ್ತಬೇಕೆಂಬುದಾಗಿ ಅನನ್ಯ ಶರಣಾಗತಿಯಿಂದ ಹರಿಯಲ್ಲಿ ಮೊರೆಯಿಡುವರು. ನನಗೆ ನಿನ್ನ ಕಥಾಮೃತ, ನಿನ್ನ ನಾಮದುಚ್ಚರಣೆ, ನಿನ್ನಡಿಗೆರಗುವ ಮನಸ್ಸು, ನಿನ್ನ ಬಾಗಿಲ ಕಾಯುವ ಭಾಗ್ಯ ಇಷ್ಟನ್ನೇ ಕೊಡು ಸಾಕು…. "ಇದನಾದರು ಕೊಡದಿದ್ದರೆ ನಿನ್ನ ಪಾದಕಮಲವ ನಂಬಿ ಭಜಿಸುವುದೆಂತೋ?" - ಎನ್ನುವರು. ಹೊಟ್ಟೆಬಟ್ಟೆಗಳಿಗಿಲ್ಲವೆಂದಾಗಲೀ ಸಾಂಸಾರಿಕ ಜೀವನ ಹಸನಾಗಬೇಕೆಂದಾಗಲೀ ಸಂಬಳ ಸಾಲದು ಒಡವೆ ಒಡ್ಯಾಣಗಳಿಲ್ಲವೆಂದಾಗಲೀ ಅಥವಾ ತಮಗೆ ರಾಜ್ಯಭೋಗಗಳಾಗಬೇಕೆಂದಾಗಲೀ ತಾವು ಹರಿಯನ್ನು ಬೇಡುತ್ತಿಲ್ಲ; ತಮ್ಮ ಅವಗುಣಗಳನ್ನೆಣಿಸದೆ ಅವನ ದಾಸರ ದಾಸರ ದಾಸ್ಯವನ್ನು ದಯಪಾಲಿಸಬೇಕೆಂದು ಮಾತ್ರ ಬೇಡುತ್ತಿರುವುದಾಗಿ ಸ್ಪಷ್ಟಪಡಿಸುವರು- ಇದೇ ಭಕ್ತನ ನೈತಿಕ ಕೆಚ್ಚು.

ಹೀಗೆ ಪರಿಪರಿಯಾಗಿ ತಮ್ಮ ಮನದ ಕಳವಳವನ್ನು ಆ ಶ್ರೀಹರಿಯಲ್ಲಿ ತೋಡಿಕೊಂಡಾಗ ಶ್ರೀಪಾದರಾಜರ ಮನಸ್ಸು ಸ್ವಲ್ಪ ನೆಮ್ಮದಿಯನ್ನು ಕಾಣುವಂತಾಗಿದೆ. ಜೊತೆಗೆ ಮನುಷ್ಯನ ಇಡೀ ಬದುಕು ಆ ಭಗವಂತನ ಕೃಪೆಯೆಂಬ ಅರಿವು ಅವರಿಗಿದೆ. ಅವನು ಕೊಟ್ಟದ್ದನ್ನು ತಾವು ಅನುಭವಿಸಬೇಕೆನ್ನುವ ಕಟು ಸತ್ಯದ ಹಿನ್ನೆಲೆಯಲ್ಲಿ ಶ್ರೀಪಾದರಾಜರ ಮನಸ್ಸು ಹೀಗೆ ಹಾಡಿದೆ:

*ಇಟ್ಹಾಂಗೆ ಇರುವೆನೋ ಹರಿಯೆ ಎನ್ನ ದೊರೆಯೇ ||ಪ||*

*ಸೃಷ್ಟಿವಂದಿತ ಪಾದ ಪದುಮ ಶ್ರೀಹರಿಯೇ ||ಅ.ಪ||*

*ಸಣ್ಣ ಶಾಲ್ಯೋದನ ಬೆಣ್ಣೆಕಾಸಿದ ತುಪ್ಪ*
*ಚಿನ್ನ ಹರಿವಾಣದಲಿ ಭೋಜನ*
*ಘನ್ನ ಮಹಿಮ ನಿನ್ನ ಕರುಣ ತಪ್ಪಿದ ಮ್ಯಾಲೆ ಕ*
*ದನ್ನ ಕಾಣದೆ ಬಾಯ್ಬಿಡಿಸುವಿ ಹರಿಯೇ ॥೧॥*

*ಕೆಂಪಿಲಿ ಹೊಳೆವ ಪೀತಾಂಬರ ಉಡಿಸುವಿ*
*ಸೊಂಪಿನಂಚಿನ ಶಾಲು ಹೊದಿಸುವಿಯೋ*
*ಕಪಿಲಹರೇ ನಿನ್ನ ಕೃಪೆಯು ತಪ್ಪಿದ ಮ್ಯಾಲೆ*
*ಕಪರ್ದಕ ಕೌಪೀನವು ದೊರೆಯದೊ ಹರಿಯೇ ॥೨॥*

*ಚಂದ್ರಶಾಲೆಲಿ ಚಂದ್ರಕಿರಣದಂತೊಪ್ಪುವ*
*ಚಂದದ ಮಂಚದೊಳ್ಮಲಗಿಸುವಿ*
*ಮಂದರೋದ್ಧರ ನಿನ್ನ ಮಮತೆ ತಪ್ಪಲು ಧರ್ಮ*
*ಮಂದಿರದೊಳು ತೋಳ್ತಲಗಿಂಬು ಹರಿಯೇ ॥೩॥*

*ನರಯಾನದೊಳು ಕ್ಷಣ ನರವರನೆನಿಸುವಿ*
*ವರಛತ್ರ ಚಾಮರ ಹಾಕಿಸುವಿ*
*ಕರುಣಾನಿಧೇ ನನ್ನ ಕರುಣ ತಪ್ಪಿದ ಮ್ಯಾಲೆ*
*ಚರಣರಕ್ಷೆಯು ದೊರೆಯದು ಶ್ರೀಹರಿಯೇ ॥೪॥*

*ಗಂಗಾಜನಕ ಪಾಂಡುರಂಗ ನಿನ್ನಯ ಭಕ್ತರ*
*ಸಂಗವಿರಲಿ ದುಷ್ಟ ಸಂಗ ಬ್ಯಾಡ*
*ಅಂಗನೆಯರ ಕೂಡಿ ಅನಂಗಬಾಣಕೆ ಸಿಲುಕಿ*
*ಭಂಗವ ಪಡಲಾರೆ ಶ್ರೀರಂಗವಿಠಲ ಹರಿಯೇ ॥೫॥*

ಜೊತೆಗೆ, 'ತೇನವಿನಾ ತೃಣಮಪಿ ನಚಲತಿ', 'ಶ್ರೀಹರಿ ಸರ್ವಸ್ವತಂತ್ರ 'ಜೀವಿಗಳಿಗೆ ದತ್ತ ಸ್ವಾತಂತ್ರ್ಯಮಾತ್ರ'- ಇತ್ಯಾದಿ ತತ್ವಗಳು ಈ ಕೀರ್ತನೆಯ ನುಡಿಗಳಲ್ಲಿ ಢಾಳಾಗಿ ಅಭಿವ್ಯಕ್ತವಾಗಿವೆ.

*'ಯಾಕೆ ಪುಟ್ಟಿಸಿದಿ ನೀ ಸಾಕಲಾರದೆ ಜಗ*
*ದೇಶ ಕಾರಣಪುರುಷನೆ ಕೃಷ್ಣ'*

-ಎನ್ನುವ ಕೀರ್ತನೆಯಲ್ಲಂತೂ ಶ್ರೀಪಾದರಾಜರ ಮನದ ಹತಾಶೆ, ಆರ್ತತೆಗಳು ಮುಗಿಲು ಮುಟ್ಟಿವೆ. ಹನ್ನೊಂದು ದೀರ್ಘನುಡಿಗಳಲ್ಲಿ ಹರಿಭಕ್ತನೊಬ್ಬನು ತನ್ನ ಆಯಸ್ಸಿನ ಮೂವತ್ತಾರು ವರ್ಷಗಳನ್ನು ವ್ಯರ್ಥವಾಗಿ ಕಳೆದು, ಆ ಬಳಿಕ ಶ್ರೀಹರಿಯನ್ನು ನಂಬಿ ಮರೆಹೊಕ್ಕು ತನ್ನ ಮನಸ್ಸಿನ ವೇದನೆಯನ್ನೆಲ್ಲ ಅವನ ಮುಂದೆ ಬಿಚ್ಚಿಟ್ಟಿರುವ ಚಿತ್ರಣವಿದು.

*ಒಡಲಿಗನ್ನವಕಾಣೆ ಉಡಲು ಅರಿವೆಯ ಕಾಣೆ*
*ಗಡಗಡನೆ ನಡುಗುತಿಹೆನೋ ಕೃಷ್ಣ*

*……………………….*

*ಕುಡುತೆ ಕೊಡುವವರಿಲ್ಲ ನುಡಿಯ ಕೇಳುವರಿಲ್ಲ*
*ಬಡತನವು ಕಂಗೆಡಿಸಿತೋ ಕೃಷ್ಣ*
*ಕಡೆ ಹಾಯಿಸುವರ ಕಾಣೆ ನಡುಮಡುವಿನೊಳು ಕೈ*
*ಬಿಡದೆ ದಡವನು ಸೇರಿಸೋ ಕೃಷ್ಣ ॥೧॥*

……………………….

*ಸೃಷ್ಟಿಯೊಳಗೆನ್ನಂಥ ಕೆಟ್ಟ ಪಾಪಿಷ್ಠ ಜನ*
*ಘಟ್ಟಿಸಲಿಲ್ಲವೇನೋ ಕೃಷ್ಣ*
…………………

*ಆಳುದೇಹವು ಗೇಣುಕೀಳಾಗಿ ಪಲ್ಮೊರೆದು*
*ಖೂಳಜನರ ಮನೆಗೆ ಕೃಷ್ಣ*
*ಹಾಳು ಒಡಲಿಗೆ ತುತ್ತುಕೂಳಿಗೆ ಹೋಗಿ ಅವರ*
*ವಾಲೈಸಲಾರೆನಲ್ಲೋ ಕೃಷ್ಣ ॥೨॥*

*ಬಾಳು ಈ ಪರಿಯಾದ ಮ್ಯಾಲೆ ಭೂಮಿಯಲಿ ಬಹು*
*ಕಾಲ ಕಳೆಯುವುದುಚಿತವೆ ಕೃಷ್ಣ*
*ಆಲಸ್ಯ ಮಾಡದಲೆ ಈ ವ್ಯಾಳ್ಯದಲಿ ಅರಿತು*
*ಪಾಲಿಸಲು ಬಹು ಕೀರ್ತಿಯೋ ಕೃಷ್ಣ ॥೩॥*

-ಎಂದು ಮುಂತಾಗಿ ಬಡತನದ ನಗ್ನ ಚಿತ್ರಣವನ್ನು ಕೊಡುವ ಮೂಲಕ, ಅವನ ಅಸಹಾಯಕ ಪರಿಸ್ಥಿತಿಯನ್ನು ಎತ್ತಿತೋರಿಸುವ ಮೂಲಕ, ಹೃದಯವೇ ಬಾಯಿಗೆ ಬಂದಂತೆ ಸಾಗಿದೆ. ಅಸಹಾಯಕನಾದ ಬಡವನ ಮೊರೆ. 'ಇತ್ತಬಾರೆಂತೆಂದು ಹತ್ತಿಲಿಗೆ ಕರೆದೊಂದು ತುತ್ತು ಕೊಡುವರ ಕಾಣೆನೋ ಕೃಷ್ಣ'- ಎಂಬುದು ಬಳಲಿದ ಮನದ ಅಳಲು. 'ಈರೇಳು ಲೋಕಕಾಧಾರವಾದವಗೆ ಬಲು ಭಾರವಾದವನೆ ನಾನು'-ಎನ್ನುವ ಅಹವಾಲು! 'ಹರಿಯಾತ್ರೆ ಮಾಡಲಿಲ್ಲ ಹರಿಮೂರ್ತಿ ನೋಡಲಿಲ್ಲ ಹರಿದಾಸ ಸಂಗವಿಲ್ಲ… ಅರಿತರಿತು ಮನ ವಿಷಯಕೆರಗಿ ಹರುಷವ ತಾಳಿ ಬರಿದಾಯಿತಾಯುವೆಲ್ಲ' - ಎನ್ನುವ ನಿರಾಶೆ.

*ಉರಿಯೊಳಗೆ ಬಿದ್ದು ಶರೀರವನು ಕಳೆಯಲೊ*
*ಪರುವತವನೇರುರುಳ್ಳಲೋ*
*ಗರಳ ಮಡುವನೆ ಧುಮುಕಿ ಉರಗಫಣ ತುಳಿಯಲೊ*
*ಎರಡೊಂದು ಶೂಲಕ್ಹಾಯಲೋ ಕೃಷ್ಣ*
*ಕೊರಳಿಗ್ಹಗ್ಗವ ಹಾಕಿ ಮರವೇರಿ ಕರಬಿಡಲೊ*
*ಕರಗಸದಿ ಶಿರಗೊಯ್ಯಲೋ ಕೃಷ್ಣ*

-ಎನ್ನುವ ಚಡಪಡಿಕೆ. ಭಗವಂತ ತನ್ನ ಮೊರೆ ಕೇಳಲಿಲ್ಲವೆಂದು ಭಕ್ತ ತನ್ನ ಪ್ರಾಣತ್ಯಾಗ ಮಾಡಲೂ ಸಿದ್ಧ! 'ಕಷ್ಟಪಟ್ಟ ಮಗನೆಂದು ದೃಷ್ಟಿನೀರೊರೆಸೆನ್ನ ಪೊಟ್ಟೆಯೋಳ್ಪಿಡಿವರಾರೋ ಕೃಷ್ಣ' - ಎನ್ನುವ ದಟ್ಟವಾದ ಅನಾಥ ಪ್ರಜ್ಞೆ. ಇದಕ್ಕೆಲ್ಲ ಪರಿಹಾರವಾಗಿ ಕೃಷ್ಣ ಥಟ್ಟನೆ ಬಂದು ಇಷ್ಟವನು ಸಲಿಸಿ ಕಾಯುವನೆಂಬ ನಿರೀಕ್ಷೆ ಹಾಗೂ ಬಯಕೆ. ಈ ಇಡೀ ಕೀರ್ತನೆ ಮನುಷ್ಯ ಮಾತ್ರರ ಕಿತ್ತು ತಿನ್ನುವ ಬಡತನ. ಕೀಳರಿಮೆ, ಅಸಹಾಯಕತೆ, ಅನಾಥ ಪ್ರಜ್ಞೆ, ಇತರರು ತನ್ನನ್ನಾಧರಿಸಿ ಸಂತೈಸಬೇಕೆನ್ನುವ ಮನದಾಸೆ, ಆಗಿಹೋದುದಕ್ಕೆ ವಿಷಾದ, ಪಶ್ಚಾತ್ತಾಪ, ಭಗವಂತ ಬಂದು ಸಂತೈಸುವನೆಂಬ ತುಂಬು ನಂಬುಗೆ - ಅವೆಲ್ಲವುಗಳಿಂದುಂಟಾದ ಚಿತ್ತ ವಿಹ್ವಲತೆ ಎಲ್ಲವನ್ನೂ

ಎಳೆಎಳೆಯಾಗಿ ಬಿಚ್ಚಿಡುತ್ತದೆ. ಶ್ರೀಪಾದರಾಜರ ವೈಯಕ್ತಿಕ ಮೊರೆಯಾಗಿ ಹೊರಟ ಭಾವನೆಗಳು ದೀನದಲಿತರೆಲ್ಲರ ಮನದ ಮಾತಾಗಿ ಮೈದುಂಬಿ ಸಾರ್ವತ್ರಿಕತೆಯನ್ನು ಪಡೆದುಕೊಂಡಿದೆ.

**ದೈವಭಕ್ತಿ ನಿರೂಪಣೆ:** ಸಾಮಾನ್ಯವಾಗಿ ಭಕ್ತರು-ಮನುಷ್ಯರ ನಡುವಿನ ಪರಸ್ಪರ ಸಂಬಂಧಗಳನ್ನು ಭಕ್ತ-ಭಗವಂತರ ನಡುವೆಯೂ ಕಲ್ಪಿಸಿಕೊಂಡು ಭಗವಂತನನ್ನು ಆರಾಧಿಸುವುದು, ಆ ಮೂಲಕ ಭಕ್ತಿಸಾಧನೆ ಮಾಡುವುದು ಕಂಡುಬರುತ್ತದೆ. ಶ್ರೀಪಾದರಾಜರ ಆತ್ಮನಿವೇದಕ ಕೀರ್ತನೆಗಳೆಲ್ಲ ಭಗವಂತನನ್ನು ಒಡೆಯನೆಂದೂ ತಾವು ಅವನ ಸೇವಕರೆಂದೂ ಭಾವಿಸಿ ಹಾಡಿರುವಂಥವೇ ಆಗಿವೆ. ಈ ಭಾವನೆಯಿಂದ ಭಕ್ತಿಸಾಧನೆ ಮಾಡುವುದನ್ನು ಭಕ್ತಿಯ ಪರಿಭಾಷೆಯಲ್ಲಿ 'ದಾಸ್ಯ ಭಕ್ತಿ' ಅಥವಾ 'ದಾಸ್ಯಭಾವ'ವೆಂದು ಕರೆಯುವುದು ರೂಢಿ. ಹರಿದಾಸರೆಂದು ತಮ್ಮನ್ನು ಕರೆದು ಕೊಳ್ಳುವಲ್ಲಿಯೇ ಅವರ ದಾಸ್ಯಭಾವ ಪ್ರಕಟವಾಗಿದೆ. 'ವಾಸುದೇವನೆ ನಿನ್ನ ದಾಸರ ದಾಸರ ದಾಸರ ದಾಸ್ಯವ ಕೊಡು' - ಎಂದು ಶ್ರೀಪಾದರಾಜರು ತಮ್ಮ ಇಷ್ಟದೈವವಾದ ರಂಗವಿಠಲನನ್ನು ಬೇಡಿಕೊಂಡಿರುವರು. 'ಒಡೆಯ ನಿನ್ನಡಿಗೆರಗುವ ಮನವನ್ನು ಕೊಡು; ನಿನ್ನ ಬಾಗಿಲಕಾಯುವ ಭಾಗ್ಯವನ್ನು ಕೊಡು' - ಎಂಬುದೇ ದಾಸರ ಪ್ರಾರ್ಥನೆ. ಹರಿಯ ದಾಸರಾಗುವುದಕ್ಕಿಂತ ಅವನ ದಾಸರ ದಾಸರಾಗುವುದು ಹೆಚ್ಚಿನದು ಅವರ ದೃಷ್ಟಿಯಲ್ಲಿ.

*ನೀನೆ ಬಲ್ಲಿದನೋ ರಂಗಾ*
*ನಿನ್ನ ದಾಸರು ಬಲ್ಲಿದರೋ ||ಪ||*

*ನಾನಾತೆರದಿ ನಿಧಾನಿಸಿ ನೋಡಲು*
*ನೀನೇ ಭಕ್ತರಾಧೀನನಾದ ಮ್ಯಾಲೆ ||ಅ.ಪ||*

-ಎಂದು ಹರಿಯನ್ನೇ ಕೇಳುತ್ತಾ ಧರ್ಮರಾಯ ಕರೆದಲ್ಲಿಗೆ ಹೋಗುವ, ನರನ ಸಾರಥಿಯಾದ, ಬಲಿಯ ಬಾಗಿಲನ್ನು ಕಾಯ್ದು, ತನ್ನನ್ನು ಬಾಣದಿಂದ ಹೊಡೆದ ಭೀಷ್ಮಮನಿಗೆ ಅಭಯವಿತ್ತ, ಭಕ್ತಬಾಲಕ ಪ್ರಹ್ಲಾದನಿಗಾಗಿ ಅವತಾರವನ್ನೇ ಎತ್ತಿ ಬರುವ ಶ್ರೀಹರಿಯ ಭಕ್ತವತ್ಸಲತೆ ಕಾರುಣ್ಯಗಳನ್ನು ಗುರುತಿಸುತ್ತಲೇ ಅವನು ಭಕ್ತಪರಾಧೀನನೆಂಬುದನ್ನೂ ಸಾಧಿಸಿ, ಹರಿಗಿಂತ ಅವನ ದಾಸರೇ ಶ್ರೇಷ್ಠರೆಂದು ಸಾಧಿಸಿಬಿಟ್ಟಿದ್ದಾರೆ.

ಭಕ್ತ-ಭಗವಂತರ ನಡುವೆ ತಾಯಿ-ಮಗುವಿನ ಸಂಬಂಧವನ್ನು ಕಲ್ಪಿಸಿಕೊಂಡು ಆರಾಧಿಸುವುದು. 'ವಾತ್ಸಲ್ಯಭಕ್ತಿ' ಅಥವಾ 'ವಾತ್ಸಲ್ಯಭಾವ', ಕೃಷ್ಣನನ್ನು ಮಗುವಾಗಿ ಕಲ್ಪಿಸಿಕೊಂಡು ತಾವು ಯಶೋದೆಯಾಗಿ, ಒಬ್ಬ ಗೋಪಿಯಾಗಿ ಮಗು ಕೃಷ್ಣನನ್ನು ಅಪ್ಪಿ ಮುದ್ದಾಡಿ ಹಾಡಿ ಊಡಿ ಅಲಂಕರಿಸಿ ಸಂಭ್ರಮಪಟ್ಟಿದ್ದಾರೆ, ಶ್ರೀಪಾದರಾಜರು, ಭಾಗವತದ ದಶಮಸ್ಕಂಧದಲ್ಲಿ ಬರುವ ಕೃಷ್ಣನ ಬಾಲ್ಯದ ವರ್ಣನೆ ಹರಿಭಕ್ತರೆಲ್ಲರಿಗೂ ರಸಗವಳ. ಹರಿದಾಸರೂ ಇದಕ್ಕೆ ಹೊರತಲ್ಲ. ಹರಿದಾಸರಲ್ಲಿ ಆದ್ಯಪ್ರವರ್ತಕರೆನಿಸಿರುವ ಶ್ರೀಪಾದರಾಜರಲ್ಲೇ ಈ ವಾತ್ಸಲ್ಯಭಾವದ ವಾಹಿನಿ ಧುಮ್ಮಿಕ್ಕಿ ಹರಿದಿದೆ. ಮಗು ಕೃಷ್ಣನನ್ನು 'ಪೋಪು ಹೋಗೋಣ ಬಾರೋ ರಂಗ I ಪೋಪು ಹೋಗೋಣ ಬಾರೋ ಕೃಷ್ಣ'- ಎಂದು ಕರೆಯುವಲ್ಲಿ ಶ್ರೀಪಾದರಾಜರು ತಾವು ಯಶೋದೆಯೇ ಆಗಿಬಿಟ್ಟಿದ್ದಾರೆ. ಮಗು ಕೃಷ್ಣ ಸ್ವಲ್ಪಕಾಲ ಮರೆಯಾದರೂ ತಾಯಿಯ ಆತಂಕ ಅಷ್ಟಿಷ್ಟಲ್ಲ. ಆಟವಾಡಿ ಮನೆಗೆ ಬಂದ ಮಗುವನ್ನು:

*ಎಲ್ಲ್ಯಾ ಡಿ ಬಂದ್ಯೋ ಎನ್ನ ರಂಗಯ್ಯ ನೀ*
*ಎಲ್ಲ್ಯಾಡಿ ಬಂದ್ಯೋ ಎನ್ನ ಕಣ್ಣಮುಂದಾಡದೆ*

-ಎಂದು ತುಂಬು ವಾತ್ಸಲ್ಯದಿಂದ ಅಪ್ಪಿ ಆಕ್ಷೇಪಿಸುವಳು. 'ಹಾಲು ಸಕ್ಕರೆ ಕೊಟ್ಟರೆ ಒಲ್ಲದೆ ಜೊತೆಗಾರರನ್ನೂ ಬಿಟ್ಟು ಎಲ್ಲಿಗೆ ಹೋಗಿದ್ದೆ? ಅಷ್ಟ ದಿಕ್ಕಿಲಿ ಅರಸಿ ಕಾಣದೆ ಬಹಳ ದೃಷ್ಟಿಗಟ್ಟೆನು' - ಎಂದು ತನ್ನ ಆತಂಕ ತಳಮಳಗಳನ್ನು ತೋಡಿಕೊಳ್ಳುವಳು. 'ನೊಸಲಲ್ಲಿ ಕಿರು ಬೆವರಿಟ್ಟಿದೆ.... ಬೆರಳ ಉಂಗುರವೆಲ್ಲಿ ಹೋಗಿದೆ ನಿನ್ನ ಕೊರಳ ಪದಕವೆಲ್ಲಿ ನೀಗಿದೆ'- ಎಂದು ತನ್ನ ಸೆರಗಿನಿಂದ ಮಗುವಿನ ಮೋರೆಯೊರೆಸುತ್ತಾ ತನಿಖೆ ನಡೆಸುತ್ತಿರುವ ಗೋಪಿಯ ಚಿತ್ರ ಮನಸ್ಸಿಗೆ ಮುದನೀಡುವಂಥದು.

ಕೃಷ್ಣ ಚೆನ್ನಾರ ಚೆಲುವ. ಚಿಗುರು ಬೆರಳು; ಎಳೆ ಮಾವಿನ ಸೊಬಗಿನ ತಳಿರುಪೋಲುವ ಕೆಂದುಟಿ; ಸುಳಿಪಲ್ಲು; ಮಂದಹಾಸವು; ನಳಿನದಳಾಕ್ಷ; ಥಳಥಳಿಪ ಕುಂಡಲ; ಪೊಳೆವ ನಾಸಿಕ; ಲಲಾಟ; ಚೆಲುವ ಪುಬ್ಬು; ಕಸ್ತುರಿಯ ತಿಲಕವೊಪ್ಪುವ ಮುಖ; ಕೋಟಿಹೊನ್ನು ಬಾಳುವ ಕಿರೀಟ; ಬಗೆಬಗೆಯ ರತುನಗಳ ನಗಗಳನ್ನಿಟ್ಟಿದ್ದಾನೆ. ಅಂಥವನು ಬೀದಿಯಲ್ಲಿ ಹೊರಟರೆ ಎಲ್ಲರ ಕಣ್ಣೂ ಅವನ ಮೇಲೆಯೇ. ಅವರೆಲ್ಲರ ದೃಷ್ಟಿ ತನ್ನ ಮಗುವಿಗೆಲ್ಲಿ ತಾಕುವುದೋ ಎಂಬ ಆತಂಕ, ಕಳವಳ ತಾಯಿಗೆ. "ದೃಷ್ಟಿ ತಾಕೀತೋ ಬೀದಿ ಮೆಟ್ಟಬ್ಯಾಡವೋ"- ಎಂದು ಮಗುವಿಗೆ ಬುದ್ಧಿಹೇಳಿ ತಡೆಯುತ್ತಾಳೆ. ಅತ್ತ ಗೋಪಿಯರಿಗೆ ಕೃಷ್ಣ ಬಂದನೆಂದರೆ ಸಾಕು, ಮೈಮರೆತು ಅವನ ಸುತ್ತ ಮುತ್ತಿಕೊಳ್ಳುವರು. ಅವನ ಸುಂದರ ಚಿಗುರುಪಾದಗಳನ್ನು ಕಂಡು ಅವರ ಮೈನವಿರೇಳುವುದು:

*ಇಕ್ಕೋ ನೋಡೆ ರಂಗನಾಥನ ಚಿಕ್ಕಪಾದವ*
*ಸಿಕ್ಕಿತೆ ಶ್ರೀ ಲಕ್ಷ್ಮೀಪತಿಯ ದಿವ್ಯಪಾದವ*

-ಎಂದು ಹಾಡತೊಡಗುವರು. ಕಂಸಾಸುರನನ್ನು ಕೊಂದು ಬಲಿಯನ್ನು ಮೆಟ್ಟಿ ಭಾಗೀರಥಿಯನ್ನು ಪಡೆದ ಪಾದವದು. ಬಂಡೆಯಾಗಿದ್ದ ಅಹಲ್ಯೆಯನ್ನುದ್ಧರಿಸಿದ ಪಾದ. ಶಕಟಾಸುರನನ್ನು ಒದ್ದು ಕೆಡವಿದ ಪಾದ. ಅಂತಹ ಪಾದಗಳ ದರ್ಶನವೇ ತಮ್ಮ ಮಹಾಸುಕೃತವೆಂಬ ಭಾವನೆ ಗೋಪಿಯರದು. 'ಕಂಡೆವೆ ಶ್ರೀರಂಗವಿಠಲನ ದಿವ್ಯಪಾದವ" ಎಂದು ಕೃತಾರ್ಥರಾಗಿದ್ದಾರೆ.

## ೩. ಕೃತಿಗಳು (೩)

ಕೃಷ್ಣನ ಮೇಲಣ ಪ್ರೀತಿ ಅತಿಶಯವಾಗಿದ್ದರೂ ಗೋಪಿಯರಿಗೆ ಅವನ ಚೇಷ್ಟೆ ತುಂಟಾಟಗಳನ್ನು ತಡೆಯುವುದು ಕಷ್ಟವಾಗುತ್ತಿತ್ತು. ಎಲ್ಲರೂ ಒಟ್ಟಾಗಿ ಯಶೋದೆಯಲ್ಲಿಗೆ ಹೋಗಿ 'ಬಾಲಕನೆಂದು ಲಾಲಿಸಿ ಕರೆದರೆ ಮನೆಯೊಳಗೆ ಪೊಕ್ಕು ಪಾಲು ಬೆಣ್ಣೆ ಮೊಸರೆಲ್ಲವ ಮೆದ್ದುದಲ್ಲದೆ ಕೋಲು ತೆಗೆದುಕೊಂಡು ನೀರಿನ ಗಡಿಗೆಗಳನ್ನೆಲ್ಲ ಒಡೆದ; ಸೀರೆಗಳನ್ನೆಲ್ಲ ಎತ್ತಿಕೊಂಡು ಮರವನ್ನೇರಿ ಬೆತ್ತಲೆ ಬಂದು ಕರವೆತ್ತಿ ಮುಗಿದರೆ ಕೊಡುವೆನೆಂದ; ಮೋಸಮಾಡಿ ನಮ್ಮನ್ನು ಅಣಕಿಸಿ ಓಡಿಹೋದ'- ಎಂದು ಮುಂತಾಗಿ ದೂರಿ, ಅವನಿಗೆ ಬುದ್ಧಿಹೇಳುವಂತೆ ಬೇಡುವರು. ಎಲ್ಲವನ್ನೂ ಕೇಳಿದ ತಾಯಿ ಯಶೋದೆ:

*ಏಕೆ ದೂರುವಿರೆ ರಂಗಯ್ಯನ ॥ಪ॥*

*ಸಾಕು ನಿಮ್ಮ ದೂರ ಬಲ್ಲೆನು*
*ಈ ಕುವರನಾ ಕೃತ್ಯಮಾಳ್ಪನೆ ॥ಅ.ಪ॥*

*ದಟ್ಟಡಿಯಿಡಲರಿಯ ಗೋವತ್ಸವ*
*ಬಿಟ್ಟು ಚಲಿಸಬಲ್ಲನೆ*
*ಗಟ್ಟಿಯಾಗಿ ಗೂತ್ತಿನಲ್ಲಿ ಕಟ್ಟಿನೊಳು*
*ಕಟ್ಟಿದ್ದ ಕರುಗಳ*
*ಬಿಟ್ಟನೇ ಈ ಕೃಷ್ಣ ಮೇಲೆಷ್ಟು*
*ಹೊಟ್ಟೆಕಿಚ್ಚೆ ನಿಮಗೆ ॥೧॥*

*ಕೆನೆಹಾಲು ಬೆಣ್ಣೆಯನು ಇತ್ತರೆ ಆ*
*ದಿನವೆಲ್ಲನು ಊಟವ*
*ಮನೆ ಮನೆ ಮನೆಗಳನು ಪೊಕ್ಕು*

*ಬೆಣ್ಣೆ ಪಾಲ್ಮೊಸರನ್ನು ತಿನ್ನುತ*
*ವನಿತೆಯರ ಕೂಡಾಡಿದ ನೆಂ*
*ದೆನಲು ನಿಮಗೆ ನಾಚಿಕಿಲ್ಲವೆ ॥೨॥*

*ಪಾಲು ಮೊಸರು ಬೆಣ್ಣೆಯು ಇಲ್ಲವೆ ನ*
*ಮ್ಮಾಲಯದೊಳು ನೋಡಿರೆ*
*ಹೇಳುವರೆ ಈ ಠೌಲಿಗಳ ಗೋಪಾಲ*
*ಬಾಲನ ನೋಡಿ ಸೈಸದೆ*
*ಬಾಳುವಿರ ಭವಜಲಧಿಯಿಂದಲಿ*
*ತೇಲಿಸುವನೆ ರಂಗವಿಠಲ ॥೩॥*

-ಎಂದು ಬೈದು ಯಶೋದೆ ಗೋಪಿಯರ ಬಾಯಿ ಮುಚ್ಚಿಸುವಳು. ಇಲ್ಲಿ ತಾಯಿ ಎಷ್ಟು ಸಹಜವಾಗಿ ತನ್ನ ಮಗುವನ್ನು ಒಪ್ಪಿಟ್ಟುಕೊಂಡಿದ್ದಾಳೆ! ಶ್ರೀಪಾದರಾಜರ ವಾತ್ಸಲ್ಯಭಕ್ತಿಯ ಪರಾಕಾಷ್ಠೆಯನ್ನಿಲ್ಲಿ ಅನುಭವಿಸಬಹುದು. ತನ್ನ ಮೇಲೆ ಇಷ್ಟೆಲ್ಲ ದೂರು ಕೇಳಿದ ಕೃಷ್ಣ. ತನ್ನನ್ನು ತಾನು ಸಮರ್ಥಿಸಿಕೊಳ್ಳುವನು:

*ಗೊಲ್ಲತಿಯರೆಲ್ಲ ಕೂಡಿ ಎನ್ನಮೇಲೆ*
*ಇಲ್ಲದ ಸುದ್ದಿ ಪುಟ್ಟಿಸಿ*
*ಕಳ್ಳನೆಂದು ದೂರುತಾರೆ ಗೋಪಿ ಎನ್ನ*
*ಕೊಲ್ಲಬೇಕೆಂಬ ಬಗೆಯ ॥ಪ॥*

*ಹರವಿಯ ಹಾಲುಕುಡಿಯಲು ಎನ್ನ ಹೊಟ್ಟೆ*
*ಕೆರೆಯೇನೆ ಹೇಳಮ್ಮಯ್ಯ*
*ಕರೆದು ಅಣ್ಣನ ಕೇಳಮ್ಮ ಉಂಟಾದರೆ*
*ಒರಳಿಗೆ ಕಟ್ಟಮ್ಮಯ್ಯ ॥೧॥*

*ಮೀಸಲು ಬೆಣ್ಣೆಯನು ಮೆಲುವುದು ಎನಗೆ*
*ದೋಷವಲ್ಲವೇನಮ್ಮಯ್ಯ*
*ಆಸೆ ಮಾಡಿದರೆ ದೇವರು ಕಣ್ಣ*
*ಮೋಸದಿ ಕುಕ್ಕೋನಮ್ಮಯ್ಯ ॥೨॥*

-ಎಂದು ಮುಂತಾಗಿ ಮುದ್ದು ಮುದ್ದಾಗಿ ಕೈಬಾಯಿ ತಿರುಗಿಸಿಕೊಂಡು ಹೇಳಿದಾಗ ಮುದ್ದು ಉಕ್ಕಿದ ಯಶೋದೆ 'ತನ್ನ ಶೃಂಗಾರದ ಮಗನನ್ನೆತ್ತಿ ರಂಗವಿಠಲನ ಪಾಡಿ ಉಡುಪಿನ ಉತ್ತುಂಗ ಕೃಷ್ಣನ ತೂಗಿದಳು'- ಎಷ್ಟು ವಾಸ್ತವವಾದ ಮುಕ್ತಾಯ! ಅಷ್ಟೇ ಅಲ್ಲ;

*ಏಕೆ ದೂರುವಿರೇ ರಂಗಯ್ಯನ*
*ಏಕೆ ದೂರುವಿರೇ ॥ಪ॥*

*…………….*

*ದಟ್ಟಡಿಯಿಡಲರಿಯ ಗೋವತ್ಸವ*
*ಬಿಟ್ಟು ಚಲಿಸಬಲ್ಲನೆ*

*ಘಟ್ಟಿಯಾಗಿ ಗೊತ್ತಿನಲ್ಲಿ*
*ಕಟ್ಟಿನೊಳು ಕಟ್ಟಿದ್ದ ಕರುಗಳ*
*ಬಿಟ್ಟನೇ ಈ ಕೃಷ್ಣನ ಮೇ*
*ಲೆಷ್ಟು ಹೊಟ್ಟೆಕಿಚ್ಚೆ ನಿಮಗೆ ||೧||*

-ಎಂದು ಚಾಡಿ ಹೇಳಲು ಬಂದ ಗೋಪಿಯರನ್ನೇ ಬೈದು ಸುಳ್ಳು ಹೇಳಲು ನಿಮಗೆ ನಾಚಿಕೆಯಿಲ್ಲವೆ ಎಂದು ಜಬರಿಸಿ ಕಳುಹಿಸುವಳು.

ಇಂತಹ ಮಗು ಕೃಷ್ಣನನ್ನು 'ಭೂಮಿಯ ಚಿನ್ನದ ತೊಟ್ಟಿಲ ಮಾಡಿ, ನಾಲ್ಕು ವೇದಗಳನ್ನೇ ಸರಪಳಿಗಳನ್ನಾಗಿ ಮಾಡಿ, ಆ ಮಹಾ ಆಕಾಶಕ್ಕೆ ಕೊಂಡಿಗಳನ್ನು ಹಾಕಿ, ಅವನ ದಶಾವತರ ಲೀಲೆಗಳನ್ನು ಬಣ್ಣಿಸುತ್ತ 'ಗೋಪಿಯರು ಅವನಿಗೆ 'ಜೋ ಜೋ ಜೋ ಜೋ ಜೋ ರಂಗಧಾಮ' - ಎಂದು ಲಾಲಿ ಹಾಡಿ ತೂಗಿ ಮಲಗಿಸಿದ್ದಾರೆ.

ಭಕ್ತ-ಭಗವಂತರ ನಡುವೆ ಸತಿ-ಪತಿಯರ ಸಂಬಂಧವನ್ನು ಕಲ್ಪಿಸಿ ಆರಾಧಿಸುವುದು 'ಮಧುರಭಕ್ತಿ' ಅಥವಾ 'ಮಧುರಭಾವ'. ಶ್ರೀಪಾದರಾಜರ ವೇಣುಗೀತೆ ಗೋಪೀ ಗೀತೆ ಹಾಗೂ ಭ್ರಮರಗೀತೆಗಳಲ್ಲಿ ಕೃಷ್ಣಗೋಪಿಯರ ದೈವಿಕ ಪ್ರೇಮ, ಮಧುರ ಬಾಂಧವ್ಯಗಳು ಓದುಗರ ಅನುಭವಕ್ಕೆ ಬರುತ್ತವೆ. ಕೃಷ್ಣನ ಮೋಹಕ ಮುರಳೀಗಾನದ ಚಿತ್ರಣವೇ ಸಾಕು. ಎಂಥವರಿಗೂ ಮತ್ತೇರಿಸುತ್ತದೆ. ಪ್ರಕೃತಿಯ ಪ್ರಶಾಂತ ಪರಿಸರದಲ್ಲಿ ಅಲೆಅಲೆಯಾಗಿ ತೇಲಿಬರುವ ವೇಣುಗಾನಕ್ಕೆ ಮನಸೋಲದವರಾರು? ರಂಗ ಕೊಳಲನ್ನೂದುತ್ತ ಬಂದರೆ 'ಹಂಗ ವಿಹಂಗ ಭುಜಂಗ ನವಿಲು ಸಾರಂಗ ಗಿಣಿಯು ಮಾತಂಗಮರಿಯು ಕುರಂಗ'ವೇ ಮೊದಲಾದ ಪಶುಪಕ್ಷಿಗಳು ಬಂದು ಅವನ ಪಾದಗಳಿಗೆರಗುವುವು. ಗೋಪಿಯರು ಪ್ರೀತಿಯಿಂದ:

*ಬಂಗಾರ ಬಟ್ಟಲೊಳಗೆ ಅಂದು ಕ್ಷೀರವ ತಂದು*
*ರಂಗಗರ್ಪಿಸುವೆವು ನಾವೆಂದು ಹರುಷದೊಳಂದು*
*ಅಂಗನೆಯರು ಮೈಮರೆತು ನಿಂದು ಒಲಿಯಬೇಕೆಂದು*
*ಮಂಗಳ ಮಹಿಮನು ನೀನೆಂದು ಅತಿಭಕುತಿಯೊಳಂದು*
*ತುಂಗವಿಕ್ರಮನ ಪದಂಗಳಿಗೆರಗಲು*

-ಅವರ ಅಭಿಮಾನಕ್ಕೆ ಮನಸೋತ ಶ್ರೀಕೃಷ್ಣ ತಲೆತಗ್ಗಿಸಿ ನಿಂತಿದ್ದ. 'ಮಂದರೋದ್ಧರನಲ್ಲೆ ಮನವಿಟ್ಟ' ಅವರನ್ನು ಕೈಹಿಡಿದು ಮೇಲೆತ್ತಿದನು. ಕೃಷ್ಣನ ಆ ಸ್ಪರ್ಶ ಪ್ರೀತಿಗಳಿಂದ ಗೋಪಿಯರ ಮನಸ್ಸು ಬೆಳದಿಂಗಳಿನಲ್ಲಿ ಮಿಂದಂತೆ ಹಿತವನ್ನನುಭವಿಸಿತು. ಕೃಷ್ಣ-ಗೋಪಿಯರ ಈ ಮಧುರ ಮಿಲನವನ್ನು ಕಂಡ ದೇವಾನುದೇವತೆಗಳು ಪುಷ್ಪವೃಷ್ಟಿಯನ್ನು ಕರೆದರಂತೆ.

ಮುರಳಿಯ ಗಾನ ಕಿವಿಗೆ ಬಿದ್ದದ್ದೇ ತಡ ಮನೆಗೆಲಸಗಳಲ್ಲಿ ತೊಡಗಿದ್ದ ಗೋಪಿಯರು ಚುರುಕಾದರು. ಕೃಷ್ಣನಲ್ಲಿಗೆ ಧಾವಿಸುವ ಆತುರ ಕಾತರಗಳು ಹೆಚ್ಚಿ ತಬ್ಬಿಬ್ಬುಗೊಂಡರು:

*ತಂದೆಯ ಕಂದನೆಂದು ಕೊಂಕುಳೊಳಿಟ್ಟು*
*ಕಂದನ ಕೆಳಗಿಟ್ಟು*
*ಅಂದಿಗೆ ಗೆಜ್ಜೆ ಕಿವಿಗಳಿಗಿಟ್ಟು*
*ಮುತ್ತಿನ ಬಟ್ಟು*
*ಹೊಂದಿಸಿ ಗಲ್ಲದಲಿ ತಾನಿಟ್ಟು*
*ಕಸ್ತೂರಿಯಬಟ್ಟು*
*ಮುಂದಾಗಿ ಮೂಗಿನ ಮೇಲಳವಟ್ಟು*
*ಮನೆಬಾಗಿಲ ಬಿಟ್ಟು*

*ಕಂದರ್ಪನ ಶರದಿಂದ ನೊಂದು ಬಹು*
*ಕಂದಿ ಕುಂದುತಲಿಂದುವದನೆಯರು*
*ಇಂದಿರೇಶನಾನಂದದ ಗಾನಕೆ*
*ಚಂದ್ರಮುಖಿಯರೊಂದಾಗುತ ಬರುತಿರೆ ||೧||*

- ಗೋಪಿಯರ ಧಾವಂತದ ಜೀವಂತ ಚಿತ್ರಣವಿದು. ಹಾಗೆ ಬಿಟ್ಟದ್ದು ಬಿಟ್ಟಹಾಗೆ ಬಿಸಿಲು ಮಳೆ ಚಳಿಯೆನ್ನದೆ ಧಾವಿಸಿ ತನ್ನಲ್ಲಿಗೆ ಬಂದ ಗೋಪಿಯರಿಗೆ ಕೃಷ್ಣ 'ಬಾಯಾರಿದಿರಿ ಬದಿಯಲ್ಲಿ ಬಂದು ಕುಳ್ಳಿರಿ ಅಧರಾಮೃತ ಪಾನ ಮಾಡಿರಿ' - ಎಂದು ಮುಂತಾಗಿ ಪ್ರೀತಿಯಿಂದ ಉಪಚರಿಸಿದ. ಈ ದಿವ್ಯ ಸಮಾಗಮವನ್ನು ಕಂಡ ರಂಭೆ ಊರ್ವಶಿ ಮೇನಕೆಯರು ನಾಟ್ಯವಾಡಿ ನಲಿದರಂತೆ. ಭಗವಂತನ ಈ ಲೀಲೆಯೆಲ್ಲ ಭಕ್ತರನ್ನು ಕಾಯುವುದಕ್ಕೆ, 'ಭಕ್ತರ ಕಾಯ್ವುದಕೀ ವಿಧದೊಳಗಾಡಿದ ರಂಗವಿಠಲ' - ಎನ್ನುವ ಕೃತಿಯ ಕೊನೆಯ ಮಾತುಗಳಿಂದ ಇಡೀ ಕೀರ್ತನೆಗೇ ಒಂದು ಹೊಸ ಆಯಾಮ ದಕ್ಕಿದೆ.

ಕೃಷ್ಣ-ಗೋಪಿಯರ ಮಧುರ ಪ್ರೇಮ ವಿರಹದ ನೆಲೆಯಲ್ಲಿ ಮತ್ತಷ್ಟು ಕಳೆಗಟ್ಟಿದೆ. ಶ್ರೀಕೃಷ್ಣ-ಬಲರಾಮರು ಅಕ್ರೂರನೊಡನೆ ಬಿಲ್ಲಹಬ್ಬಕ್ಕೆಂದು ಮಧುರೆಗೆ ಹೊರಡುವ ವಿಚಾರ ಹಿಂದಿನ ದಿನವೇ ಕಿವಿಯಿಂದ ಕಿವಿಗೆ ಮುಟ್ಟಿ, ಗೋಪಿಯರೆಲ್ಲರಿಗೂ ತಿಳಿದುಬಿಡುತ್ತದೆ.

*ಕೇಳಿದ್ಯಾ. ಕೌತುಕವನ್ನು ಕೇಳಿದ್ಯಾ*
*ನಾ ಕೇಳಿದೆ ನಿನಗಿಂತ ಮುನ್ನ ಆಹಾ*
*ಚಾಳಿಕಾರ ಕೃಷ್ಣ ಪೇಳದೆ ಮಧುರೆಗೆ*
*ಕೋಳಿ ಕೂಗದ ಮುನ್ನ ನಾಳೆ ಪಯಣವಂತೆ*

- ಗೋಕುಲದ ತುಂಬ ಈ ಅಂತೆ ಕಂತೆಗಳ ಗುಸುಗುಸು ಪಿಸಪಿಸ. ಗೋಪಿಯರಿಗೆಲ್ಲ ಆತಂಕ, ಕಳವಳ:

*ಮಾನನಿಧಿ ಶ್ರೀಕೃಷ್ಣ ಮಧುರೆಗೈದುವನಂತೆ*
*ಏನು ಪಥವಮ್ಮ ನಮಗೆ ||ಪ||*

*ಮಾನವೇನಿನ್ನಿದಕೆ ಮಾನಿನಿಯರೆಲ್ಲರು*
*ಆಣೆಯನು ಕಟ್ಟವನಿಗಡ್ಡ ನಿಲ್ಲುವ ಬನ್ನಿ ||ಅ.ಪ||*

*……………………..*
*ವನಜಾಕ್ಷ ಎಲ್ಲಿ ಗೈದಿದರೆ ನಾವಲ್ಲಿಗೈದುವ ಬನ್ನಿ*

- ಎಂದು ಎಲ್ಲ ಗೋಪಿಯರೂ ಸೇರಿ ಮರುದಿನದ ಅವನ ಪಯಣವನ್ನು ನಿಲ್ಲಿಸುವ ಉಪಾಯ ಮಾಡುವರು. ಸರಿರಾತ್ರಿಯಲ್ಲಿ ಎಲ್ಲರೂ ಒಟ್ಟಾಗಿ ಕೃಷ್ಣನ ಬಳಿಗೆ ಹೋಗಿ ಪರಿಪರಿಯಾಗಿ ತಮ್ಮ ವಿರಹವನ್ನು ತೋಡಿಕೊಳ್ಳುವರು. 'ನೀನಿಲ್ಲದ ಗಳಿಗೆಯೊಂದು ಯುಗವಾಗಿ ತೋರುತಿಹುದೋ… ಬ್ಯಾಡ ಮಧುರೆಗೆ ಪೋಗಬ್ಯಾಡೆಲವೊ ಶ್ರೀಕೃಷ್ಣ| ಬೇಡಿ ಕೊಂಬೆವೊ ದೈನ್ಯದಿ' - ಎಂದು ವಿರಹಾಕುಲೆಯರಾಗಿ ಪ್ರಲಾಪಿಸುವರು. ಎಲ್ಲವನ್ನೂ ಕೇಳಿದ ಕೃಷ್ಣ 'ಕಿಂಚಿತ್ಕಾಲದೊಳಾನೈದುವೆ ಪಾಲಿಸಿರೆನಗಪ್ಪಣೆಯ… ನಾಳೆ ಉದಯಕೆ ಪೋಗಿ ನಾಲ್ಕೆಂಟು ದಿನದೊಳು ವ್ಯಾಳೆಗಿಲ್ಲಿಗೆ ಬರುವೆ' - ಎಂದು ಮಾತುಕೊಟ್ಟು ಸಂತೈಸುವನು. 'ಪಟ್ಟಣದ ನಾರಿಯರು ಬಲು ದಿಟ್ಟೆಯರು; ಕಾಮಶಾಸ್ತ್ರ ನಿಪುಣೆಯರು; ನಿನ್ನ ಮನಸ್ಸನ್ನು ನಿಮಿಷಾರ್ಧದಲ್ಲಿ ಸೆಳೆದುಬಿಡುವರು. ಹಳ್ಳಿಯವರಾದ ನಮ್ಮ ನೆನಪು ಅಲ್ಲಿ ನಿನಗೆಲ್ಲಿ ಬರುತ್ತದೆ … ಬಿಲ್ಲಹಬ್ಬವೇ ಸುಳ್ಳು… ಆ ಹೆಂಗಳೆಯರ ಸಲುವಾಗಿಯೇ ಈ ಕ್ರೂರ ಅಕ್ರೂರನನ್ನು ಕಳುಹಿಸಿ ನಿನ್ನನ್ನು ಕರೆಸಿಕೊಳ್ಳುತ್ತಿದ್ದಾರೆ. ನೀನೋ ಅವರನ್ನು ಸೇರಿ ನಮ್ಮನ್ನು ಮರೆತು ಬಿಡುತ್ತೀಯೆ' - ಎಂದು ದುಃಖತಪ್ತರಾಗಿ ವಾದಿಸುವರು. ಅದೆಲ್ಲ ಸುಳ್ಳೆಂದೂ ಮಲ್ಲಯುದ್ಧವನ್ನು ನೋಡುವ ಸಲುವಾಗಿ ಮಾವ ಕಂಸ ತನ್ನನ್ನು ಮಧುರೆಗೆ ಕರೆಸುತ್ತಿರುವನೆಂದು ಸರಸಿಜಭವ

ಮಾರರಾಣಿಗೂ ತಾನು ಬೇಗ ಹಿಂತಿರುಗುವುದಾಗಿಯೂ ತನ್ನ ಮಕ್ಕಳಾದ ಬ್ರಹ್ಮ-ಮನ್ಮಥರ ಮೇಲೆ ಆಣೆಯಿಟ್ಟು ಹೇಳುವನು, ಕೃಷ್ಣ. ಆ ಮಾತುಗಳನ್ನು ಕೇಳುತ್ತಲೇ ಆ ಜಾಣೆಯರು-

*ಮಾರನೆಂಬುವನಂದೆ ಮಡಿದನು ಶಿವನ*
*ಮೂರನೆ ಕಣ್ಣಲಿ*
*ನಾರೇರಿಲ್ಲದೆ ನಾಭಿಯಿಂದ ಪಡೆದ*
*ಆ ಬ್ರಹ್ಮನೆಂಬಾತನ*

- ಇಂಥವರ ಮೇಲೆ ಆಣೆಯಿಟ್ಟರೂ ಒಂದೇ ಇಡದಿದ್ದರೂ ಒಂದೇ ಎಂದು ವ್ಯಂಗ್ಯವಾಡುವರು. ಕೊನೆಗೆ 'ಹಲವು ಮಾತುಗಳ್ಯಾಕೆ ... ಒಲುಮೆಯಲ್ಲಿರುತಿಪ್ಪ ಲಲನೆಯರನ್ನು ಸಲಹು ಸಲಹದೆ ಮಾಣು' - ಎಂದು ಅನನ್ಯಯ ಶರಣಾಗತಿಯಿಂದ ಕೃಷ್ಣನಿಗೆ ತಲೆಬಾಗುವರು. ಇಲ್ಲಿಯ ಕೃಷ್ಣ-ಗೋಪಿಯರ ಮಾತಿನ ಸೊಗಡು, ಸಂಭಾಷಣೆಯ ತಂತ್ರ ಕೃತಿಗೆ ನಾಟಕೀಯತೆಯನ್ನು ತಂದುಕೊಟ್ಟಿದೆ. ಸರಳ ಹಾಗೂ ನೇರವಾದ ಆಡುಮಾತುಗಳು, ಪ್ರಾಸಾನುಪ್ರಾಸಗಳು ಕೃತಿಯ ಅಂದವನ್ನು ಹೆಚ್ಚಿಸಿವೆ.

ಕೃಷ್ಣ ಮಧುರೆಗೆ ಹೋದ ಬಳಿಕ ಗೋಕುಲದ ಗೋಪಿಯರ ವಿರಹ ಮುಗಿಲು ಮುಟ್ಟುತ್ತದೆ. ಬೃಂದಾವನದ ಪರಿಸರವೆಲ್ಲವೂ ಅವರಿಗೆ ಕೃಷ್ಣಮಯವಾಗಿ ಕಾಣುತ್ತದೆ. ಅಲ್ಲಿಯ ಎಲ್ಲ ವಸ್ತುಗಳೂ ಅವನ ನೆನಪನ್ನುಂಟು ಮಾಡುತ್ತವೆ:

*ಈ ವನದೆಡೆಗಳು ಈ ಲತೆವನಗಳು*
*ಈ ನದಿ ಪುಳಿನಗಳೀ ಶಶಿ ಶಿಲೆಗಳು*
*ಈ ಸುರತರು ನೆಳಲು ಶುಕಪಿಕರವ*
*ಯಾಕೆ ಮಾಧವನ ಮರೆಯಲೀಯದಿವೆ ಕೆಳದಿ*

- ಎಂದು ಗೋಪಿಯೊಬ್ಬಳು ತಾನು ಕೃಷ್ಣನೊಂದಿಗೆ ಕಳೆದ ಮಧುರಕ್ಷಣಗಳನ್ನು ನೆನೆಯುತ್ತಾ, ಮಧುರೆಯ ರತಿವಿದಗ್ಧರಾದ ಮಾನಿನಿಯರಿಗೆ ಈ ರಸಿಕ ಸಿಕ್ಕಿಬಿಟ್ಟಿದ್ದಾನೆ; ಅವನು ಮತ್ತೆ ಮರಳುವುದಿಲ್ಲವೆಂದು ತನ್ನ ವ್ಯಥೆಯನ್ನು ಗೆಳತಿಯೊಂದಿಗೆ ಹಂಚಿಕೊಂಡಿರುವಳು. ಕಂದಿದೆವು ಕುಂದಿದೆವು ನಾವು ... ಅವನ ನೆನಪೇ ನಮಗೆ ಸಾಕು - ಎಂದು ಸಮಾಧಾನ ಮಾಡಿಕೊಳ್ಳುವಳು. ಕೃಷ್ಣ ಮಧುರೆಯಿಂದ ಗೋಪಿಯರ ಕುಶಲವನ್ನು ಕೇಳಿ ಬರಲು ತನ್ನ ಗೆಳೆಯ ಉದ್ದವನನ್ನು ಗೋಕುಲಕ್ಕೆ ಕಳುಹಿಸುವನು. ಅವನ ರಥವನ್ನು ಕಂಡೊಡನೆಯೇ 'ಅಂದೆಮ್ಮ ಕೊಂದ ಇಂದ್ಯಾರ ಕೊಲ್ಲಲಿ ಬಂದ, ಈ ಕ್ರೂರ? ಅಥವಾ ನಮ್ಮನ್ನೂ ಅಲ್ಲಿಗೇ ಕರೆದುಕೊಂಡು ಹೋಗಲು ಬಂದನೋ' - ಎಂದು ಕೋಪ ಕುತೂಹಲಗಳಿಂದ ರಥವನ್ನು ಇದಿರುಗೊಳ್ಳುವರು.

*ಅವನ ಹಂಬಲವೆಮಗೆ ಜೀವನವವ್ವಾ...*
*ಭುವನಮೋಹನ ರಂಗವಿಠಲನು ಕರುಣಿಯೇ*

-ಎನ್ನುವ ಗೋಪಿಯರ ಮಾತುಗಳಂತೂ ಕರುಳು ಕಿತ್ತು ಬರುವಂತಿವೆ. ಮತ್ತೊಬ್ಬ ಗೋಪಿ 'ಒಲ್ಲೆನವ್ವಾ ಲಕುಮಿಯನಲ್ಲ ಬಾರದಿದ್ದರೆ ತನು ಹೊರೆಯನೊಲ್ಲೆನವ್ವಾ... ಹಾರ ಕೊರಳಿಗೆ ಭಾರ ಹೂವಿನಭಾರ ಸೈರಿಸಲಾರೆನೆ' ಎಂದು ಹಲುಬಿದ್ದಾಳೆ 'ಮಂದಾನಿಲನ ಸಹಿಸಲಾಗದು,... ಶುಕಪಿಕರವಗಳಿಂದ ನೊಂದೆ, ಚಂದ್ರಕಿರಣದಿಂದ ಬೆಂದೆ... ಇನ್ನೀ ವೃಂದಾವನ ವೇಕವನ ನಗಲಿ?' - ಎಂದು ಹಾಡಿ ಹಾಡಿ ದುಃಖಿಸುವಳು. ಮತ್ತೊಬ್ಬಳು:

*ಕೊಂಬುಕೊಳಲನೂದುತ್ತ ನಂಬಿಸಿಪೋದನೆಯವ್ವಾ*
*ಅಂಬುಜನಾಭಗೆ ಮನ ಹಂಬಲಿಸುತ್ತಿದೆಯವ್ವಾ*

*ನಡೆಯಲಾರೆನವ್ವಾ ಅಡಿಯಿಡಲೊಶವಿಲ್ಲ*
*ಬೆಡಗುಗಾರನ ಕೂಡೆ ನುಡಿ ತೆರಳಿತ್ತೆಯವ್ವಾ*

- ಎಂದು ನೊಂದುಕೊಳ್ಳುತ್ತಾ ತನ್ನ ವಿರಹವೇದನೆಯನ್ನು ತೋಡಿಕೊಳ್ಳುವಳು. ವೇದನೆಯನ್ನನುಭವಿಸಿದ ಮನಸ್ಸುಗಳು ವಿಧಿಯನ್ನೇ ದೂಷಿಸತೊಡಗುತ್ತವೆ. 'ವಿಧಿಗೆ ದಯವಿಲ್ಲವಕ್ಕ ಎಮ್ಮ ಮ್ಯಾಲೆ। ಯದುಪತಿಯನಗಲಿಸಿದ ಒಮ್ಮಿಂದಲೊಮ್ಮೆ' - ಎಂದು ವಿಧಿಯನ್ನು ಬೈಯುತ್ತ, ಕೃಷ್ಣನ ಮುದ್ದುಮುಖ, ಸುಳಿಗುರುಳುಗಳನ್ನು ಮತ್ತೆ ಮತ್ತೆ ನೋಡುವ ಬಯಕೆಯನ್ನು ಹೇಳಿಕೊಳ್ಳುತ್ತಾ 'ಹಕ್ಕಿಯ ಮೇಲುಳ್ಳ ದಯ ನಮ್ಮ ಮ್ಯಾಲೆ ಇಕ್ಕದೇಕೆ ಹೋದ್ಯೋ ವಿಧಿಯೆ'- ಎಂದು ಅಲವತ್ತುಕೊಳ್ಳುವರು. ನಮಗೂ ಎರಡು ರೆಕ್ಕೆಗಳಿದ್ದಿದ್ದರೆ ಗಕ್ಕನೆ ಹೋಗಿ ಹರಿಯನ್ನು ಕೂಡುತ್ತಿದ್ದೆವಲ್ಲಾ ಎಂದು ತಮ್ಮ ಅಸಹಾಯಕತೆಯನ್ನೂ ವಿರಹ ಯಾತನೆಯನ್ನೂ ತೋಡಿಕೊಂಡು 'ರಂಗವಿಠ್ಠಲನ, ಅಂಗಸಂಗವಿಲ್ಲದ ಈ ಭಂಗಜೀವನವ ಸುಡುಸುಡು ಸುಡಿನ್ಯಾತಕಕೆ'- ಎಂದು ಮರುಗುವಳು. ಗೋಪಿಯರ ಈ ಒಂದೊಂದು ಮಾತೂ ಓದುಗರ ಅಂತರಂಗವನ್ನೇ ಮಿಡಿಯುವಲ್ಲಿ ಸಫಲವಾಗಿದೆ.

ಶ್ರೀಪಾದರಾಜರ 'ಭ್ರಮರಗೀತೆ'ಯಲ್ಲಂತೂ ಗೋಪಿಯರ ವಿರಹ ಮಡುಗಟ್ಟಿ ನಿಂತಿದೆ. ಗೋಪಿಯರೆಲ್ಲ ಮಾತನಾಡುತ್ತ ನಿಂತಿರುವಾಗ ಒಂದು ದುಂಬಿ ಝೇಂಕರಿಸುತ್ತ ಬಳಿಗೆ ಬರುತ್ತದೆ. ಅದನ್ನು ಕೃಷ್ಣನ ದೂತನೆಂದು ಭಾವಿಸಿ ಗೋಪಿಯರು ತಮ್ಮ-ಕೃಷ್ಣನ ಅಗಲಿಕೆಯ ನೋವನ್ನು ಅದರ ಮುಂದೆ ಎಳೆ ಎಳೆಯಾಗಿ ರೆ :

*ಭೃಂಗಾ ನಿನ್ನಟ್ಟಿದನೇ ಶ್ರೀರಂಗ ಮಧುರೆಲಿ ನಿಂದು*
*ಅಂಗಜ ಲುಬ್ಧಕ ಪೂಗೋಲಂಗಳ ತಡೆಯನಿಕ್ಕಿ*
*ಅಂಗನೇರೆಂಬೋ ಹುಲ್ಲೆ ಮೃಗಂಗಳಿಗೆ ಗುರಿಯೆಚ್ಚು*
*ಹಿಂಗಿಸುತ್ತೈದಾನೆ ಅಸುವ ಹೇ ಕಿತವಾ -*

-ಎಂದು ಕೇಳುತ್ತಾ, 'ನಿನ್ನ ನೋಡೆ ನಮ್ಮ ಅಚ್ಚುತನ್ನ ಕಂಡಂತಾಯಿತಯ್ಯ। ಚನ್ನಿಗರರಸ ಕುಶಲೋನ್ನತಿಯೊಳಿಹನೇನೋ' - ಎಂದು ಅಭಿಮಾನದಿಂದ ಕೃಷ್ಣನ ಕುಶಲವನ್ನು ವಿಚಾರಿಸಿಕೊಂಡರೂ ಮರುಕ್ಷಣವೇ 'ವಿರಹಾಬ್ಧಿಯನ್ನು ದಾಟಿಸುವುದಾಗಿ ನಂಬಿಸಿ ತನ್ನ ಸ್ನೇಹದ ನಾವೆಯೇರಿಸಿಕೊಂಡು ಹೋದ ಕೃಷ್ಣ ಮೋಸದಿಂದ ನಡು ನೀರಿನಲ್ಲಿ ಕೈಬಿಟ್ಟು ಹೋದ'ನೆಂದು ದೂರುವರು.

*ನಮ್ಮ ಹಂಬಲಿನ್ನೇನವಗೆ ಹೊಮ್ಮೇಲಟ್ಟದಲಂಚೆಯ*
*ಗಮ್ಮ ನೇರ ಕುಚದ ಕುಂಕುಮ್ಮ ಕಸ್ತುರಿಯ ಕರ*
*ದಿಮ್ಮನದಿ ಸಿಲುಕಿದಂಗೆ*

- ಎಂದು ಮಮ್ಮಲ ಮರುಗುವರು. ಅವನ ಕೊಳಲಿನ ನಾದದ ಸಮ್ಮೋಹನಕ್ಕೊಳಗಾದ ನಾವು ಮನೆಮಠ ಬಿಟ್ಟು ಹಾರಿ ಅವನಲ್ಲಿಗೆ ಹೋದಾಗ ನಮ್ಮನ್ನು ಅಪ್ಪಿ ಅಧರಾಮೃತವುಣಿಸಿದ ಅವನು ಈಗ ಹೇಗೆ ಕಲ್ಲೆದಯವನಾದನೋ ಕಿತವ... ಹೆತ್ತ ತಂದೆತಾಯಿ ಆಪ್ತಬಂಧು ಗತಿಗೋತ್ರ ಎಲ್ಲವೂ ನೀನೆಂದ ನಮಗೆ ಬೇಗಬರುವೆನೆಂದು ಹೇಳಿ ಅಕ್ರೂರನೊಡನೆ ಹೊರಟೇ ಹೋದನೆಂದು ನೊಂದುಕೊಳ್ಳುವರು. ಲಕ್ಷ್ಮೀರಮಣನೂ ಕುಕ್ಷಿಯೊಳಗೆ ಬ್ರಹ್ಮಾಂಡವನ್ನಿಟ್ಟ ಮೋಕ್ಷದರಸನೂ ಆದ ಅವನಿಗೆ ಕೇವಲ ಗೊಲ್ಲತಿಯರೂ ಗೋಕ್ಷೀರದಿಂದ ತೃಪ್ತರಾಗುವ ನೊಣಗಳಂತಿರುವ ನಾವು ಸಾಟಿಯೆ? ಹಾಗೆ ಭಾವಿಸುವುದು ಅಪರಾಧ' - ಎಂದು ತಾರತಮ್ಯ ಭಾವದಿಂದ ಪರಿತಪಿಸಿ ಕೊನೆಗೆ ಎಲ್ಲರೂ ಒಂದಗಿ 'ರಂಗವಿಠಲ ತುಂಗಮಹಿಮ ನಮೋ'- ಎಂದು ಆ ದಶಾವತಾರಿ ಹರಿಗೆ ನಿರ್ಮಲ ಪ್ರೇಮದಿಂದ ಶರಣಾಗುವರು. ಒಂಬತ್ತು ನುಡಿಗಳ ಈ ಕೃತಿಯ ಉದ್ದಕ್ಕೂ ಗೋಪಿಯರ ಮೊರೆ ತೊರೆಯಾಗಿ ಹರಿದಿರುವುದು ಅನುಭವಕ್ಕೆ ಬರುತ್ತದೆ. 'ವನಜಯನನ ಮನವ ಮಧುಪನಂಬುವರೆ ಮನದೆಗೆದ ಮದನಪಿತ' - ಎನ್ನುವ ಕೀರ್ತನೆಯಲ್ಲೂ ಇದೇ ಭಾವ ವ್ಯಕ್ತವಾಗಿರುವುದನ್ನು ನೋಡಬಹುದು. 'ಕೃಷ್ಣನನ್ನು ತೊರೆದು ಬದುಕುವುದೆಂತೋ .... ವಿರಹದುರಿತಾನಳವದರಿ ಸುಡುತಿಹುದು' - ಎಂದು ಮುಂತಾಗಿ ಗೋಪಿರು ದುಂಬಿಯೊಡನೆ ತಮ್ಮ ವಿರಹದ ತೀವ್ರತೆಯನ್ನು ತೋಡಿಕೊಳ್ಳುವರು.

'ಮರುಳುಗಳು ನಾವು ಶ್ರೀಪತಿಯ ಕೂಟವ ಬಯಸಿ। ಇರುಳು ಹಗಲು ಜರಿಜರಿದಳಲುವೆವು। ಸಿರಿಯ ವನ ಉಂಗುಟದ ಉಗುರುಗುಣ ಕಾಣಳೆಲೋ। ಹರಿ ನಮ್ಮ ನೆನೆವುದಚ್ಚರಿಯಲ್ಲವೇ' - ಎಂದು ತಮಗೆ ತಾವೇ ಸಮಾಧಾನ ತಂದುಕೊಂಡು, ಕೊನೆಗೆ 'ಎಲೈಭೃಂಗವೇ ಮಧುರೆಗೆ ಹೋಗಿ ರಂಗವಿಠಲನನ್ನು ಕರೆತಂದು ನಮ್ಮನುಳುಹುವುದೋ' - ಎಂದು ಕಳಕಳಿಯಿಂದ ಕೈಮುಗಿದು ದುಂಬಿಯನ್ನು ಬೇಡಿಕೊಳ್ಳುವ ಅವರ ಮುಗ್ಧತೆ ಸಹೃದಯರ ಹೃದಯವನ್ನು ಕರಗಿಸಿಬಿಡುತ್ತದೆ. ಭಾಗವತದಲ್ಲಿ ಬರುವ ಭ್ರಮರಗೀತೆಯೇ ಈ ಕೃತಿಗೆ ಪ್ರೇರಣೆ. ಹೀಗೆ ಗೋಪಿ - ಕೃಷ್ಣರ ನಡುವಣ ಬಾಂಧವ್ಯ ಶ್ರೀಪಾದರಾಜರಲ್ಲಿ ವಾತ್ಸಲ್ಯದ ಝರಿಯಾಗಿ ಮಧುರಭಾವದ ತೊರೆಯಾಗಿ ಪ್ರವಹಿಸಿದೆ.

## ೩. ಕೃತಿಗಳು (೪)

ಭಕ್ತ - ಭಗವಂತರ ನಡುವೆ ಗೆಳೆತನದ ಸವಿಯನ್ನು, ಸಲಿಗೆಯನ್ನು ಕಲ್ಪಿಸಿಕೊಂಡು ಪರಸ್ಪರ ಸ್ನೇಹಿತರೆಂಬ ಕಲ್ಪನೆಯಿಂದ ಭಕ್ತಿಸಾಧನೆ ಮಾಡುವುದು 'ಸಖ್ಯಭಕ್ತಿ' ಅಥವಾ 'ಸಖ್ಯಭಾವ'. ಶ್ರೀಪಾದರಾಯರಲ್ಲಿ ಸಖ್ಯಭಕ್ತಿಯ ಕೀರ್ತನೆಗಳೂ ವಿಶೇಷಕಾವ್ಯಸೌಂದರ್ಯದಿಂದ ಕೂಡಿವೆ. ಶ್ರೀಹರಿ ತಮ್ಮ ಬಾಲ್ಯದ ಸ್ನೇಹಿತನೆಂದು ಪರಿಭಾವಿಸಿರುವ ಶ್ರೀಪಾದರಾಜರು ಅನೇಕ ವರ್ಷಗಳ ಬಳಿಕ ಅಗಲಿದ್ದ ಆ ಬಾಲ್ಯ ಸ್ನೇಹಿತ ದನಗಾಹಿ ಹರಿಯನ್ನು ಭೇಟಿಯಾದಂತೆ ಕಲ್ಪಿಸಿಕೊಂಡು ಒಂದು ಮೋಹಕ ಕೃತಿಯನ್ನು ರಚಿಸಿರುವರು:

*ಮರೆತೆಯೇನೋ ರಂಗ ಮಂಗಳಾಂಗ*
*ತುರುಕರು ಕಾಯ್ವಲ್ಲಿ ತೊಂಡನಾಗಿದ್ದೆನ್ನ ॥ಪ॥*

*ಕೋಲು ಕೈಯಲಿ ಕೊಳಲು ಜೋಲುಗಂಬಳಿ ಹೆಗಲ*
*ಮ್ಯಾಲೆ ಕಲ್ಲಿಚೀಲ ಕೊಂಕಳಲ್ಲಿ*
*ಕಾಲಗಡಗವ ನಿಟ್ಟು ಕಾಡೊಳಿಹ ಪಶುಹಿಂಡ*
*ಲಾಲಿಸುವ ಬಾಲಕರ ಮ್ಯಾಳದೊಳಗಿದ್ದೆನ್ನ ॥೧॥*

*ಕಲ್ಲುಮಣಿ ಕವಡೆಯನು ಕಾಡೊಳಿಹ ಗುಲಗಂಜಿ*
*ಸಲ್ಲದೊಡವೆಯ ನೀನು ಸರ್ವಾಂಗಕೆ*
*ಅಲ್ಲಲ್ಲೆಸೆಯೆ ಧರಿಸಿ ನವಿಲಗರಿಗಳ ಗೊಂಡೆ*
*ಅಲ್ಲಿ ಗೊಲ್ಲರ ಕೂಡ ಚಲ್ಲಾಡವಾಡುತಲಿ ॥೨॥*

*ಸಿರಿದೇವಿ ಬಂದು ಸೇರಿದ ಬಳಿಕ ಲೋಕದಲಿ*
*ಸಿರಿ ಅರಸನೆಂದು ಸೇವಕರರಿವರೋ*
*ಶರಣಾಗತರ ಪೊರೆವ ಶ್ರೀರಂಗವಿಠಲಯ್ಯ*
*ನರಸಿಂಹ ನೀನಿರುವ ಪರಿಯು ಮುಂದಿನ ಸಿರಿಯು ॥೩॥*

- ಎಂದು ಮುಂತಗಿ ಸಿರಿದೇವಿ ಬರುವ ಮುನ್ನ ಅಂದರೆ ಮದುವೆಗೆ ಮೊದಲು ಕೃಷ್ಣ ಕಲ್ಲು ಕವಡೆ ಮಣಿ ನವಿಲುಗರಿಗಳಿಂದಲಂಕರಿಸಿಕೊಂಡು ಗೆಳೆಯರ ಹಿಂಡನ್ನು ಕಟ್ಟಿಕೊಂಡು ಅಡವ್ಯಡವಿ ತಿರುಗುತ್ತಿದ್ದ ಅವನ ಬಾಲ್ಯಾವಸ್ಥೆಯನ್ನು ಅವನಿಗೇ ನೆನಪು ಮಾಡಿಕೊಟ್ಟಿರುವರು. ಚಿತ್ರಕಾರನ ಕುಂಚಕ್ಕೆ ಒಂದು ಸೊಗಸಾದ ಶಬ್ದ ಚಿತ್ರವಿದು. ಇನ್ನೊಂದು ಕೀರ್ತನೆಯಲ್ಲಿ,

*ವಾಸುದೇವ ನಿನ್ನ ಮರ್ಮಕರ್ಮಂಗಳ*
*ದೇಶದೇಶದಲ್ಲಿ ಪ್ರಕಟಿಸಲೊ*

*ಬೇಸರದೆ ಎನ್ನ ಹೃದಯಕಮಲದಲ್ಲಿ*
*ವಾಸವಾಗಿ ಸುಮ್ಮನಿದ್ದೀಯೊ*

- ಎಂದು ಕೃಷ್ಣನನ್ನು ಬೆದರಿಸಿರುವರು. ನೀನು ಬೆಣ್ಣೆ ಕದ್ದು ತಿಂದದ್ದು, ತುಂಟತನ ಮಾಡಿ ಒರಳಿಗೆ ಕಟ್ಟಿಸಿಕೊಂಡದ್ದು, ಗೊಲ್ಲರ ಜೊತೆ ಅವರು ಕಲ್ಲಿಚೀಲದಲ್ಲಿ ತಂದಿದದ ಅನ್ನವನ್ನುಂಡದ್ದು - ಎಲ್ಲವನ್ನೂ ಹೇಳಿಬಿಡಲೆ? ಅಷ್ಟೇ ಅಲ್ಲ, ಕಾಳಿಂಗನ ಹೆಡೆತುಳಿದದ್ದು, ಹೆಂಡತಿ ಮಾತು ಕೇಳಿ ಪಾರಿಜಾತ ತಂದುಕೊಟ್ಟದ್ದು, ಗೌರೀವ್ರತ ಮಾಡಲು ಬಂದಿದ್ದ ಮಾನಿನಿಯರ ವ್ರತಭಂಗ ಮಾಡಿದ್ದು, ತೃಣಾವರ್ತ ಜರಾಸಂಧ ಕಾಲಯವನಾದಿ ರಕ್ಕಸರನು ಕೊಂದಿದ್ದು ಎಲ್ಲವನ್ನೂ ಹೇಳಿ ಬಿಡುತ್ತೇನೆಂದು ಬೆದರಿಸುತ್ತಲೇ ಎಲ್ಲವನ್ನೂ ಹೇಳಿಬಿಟ್ಟಿರುವ ತಂತ್ರಗಾರಿಕೆಯಲ್ಲಿ ಸೊಗಸಿದೆ.

'ಒಲಿದೆ ಯಾತಕಮ್ಮಾ ಲಕ್ಷುಮಿ ವಾಸುದೇವಗೆ' - ಎನ್ನುವ ಕೀರ್ತನೆಯಲ್ಲಿ ಹರಿಯನ್ನು ಕೈಬಿಟ್ಟು ಲಕ್ಷ್ಮೀದೇವಿಯ ಬೆನ್ನತ್ತಿ ಹೊರಟಿದ್ದಾರೆ, ಶ್ರೀಪಾದರಾಜರು. ಮಾವನನ್ನು ಮಡುಹಿದ, ಹದಿನಾರು ಸಾವಿರ ಗೋಪಿಯರನ್ನು ಮದುವೆಯಾದ, ಗೋಪಿಯರ ಮನೆಗಳಲ್ಲಿ ಹಾಲು ಮೊಸರು ಬೆಣ್ಣೆ ಕದ್ದ ಕಳ್ಳ, ಕರಿಯ ಕೃಷ್ಣನನ್ನು ಯಾತಕ್ಕಾಗಿ ಮೋಹಿಸಿದೆ? ನಿನಗೆ ಅನುರೂಪ;ನಾದ ಸ್ಫುರದ್ರೂಪಿ ವರ ಬೇರೆಲ್ಲೂ ಸಿಗಲಿಲ್ಲವೆ? - ಎಂದು ಲಕ್ಷ್ಮಿಯನ್ನು ಕೇಳುವ ನೆಪದಲ್ಲಿ ಸಲಿಗೆಯಿಂದ ಶ್ರೀಹರಿಯನ್ನು ಆಡಿಕೊಂಡು ನಕ್ಕಿದ್ದಾರೆ.

ಭಕ್ತ-ಭಗವಂತರ ನಡುವೆ ಮನುಷ್ಯ ಸಂಬಂಧದ ಲೇಪವಿಲ್ಲದೆ ಕೇವಲ ಭಕ್ತ - ಭಗವಂತರೆಂಬ ಭಾವನೆಯಿಂದ ಮಾತ್ರ ಹರಿಯ ರೂಪ ಗುಣ ಮಾಹಾತ್ಮ್ಯಾದಿಗಳನ್ನು ಚಿತ್ರಿಸಿರುವುದು 'ಶಾಂತಭಕ್ತಿ' ಅಥವಾ 'ಶಾಂತಭಾವ' ಎನ್ನಿಸಿಕೊಳ್ಳುತ್ತದೆ. ರಂಗವಿಠಲನನ್ನು ನಂಬಿದವರಿಗೆ ಮುಕ್ತಿ ದೊರೆಯುವುದೆಂಬುದನ್ನು:

*ಭಕ್ತಿ ಬೇಕು ವಿರಕ್ತಿ ಬೇಕು ಸರ್ವ*
*ಶಕ್ತಿ ಬೇಕು ಮುಂದೆ ಮುಕ್ತಿಯ ಬಯಸುವಗೆ ॥ಪ॥*

*………….*

*ಜಪದ ಜಾಣುವೆ ಬೇಕು ತಪದನೇಮವೆ ಬೇಕು*
*ಉಪವಾಸ ವ್ರತಬೇಕು ಉಪಶಾಂತವಿರಬೇಕು ॥೧॥*

*ಸುಸಂಗ ಹಿಡಿಯಲಿಬೇಕು ದುಸ್ಸಂಗ ಬಿಡಲಿಬೇಕು*
*ರಂಗವಿಠಲನ್ನು ಬಿಡದೆ ನೆರೆ ನಂಬಿರಲಿಬೇಕು ॥೨॥*

- ಎಂಬುದಾಗಿ ಜಪ, ತಪ, ಉಪವಾಸ ವ್ರತಗಳೆಲ್ಲದರ ಜೊತೆಗೆ ಹರಿಕರುಣೆಯ ಬಯಕೆ ಶ್ರದ್ಧೆ, ನಂಬಿಕೆಗಳು ಮುಖ್ಯವೆಂದಿದ್ದಾರೆ, ಶ್ರೀಪಾದರಾಜರು. ಮುಕ್ತಿಯನ್ನು ಆಶಿಸುವ ವ್ಯಕ್ತಿಗೆ ಎಂತಹ ಶಿಸ್ತಿನ ಜೀವನವಿರಬೇಕೆನ್ನುವ ಬಗ್ಗೆ ಈ ಕೀರ್ತನೆಯಲ್ಲಿ ಮಾರ್ಗದರ್ಶನ ದೊರೆಯುತ್ತದೆ. ಅಂತೆಯೇ 'ಭೂಷಣಕೆ ಭೂಷಣ ಇದು ಭೂಷಣ| ಶೇಷಗಿರಿವಾಸ ಶ್ರೀವರ ವೆಂಕಟೇಶ'- ಎನ್ನುವ ಕೀರ್ತನೆಯಲ್ಲೂ ಹರಿನಾಮ ಸ್ಮರಣೆ, ಹರಿನಾಮ ಕೀರ್ತನೆ, ಕ್ಷೇತ್ರಗಳ ಶ್ರೇಷ್ಠತೆ, ಅವಯವಗಳ ಸಾರ್ಥಕತೆಗಳ ಬಗ್ಗೆ ಶಾಂತಚಿತ್ತರಾಗಿ ತಿಳಿಸಿಕೊಟ್ಟಿದ್ದಾರೆ. 'ಸ್ಮರಿಸಿ ದವರನು ಕಾಯ್ವ ನಮ್ಮ ಸೂರ್ಯಾನೇಕ ಪ್ರಭಾವ', 'ಸರಸಿಜಾಕ್ಷ ಸರಸದಿಂದ ಸರಸಿ ಜೋದ್ಭವಗೊಲಿದು ಬಂದ', 'ರಂಗನಾಥನ ನೋಡುವ ಬನ್ನಿ ಶ್ರೀರಂಗನ ದಿವ್ಯವಿಮಾನದಲ್ಲಿಹನ' 'ಬರುವುದು ಬುದ್ಧಿಯು ಬಲವು ಕೀರುತಿಯು', 'ಕಲಿಕಾಲಕೆ ಸಮಯುಗವಿಲ್ಲವಯ್ಯ', - ಇತ್ಯಾದಿ ಕೀರ್ತನೆಗಳಲ್ಲಿ ಹರಿಯ ರೂಪ ಗುಣಾದಿಗಳನ್ನು ಮನದುಂಬಿ ಬಣ್ಣಿಸಿರುವರು. 'ಕಂಗಳಿ ದ್ಯಾತಕೋ ಕಾವೇರಿ ರಂಗನ ನೋಡದ ' ಎನ್ನುವ ಶ್ರೀಪಾದರಾಜರ ಜನಪ್ರಿಯ ಕೀರ್ತನೆಯಲ್ಲಿ, ಶ್ರೀರಂಗ ಕ್ಷೇತ್ರದಲ್ಲಿರುವ ಚಂದ್ರಪುಷ್ಕರಿಣಿಯಲ್ಲಿ, ವಿರಜಾನದಿಯನ್ನು ಹೋಲುವ ಕಾವೇರಿ ನದಿಯಲ್ಲಿ ಮಿಂದು ಪರವಾಸುದೇವನ ವೈಕುಂಠವನ್ನು ನೆನಪಿಸುವ ಸ್ವಾಮಿಯ ಮೂರ್ತಿ ಹಾಗೂ ದೇವಾಲಯಗಳನ್ನು ಎಂದಿಗಾದರೂ ಒಮ್ಮೆ ಬಂದು ದರ್ಶಿಸಿ ಭಕ್ತಜನರು

ತಮ್ಮ ಕಣ್ಣುಗಳನ್ನು ಸಾರ್ಥಕಪಡಿಸಿಕೊಳ್ಳಬೇಕೆಂದು ಆಶಿಸಿರುವರು. ಇನ್ನೊಂದು ಕೀರ್ತನೆಯಲ್ಲಿ ತಮ್ಮ ಆರಾಧ್ಯದೈವವಾದ ಶ್ರೀರಂಗವಿಠಲನನ್ನು ಮುಡಿಯಿಂದ ಅಡಿಯವರೆಗೆ ಬಣ್ಣಿಸಿ, ಕೊನೆಗೆ 'ರಂಗವಿಠಲನ ಸರ್ವಾಂಗಕೆ ಶರಣು' - ಎಂದು ಮಣಿದಿರುವರು:

*ಶ್ರೀರಂಗವಿಠಲನ ಶ್ರೀ ಮಕುಟಕೆ ಶರಣು ||ಪ||*

*ಶಿರದಲೊಪ್ಪುವ ನೀಲ ಕುಂತಳಕೆ ಶರಣು*
*ಸಿರಿ ಸಹೋದರನರ್ಧದ ವಳಿಗೆ ಶರಣು ||ಅ.ಪ||*

*ಸೊಂಪು ನೋಟದ ಚೆಲುವ ಸೋಗೆಗಣ್ಣಿಗೆ ಶರಣು*
*ಸಂಪಿಗೆಯ ಕುಸುಮಸಮ ನಾಸಿಕಕೆ ಶರಣು*
*ಗುಂಪು ರತ್ನದ ಕರ್ಣಕುಂಡಲಗಳಿಗೆ ಶರಣು*
*ಇಂಪುದರ್ಪಣ ನಿಭ ಕಪೋಲಗಳಿಗೆ ಶರಣು ||೧||*

*ಕುಂದಕುಟ್ಮಲ ಪೋಲ್ವ ದಂತ ಪಂಕ್ತಿಗೆ ಶರಣು*
*ಅಂದವಾಗಿರುವ ಬಿಂಬೋಷ್ಠಕೆ ಶರಣು*
*ಚಂದ್ರಿಕಾನಿಭ ಮುದ್ದು ಮಂದಹಾಸಕೆ ಶರಣು*
*ನಂದಗೋಪನ ಮುದ್ದು ಕಂದನಿಗೆ ಶರಣು ||೨||*

*ಅಬ್ಜನಾಭನ ದಿವ್ಯ ಕಂಬುಕಂಠಕೆ ಶರಣು*
*ಅಬ್ಜಮುಖಿಯಿರುವ ವಕ್ಷಸ್ಥಳಕೆ ಶರಣು*
*ಕುಬ್ಜೆಯನು ಡೊಂಕ ತಿದ್ದಿದ ಭುಜಗಳಿಗೆ ಶರಣು*
*ಅಬ್ಜಜಾಸನನ ಪೆತ್ತ ನಾಭಿಗೆ ಶರಣು ||೩||*

*ರನ್ನಗಂಟೆಗಳಿರುವ ನಿನ್ನ ಕಟಿಗೆ ಶರಣು*
*ಪೊನ್ನ ಕದಳೀ ಪೋಲ್ವ ತೊಡೆಗಳಿಗೆ ಶರಣು*
*ಪುನ್ನಾಗಕರಗೆತ್ತ ದ್ವಯ ನಿತಂಬಕೆ ಶರಣು*
*ಚೆನ್ನಾಗಿ ಕುಣಿವ ಸಮಜಾನುವಿಗೆ ಶರಣು ||೪||*

*ಮಂಗಳ ವೈಭೋಗಂಗಳ ಅಂಘ್ರಿದ್ವಯಕೆ ಶರಣು*
*ತುಂಗ ಕುಚಗಳ ಪಿಡಿದ ಕರಗಳಿಗೆ ಶರಣು*
*ಪೊಂಗೊಳಲೂದುವಾ ಅಂಗುಲಿಗಳಿಗೆ ಶರಣು*
*ರಂಗವಿಠಲನ ಸರ್ವಾಂಗಕೆ ಶರಣು ||೫||*

- ರಂಗವಿಠಲನ ಚೆಲುವು, ವಿಶಿಷ್ಟ ರೂಪ - ಗುಣಗಳ ಶಕ್ತಿ, ಮಹಿಮಾದಿಗಳನ್ನು ಕಂಡು ಭಕ್ತನೊಬ್ಬನ ಮೆಚ್ಚುಗೆ ಸಂತಸ ವಿಸ್ಮಯಾದಿಗಳು ಇಂತಹ ಕೃತಿಗಳಲ್ಲಿ ಹೊರಹೊಮ್ಮಿವೆ.

**ದ್ವೈತತತ್ತ್ವ ಪ್ರತಿಪಾದನೆ:**

ಶ್ರೀಪಾದರಾಜರ ಕೃತಿಗಳಲ್ಲಿ ಭಾವಾನುಭವಗಳ ರಸಾಸ್ವಾದನೆಯ ಸೊಗಸಿನೊಂದಿಗೆ ದ್ವೈತ ಸಿದ್ಧಾಂತ ತತ್ತ್ವಗಳ ಪ್ರತಿಪಾದನೆಯೂ ಸಾಕಷ್ಟಿದೆ. ಹರಿದಾಸರ ಮೂಲ ಉದ್ದೇಶವೇ ಕನ್ನಡ ಭಾಷೆಯಲ್ಲಿ ದ್ವೈತ ಸಿದ್ಧಾಂತದ ಪ್ರಸಾರ, ಪ್ರಚಾರ, ಹರಿ ಸರ್ವೋತ್ತಮತ್ವ,

ತಾರತಮ್ಯ, ಪಂಚಭೇದ, ಗುರುಸ್ತುತಿ, ಮಾಯಾವಾದ ಖಂಡನೆ - ಇತ್ಯಾದಿ ತತ್ತ್ವವಿಚಾರಗಳು ಅವರ ಕೀರ್ತನೆಗಳಲ್ಲಿ ಹಾಸು ಹೊಕ್ಕಾಗಿವೆ. ತತ್ತ್ವ ಪ್ರತಿಪಾದನೆ ಮಾಡುವಲ್ಲಿ ಶ್ರೀಪಾದರಾಜರು ಪುರಾಣಗಳ ಪಾತ್ರ, ಕತೆ, ಸನ್ನಿವೇಶ, ಸಂದರ್ಭಗಳನ್ನು ದೃಷ್ಟಾಂತವಾಗಿ ಬಳಸಿಕೊಂಡು ಹೇಳಿರುವುದರಿಂದ ಅವು ಕೇಳಿದ ಕೂಡಲೇ ಜನಸಾಮಾನ್ಯರ ಗ್ರಹಿಕೆಗೆ ದಕ್ಕುತ್ತವೆ. ಕಾರಣ, ಪುರಾಣಗಳ ಅಲ್ಪ ಸ್ವಲ್ಪ ಪರಿಚಯವಾದರೂ ಇಲ್ಲದ ಭಾರತೀಯರೇ ಇಲ್ಲವೆಂದರೂ ಸಲ್ಲುತ್ತದೆ.

*ಬಿಡಿ ಬಿಡಿ ಸಂದೇಹವನು ಪೊಡವಿ ಮನುಜರೆಲ್ಲ*
*ಒಡೆಯನೊಬ್ಬನೆ ಜಗಕೆ ರಂಗವಿಠಲ*

- ಎನ್ನುವ ಕೀರ್ತನೆಯಲ್ಲಿ ಹರಿಸರ್ವೋತ್ತಮನೆಂಬ ತತ್ತ್ವವನ್ನು ಪ್ರತಿಪಾದಿಸಲು ಭಾಗವತದಲ್ಲಿ ಬರುವ ಭೃಗುಮಹರ್ಷಿಯ ಕತೆಯನ್ನು ಅತ್ಯಂತ ಸರಳವಾಗಿ ಹೇಳಿರುವರು. ಒಮ್ಮೆ ದೇವತೆಗಳಲ್ಲಿ ತ್ರಿಮೂರ್ತಿಗಳ ಪೈಕಿ ಯಾರು ಶ್ರೇಷ್ಠರು ಎನ್ನುವ ಬಗ್ಗೆ ವಾದ ವಿವಾದಗಳಾಗಿ, ಅದನ್ನು ನಿರ್ಧರಿಸಿ ಹೇಳುವ ಕೆಲಸವನ್ನು ಭೃಗುಮಹರ್ಷಿಗಳಿಗೆ ಒಪ್ಪಿಸುವರು. ಭೃಗು ಮಹರ್ಷಿಗಳು ಮೊದಲು ಬ್ರಹ್ಮನ ಬಳಿಗೆ ಹೋಗಿ ಅವನನ್ನು ವಂದಿಸದೆ ಅಸಡ್ಡೆ ಮಾಡಲು ಬ್ರಹ್ಮನಿಗೆ ಕೋಪ ಬಂತು. ಅವರು ಕೂಡಲೇ ಅಲ್ಲಿಂದ ಕೈಲಾಸಕ್ಕೆ, ಈಶ್ವರನ ಬಳಿಗೆ ಹೋದರು. ಈಶ್ವರನು ಋಷಿಗಳೊಡನೆ ಅತಿ ಸಲಿಗೆಯಿಂದ ವರ್ತಿಸಿದಾಗ ಋಷಿಗಳಿಗೇ ಸಿಟ್ಟು ಬಂತು. ಅದನ್ನು ಕಂಡ ಶಂಕರನಿಗೂ ತಾಳ್ಮೆ ತಪ್ಪಿತು. ಬ್ರಹ್ಮ ಈಶ್ವರರಿಬ್ಬರೂ ಶ್ರೇಷ್ಠರಲ್ಲವೆಂದು ನಿರ್ಧರಿಸಿ ವೈಕುಂಠಕ್ಕೆ ಬಂದರು. ಅಲ್ಲಿ ಮಹರ್ಷಿಗಳು ಲಕ್ಷ್ಮೀ ಸಮೇತನಾಗಿದ್ದ ವಿಷ್ಣುವಿನ ಎದೆಗೆ ಒದೆಯಲು, ವಿಷ್ಣು ಕೋಪಗೊಳ್ಳದೆ 'ನೋವಾಯಿತೆ'? ಎಂದು ಕೇಳಿ ಅವರ ಪಾದಮುಟ್ಟಿ ಪೂಜಿಸಿದನಂತೆ. ವಿಷ್ಣುವಿನ ಈ ನಡವಳಿಕೆಯನ್ನು ಮೆಚ್ಚಿದ ಮಹರ್ಷಿಗಳು ಅವನೇ ಪರತತ್ತ್ವ, ಸರ್ವೋತ್ತಮ, ಶ್ರೇಷ್ಠನೆಂದು ತೀರ್ಪಿತ್ತರಂತೆ. ಈ ಕತೆಯನ್ನು ವಿವರವಾಗಿ ಪ್ರಸ್ತಾಪಿಸಿರುವುದರಲ್ಲದೆ ಸಮುದ್ರ ಮಥನ ಕಾಲದಲ್ಲಿ ಅವತರಿಸಿ ಬಂದ ಲಕ್ಷ್ಮೀ ಶ್ರೀಹರಿಯೇ ಶ್ರೇಷ್ಠನೆಂದು, ಉಳಿದ ದೇವಾನುದೇವತೆಗಳನ್ನೆಲ್ಲ ಪಕ್ಕಕ್ಕೆ ಸರಿಸಿ ಅವನನ್ನೇ ವರಿಸಿದ್ದು; ಶ್ರೀಹರಿ ನಕ್ರನ ಬಾಯಿಂದ ಗಜೇಂದ್ರನನ್ನು ರಕ್ಷಿಸಿದ್ದು; ರಾಜಸೂಯ ಯಾಗದ ಕಾಲದಲ್ಲಿ ಕೃಷ್ಣನೇ ಅಗ್ರ ಪೂಜೆಗೆ ಅರ್ಹನೆಂದು ಭೀಷ್ಮರು ನುಡಿದದ್ದು - ಈ ಎಲ್ಲ ಪ್ರಸಂಗಗಳನ್ನೂ ಪ್ರಸ್ತಾಪಿಸಿ, ಶ್ರೀಹರಿಯ ಪಾದಸ್ಪರ್ಶದಿಂದ ಗಂಗೆ ಪಾವನಳಾದಳೆಂದೂ ಶಿವನು ಇಂತಹ ಶ್ರೀಹರಿಯ ದಾಸಾನುದಾಸನಾಗಿರುವನೆಂದೂ ಹೇಳುವ ಮೂಲಕ ಹರಿಯೇ ಸರ್ವೋತ್ತಮನೆಂದು ಸಾಧಿಸಿ ತೋರಿಸಿರುವರು. ಜನಸಾಮಾನ್ಯರ ಕತೆಹೇಳುವ ಕುತೂಹಲವನ್ನು ತಣಿಸುವ ತಂತ್ರಗಾರಿಕೆಯಿಂದ ತಮ್ಮ ಉದ್ದಿಶ್ಯ ಪರಿಣಾಮವನ್ನು ಇಲ್ಲಿ ಸಾಧಿಸಿರುವರು.

*ಹರಿಹರರು ಸರಿಯೆಂಬ ಮರುಳು ಜನರು*
*ಹರಿಹರರ ಚರಿತೆಯನು ತಿಳಿದು ಭಜಿಸುವುದು*

- ಎನ್ನುವ, ಹನ್ನೊಂದು ನುಡಿಗಳ ಸುದೀರ್ಘ ಕೀರ್ತನೆಯಲ್ಲಿಯೂ ಪೂರ್ವಕತೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಳಸಿರುವರು. ಕೃತಯುಗದಲ್ಲೊಮ್ಮೆ ದೇವತೆಗಳ ನಡುವೆ ಹರಿಹರರಿಬ್ಬರಲ್ಲಿ ಯಾರು ಅಧಿಕರು? ಎಂಬ ಪ್ರಶ್ನೆ ಬಂದಾಗ, ಹರಿಹರರಿಬ್ಬರೂ ತಮ್ಮ ಬಿಲ್ಲುಗಳನ್ನೆತ್ತಿಕೊಂಡು ಯುದ್ಧ ಮಾಡಿ ತಮ್ಮ ಸಾಮರ್ಥ್ಯವನ್ನು ಪ್ರಕಟಿಸಬೇಕೆಂದು ತೀರ್ಮಾನವಾಯಿತು. ಅಂತೆಯೇ ವಿಷ್ಣು ತನ್ನ ಶಾರ್ಙ್ಗವನ್ನು ಹಿಡಿದು ಯುದ್ಧ ಸನ್ನದ್ಧನಾದ. ಶಿವನಿಗೆ ತನ್ನ ಪಿನಾಕವನ್ನು ಎತ್ತಲೂ ಆಗದೆ ಅವನು ಸುಮ್ಮನೆ ನಿಂತುಬಿಟ್ಟನು. ಆಗ ಮುಖ್ಯ ಪ್ರೇರಕನಾದ ಶ್ರೀಹರಿಯಿಂದ ಪ್ರೇರಣೆ ಬಾರದೆ ತಟಸ್ಥನಾದ ಶಿವ ಸೋತನೆಂದೂ ಶ್ರೀಹರಿಯೇ ಅಧಿಕನೆಂದೂ ದೇವತೆಗಳು ಒಪ್ಪಿಕೊಂಡರು. ಶ್ರೀಪಾದರಾಜರು ಇಲ್ಲಿ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಉಕ್ತವಾಗಿರುವ ಕತೆಯನ್ನೆತ್ತಿ ಬಳಸಿಕೊಂಡಿರುವರು.[1] ಅಂತೆಯೇ ಈಶ್ವರ ಭಸ್ಮಾಸುರನಿಗೆ ವರವಿತ್ತು. ಅದಕ್ಕೆ ತಾನೇ ಬಲಿಯಾಗುವ ಸಂದರ್ಭ ಬಂದಾಗ ಶ್ರೀ ಹರಿ ಮೋಹಿನೀ ರೂಪ ತಾಳಿ, ಭಸ್ಮಾಸುರನನ್ನಾಕರ್ಷಿಸಿ, ಉಪಾಯದಿಂದ ಅಸುರ ಪಡೆದಿದ್ದ ವರಕ್ಕೆ ಅವನೇ ಬಲಿಯಾಗುವಂತೆ ಮಾಡಿ ಈಶ್ವರನನ್ನು ರಕ್ಷಿಸಿದ ಕತೆ; ಅಂಬರೀಶನ ಏಕಾದಶೀ ವ್ರತಭಂಗ ಮಾಡಲು ಪ್ರಯತ್ನಿಸಿದ ದೂರ್ವಾಸರನ್ನು ಚಕ್ರದಿಂದ ನಿಗ್ರಹಿಸಿ, ಅವರು ಬಂದು ಅಂಬರೀಶನನ್ನೇ ಮರೆಹೋಗುವಂತೆ ಮಾಡಿದ ಕತೆ; ಉತ್ತರೆಯ ಗರ್ಭದಲ್ಲಿದ್ದ ಭ್ರೂಣದ ನಾಶಕ್ಕೆಂದು ಅಶ್ವತ್ಥಾಮನು ನಾರಾಯಣಾಸ್ತ್ರವನ್ನು ಬಿಟ್ಟಾಗ ಕೃಷ್ಣ ಆ ಅಸ್ತ್ರವನ್ನು ನಿಗ್ರಹಿಸಿ ಪಾಂಡವರ ವಂಶದ ಕುಡಿಯನ್ನು ರಕ್ಷಿಸಿದ

ಮಹಾಭಾರತದಲ್ಲಿಯ ಕತೆ; ಒಮ್ಮೆ ಹರನು ಹರಿಯ ಮೋಹಿನೀ ರೂಪವನ್ನು ನೋಡಲು ಬಯಸಿ, ಕಂಡಾಗ ಅರಿವು ತಪ್ಪಿ ಕಾಮಾತುರನಾಗಿ ಆಕೆಯನ್ನು ಹಿಡಿಯಲು ಹೋದಾಗ ಮೋಹಿನಿಯಾಗಿದ್ದ ವಿಷ್ಣು ಸ್ವಸ್ವರೂಪದಲ್ಲಿ ಪ್ರಕಟಗೊಂಡ ಕತೆ ಇತ್ಯಾದಿಗಳನ್ನು ಹೇಳುವ ಮೂಲಕ ಕಹರಿ ಸರ್ವೋತ್ತಮತ್ವವನ್ನು ಸಾರಿದ್ದಾರೆ. ಗೋವರ್ಧನೋ ದ್ಧರಣ, ಅಹಲ್ಯಾ ಶಾಪವಿಮೋಚನೆ, ಕುಚೇಲೋಪಾಖ್ಯಾನ, ಪಾರಿಜಾತಾಪಹರಣ, ಕಾಳಿಂಗಮರ್ದನ- ಇತ್ಯಾದಿ ಭಾಗವತ ಪುರಾಣದ ಕತೆಗಳನ್ನು, ಧ್ರುವ, ವಿಭೀಷಣ, ಶಕಟಾಸುರ, ಅಹಲ್ಯೆ, ಬಲಿ, ಪ್ರಹ್ಲಾದ, ಅಜಾಮಿಳ, ಮುರ, ಅಕ್ರೂರ, ಕಂಸ, ಚಾಣೂರರೇ ಮೊದಲಾದ ಪುರಾಣ ಪಾತ್ರಗಳನ್ನೂ ಧಾರಾಳವಾಗಿ ಮಧ್ವಮತ ತತ್ತ್ವ ಪ್ರಸಾರದ ಸಶಕ್ತ ಮಾಧ್ಯಮಗಳಾಗಿ ಬಳಸಿ ಕೊಂಡಿರುವರು. ಅಜಾಮಿಳ, ದ್ರೌಪದಿಯಂಥ ಪಾತ್ರಗಳು ಶ್ರೀಹರಿ ಕರುಣಾಮಯಿ, ಭಕ್ತ ವತ್ಸಲ ಎಂಬುದನ್ನು ದೃಢೀಕರಿಸಿದರೆ ಶಕಟಾಸುರ ಪೂತನಿ ಕೀಚಕಾದಿ ಪಾತ್ರಗಳು ಶ್ರೀಹರಿ ದುಷ್ಟ ಶಿಕ್ಷಕ-ಶೀಷ್ಟರಕ್ಷಕನೆಂಬುದಕ್ಕೆ ಪ್ರಮಾಣವಾಗಿ ನಿಲ್ಲುತ್ತವೆ. ಮುಂದಿನ ಹರಿದಾಸರಲ್ಲಿ ಪುರಾಣಗಳ ಈ ರೀತಿಯ ಬಳಕೆ ಒಂದು ಸಂಪ್ರದಾಯವಾಗಿಯೇ ಪರಿಣಮಿಸಿರುವುದು ಗಮನಾರ್ಹ ಸಂಗತಿ.

ಮಾಧ್ವ ಸಂಪ್ರದಾಯದ ಪ್ರಕಾರ ಈಶ್ವರ ಮನೋಭಿಮಾನಿ ದೇವತೆಯೆನ್ನಿಸಿಕೊಂಡು ರುದ್ರನಾಮದಿಂದ ಹರಿಯ ಮೊಮ್ಮಗನೆನಿಸಿಕೊಂಡಿರುವನು. ತಮ್ಮ ಒಂದು ಕೀರ್ತನೆಯಲ್ಲಿ 'ವೃಷಭನೇರಿದ ವಿಷಧರನ್ಯಾರೆ ಪೇಳಮ್ಮಯ್ಯ'- ಎಂದು ಒಬ್ಬ ಸಖಿ ತನ್ನ ಗೆಳತಿಯನ್ನು ಕೇಳಲು ಆಕೆ 'ಹಸುಳೆ ಪಾರ್ವತಿಯ ತಪಸಿಗೆ ಮೆಚ್ಚಿದ ಜಟಾಮಂಡಲಧಾರಿ ಕಣಮ್ಮ'-ಎಂದುತ್ತರ ಕೊಡುವ ಹಾಗೆ ಸಂಭಾಷಣಾತಂತ್ರವನ್ನನುಸರಿಸಿದ್ದಾರೆ ಶ್ರೀಪಾದರಾಜರು ಕೈಲಾಸದ ಒಡೆಯನಾದರೂ ಸ್ಮಶಾನವಾಸಿ; ಸಾವಿರ ನಾಲಿಗೆಯ ಆದಿಶೇಷ ಅವನಿಗೆ ಆಭರಣ; ದಾಕ್ಷಾಯಣಿಯ ಪತಿಯಾದ ಇವನು ಸಮುದ್ರಮಥನ ಕಾಲದಲ್ಲಿ ಹುಟ್ಟಿದ ವಿಷವನ್ನು ಕುಡಿದು ವಿಷಕಂಟನಾದವನು - ಇತ್ಯಾದಿಯಾಗಿ ಶಿವನ ಲೀಲೆಗಳನ್ನು ಸೊಗಸಾಗಿ ಬಣ್ಣಿಸಿರುವರು. ಶಿವ ಹರಿಯ ಮೋಹಿನೀ ರೂಪವನ್ನು ನೋಡ ಬಯಸಿದಾಗ ಹರಿ ಒಪ್ಪಿ ಹದಿನಾರು ವರ್ಷದ ಬಾಲೆಯಾಗಿ 'ಚರಣನಖಾಗ್ರದಿ ಧರಣೀ ಬರೆಯುತ್ತ ನಿಂತಿರಲು', ಶಿವ ಆ ಲಾವಣ್ಯವತಿಯ 'ಸೆರಗಪಿಡಿಯಲು' ಬಂದಾಗ ಕೈಯಲ್ಲಿ ಶಂಖ ಗದೆ ಚಕ್ರಗಳನ್ನು ನೋಡಿ, ಹರಿಯೆಂದರಿತು ಹರ ನಾಚಿನಿಂತನಂತೆ!- ಹೀಗೆ ಒಂದು ಸೊಗಸಾದ ಚಿತ್ರವನ್ನು ಕಟ್ಟಿಕೊಡುತ್ತಾರೆ, ಶ್ರೀಪಾದರಾಜರು. ಕೊನೆಯಲ್ಲಿ -

*ಮಂಗಳಾಂಗನೆ ಮಾರಜನಕ ನಾ ಮಾಡಿದ ತಪ್ಪು*
*ಹಿಂಗದೆ ಕ್ಷಮಿಸೊ ಯದುಕುಲ ತಿಲಕ ವಕ್ಷದಲೊಪ್ಪುವ ನಿ*
*ನ್ನಂಗನೆ ಅರಿಯಳು ನಖಮಹಿಮಾಂಕ ಹೀಗೆನುತಲಿ ತವಕ*
*ರಂಗ ವಿಠಲನ ಪದಂಗಳ ಪಿಡಿದು ಸಾ*
*ಷ್ಟಾಂಗವೆರಗಿ ಕೈಲಾಸಕೆ ನಡೆದ*

- ಎಂದು ಕೀರ್ತನೆಗೆ ಒಂದು ನಾಟಕೀಯ ಮುಕ್ತಾಯವನ್ನು ತಂದಿರುವುದಲ್ಲದೆ ಹರಿ ಸರ್ವೋತ್ತಮತ್ವವನ್ನೂ ಸಾಧಿಸಿದ್ದಾರೆ.

ಶ್ರೀಪಾದರಾಜರ 'ಮಧ್ವನಾಮ' ಆಚಾರ್ಯ ಮಧ್ವರನ್ನು ಕುರಿತ ಕೀರ್ತನೆ. ಹರಿದಸ ಸಾಹಿತ್ಯದಲ್ಲಿ ತುಂಬ ಪ್ರಸಿದ್ಧವಾದ ಕೀರ್ತನೆಯೂ ಹೌದು. ಮಾಧ್ವಮತದ ಪ್ರಮುಖ ನಂಬಿಕೆಗಳಲ್ಲಿ ಒಂದಾದ ಆಚಾರ್ಯಮಧ್ವರ ಹನುಮ, ಭೀಮ, ಮಧ್ವ - ಈ ಅವತಾರತ್ರಯವನ್ನು ಚಿತ್ರಿಸುತ್ತದೆ. ಮಧ್ವಾಚಾರ್ಯರು ವಾಯುವಿನ ಅವತಾರ, ತ್ರೇತಾಯುಗದಲ್ಲಿ ಹನುಮಂತನಾಗಿ, ದ್ವಾಪರಯುಗದಲ್ಲಿ ಭೀಮಸೇನನಾಗಿ ಹಾಗೂ ಕಲಿಯುಗದಲ್ಲಿ ಮಧ್ವಾಚಾರ್ಯರಾಗಿ ಅವತಾರವೆತ್ತಿ ಬಂದರೆಂಬುದು ಮಾಧ್ವರ ನಂಬಿಕೆ.

*ಜಯ ಜಯ ಜಗತ್ರಾಣ ಜಗದೊಳಗೆ ಸುತ್ರಾಣ*
*ಅಖಿಳ ಗುಣ ಸದ್ಧಾಮ ಮಧ್ವನಾಮ ||ಪ||*

………………

ಆವವನು ದೇಹದೊಳಗಿರಲು ಹರಿ ನೆಲಸಿಹನು
ಅವವನು ತೊಲಗೆ ಹರಿ ತಾ ತೊಲಗುವ
ಆವವನು ದೇಹದಾ ಒಳಹೊರಗೆ ನಿಯಾಮಕನು
ಆ ವಾಯು ನಮ್ಮ ಕುಲಗುರುರಾಯನು
……………. ॥೨॥

ತ್ರೇತೆಯಲಿ ರಘುಪತಿಯ ಸೇವೆ ಮಾಡುವೆನೆಂದು
ವಾತಸುತ ಹನುಂತನೆಂದೆನಿಸಿದ
ಪೋತಭಾವದಿ ತರಣಿ ಬಿಂಬಕ್ಕೆ ಲಂಘಿಸಿದ
ಈತಗೆಣೆ ಯಾರು ಮೂಲೋಕದೊಳಗೆ

……………………. ॥೫॥

ಮುಖದಲ್ಲಿ ಕಿಂಚಿದಪಶಬ್ದ ಇವಗಿಲ್ಲೆಂದು
ಮುಖ್ಯಪ್ರಾಣನನು ರಾಮನನುಕರಿಸಿದ ॥೭॥

………………..

ಆ ಮಾರುತನೆ ಭೀಮನೆನಿಸಿ ದ್ವಾಪರದಲ್ಲಿ
ಸೋಮಕುಲದಲಿ ಜನಿಸಿ ಪಾರ್ಥನೊಡನೆ
ಭೀಮವಿಕ್ರಮ ರಕ್ಕಸರ ಮುರಿದೊಟ್ಟಿದ
ಆ ಮಹಿಮ ನಮ್ಮ ಕುಲಗುರುರಾಯನು ॥೧೨॥

ಕರದಿಂದ ಶಿಶುಭಾವನಾದ ಭೀಮನ ಬಿಡಲು
ಗಿರಿವಡದು ಶತಶೃಂಗವೆಂದೆನಿಸಿತು
ಹರಿಗಳ ಹರಿಗಳಿಂ ಕರಿಗಳ ಕರಿಗಳಿಂ
ಅರೆವ ವೀರನಿಗೆ ನರ ಸುರರು ಸರಿಯೇ ॥೧೩॥

…………….

ದಾನವರು ಕಲಿಯುಗದೊಳವತರಿಸಿ ವಿಬುಧರೊಳು
ವೇನನ ಮತವನರುಹಲದನರಿತು
ಜ್ಞಾನಿ ತಾ ಪವಮಾನ ಭೂತಳದೊಳವತರಿಸಿ
ಮಾನನಿಧಿ ಮಧ್ವಾಖ್ಯನೆಂದೆನಿಸಿದ

…………………. ॥೨೨॥

ಬದರಿಕಾಶ್ರಮಕೆ ಪುನರಪಿಯೈದಿ ವ್ಯಾಸಮುನಿ
ಪದಕೆರಗಿ ಅಖಿಳ ವೇದಾರ್ಥಗಳನು

*ಪದುಮನಾಭನ ಮುಖದಿ ತಿಳಿದು ಬ್ರಹ್ಮತ್ವ*
*ಯೈದಿದ ಮಧ್ವಮುನಿರಾಯಗಭಿವಂದಿಪೆ ॥೨೫॥*

ಆಚಾರ್ಯರ ಮೂರು ಅವತಾರಗಳ ಹಿರಿಮೆಯನ್ನು ಶ್ರೀಪಾದರಾಜರು ಇಪ್ಪತ್ತೇಳು ನುಡಿಗಳಲ್ಲಿ ಶ್ರದ್ಧಾಭಕ್ತಿಗಳಿಂದ ಹಾಡಿದ್ದಾರೆ. ಶ್ರೀರಾಮರ ಸೇವೆಗೆಂದೆ ಹುಟ್ಟಿದ ಹನುಮಂತ ಹುಟ್ಟಿದ ಕೂಡಲೇ ಕೆಂಪಗೆ ಹೊಳೆಯುತ್ತಿದ್ದ ಸೂರ್ಯನನ್ನು ನೋಡಿ ಹಣ್ಣೆಂದು ಭಾವಿಸಿ, ಹಿಡಿದುಕೊಳ್ಳಲು ಆಕಾಶಕ್ಕೇ ಹಾರಿದ ಧೀರ. ತರ್ಕ ವ್ಯಾಕರಣಶಾಸ್ತ್ರ ಪಂಡಿತನಾದ ಅವನ ಬಾಯಲ್ಲಿ 'ಕಿಂಚಿದಪಶಬ್ದ'ವಿಲ್ಲ. ಅವನ ಸೇವೆಗೆ ಮೆಚ್ಚಿರಾಮ ಬ್ರಹ್ಮಪದವಿಯನ್ನೇ ಕೊಡುವೆನೆಂದರೂ ಒಲ್ಲದೆ, ಭಕ್ತಿಯೊಂದನ್ನೇ ಬೇಡಿದ ಹನುಮಂತನ ಸ್ವಾಮಿನಿಷ್ಠೆ, ಕಾರ್ಯತತ್ಪರತೆ, ಮಹೋನ್ನತ ದಾಸ್ಯಭಾವಗಳನ್ನು ಶ್ರೀಪಾದರಾಜರು ಎತ್ತಿಹಿಡಿದಿರುವರು.

ದ್ವಾಪರ ಯುಗದಲ್ಲಿ ಹನುಮ ಭೀಮನಾಗಿ ಅವತರಿಸಿದ, ಮಗು ಭೀಮನನ್ನೆತ್ತಿ ಹೆಬ್ಬಂಡೆಯೊಂದರ ಮೇಲೆ ಕೂಡಿಸಿದಾಗ ಆ ಬಂಡೆ ನೂರು ಚೂರಾಗಿ 'ಶತಶೃಂಗ'ವೆನ್ನಿಸಿಕೊಂಡಿತಂತೆ. ಭೀಮ ದುಯೋಧನ ಹಾಕಿಸಿದ ವಿಷವನ್ನುಂಡು ಅರಗಿಸಿಕೊಂಡದ್ದು, ಕೌರವ ಅರಗಿನ ಮನೆಯನ್ನು ಸುಟ್ಟ ಸಂದರ್ಭದಲ್ಲಿ ತನ್ನ ತಾಯಿ ಹಾಗೂ ಅಣ್ಣತಮ್ಮಂದಿರನ್ನು ಭುಜದಲ್ಲಿ ಹೊತ್ತು ನಡೆದು ರಕ್ಷಿಸಿದ್ದು - ಇವೇ ಮೊದಲಾದ ಭೀಮನ ಪರಾಕ್ರಮಗಳನ್ನು ಹಾಡಿ ಹೊಗಳಿರುವರು. ಬಕಹಿಡಿಂಬಕರನ್ನು ಕೊಂದು, ಮಾಗಧನನ್ನು ಸೀಳಿ, ಕಿಮ್ಮೀರಾದಿಗಳನ್ನು ಒರೆಸಿ ದ್ರೌಪದಿಯ ಇಂಗಿತವನ್ನರಿತು ಸೌಗಂಧಿಕಾ ಪುಷ್ಪವನ್ನು ತಂದಿತ್ತದ್ದು - ಈ ಎಲ್ಲ ಘಟನಾವಳಿಗಳನ್ನೂ ಒಂದರನಂಥರ ಒಂದರಂತೆ ಕಣ್ಣಿಗೆ ಕಟ್ಟುವ ಹಾಗೆ ಹೇಳುತ್ತಾ ಹೋಗುವರು. ಕೀಚಕನೇ ಮೊದಲಾದ ದುಷ್ಟಶಕ್ತಿಗಳನ್ನು ಸವರಿ ಕೌರವನ ತೊಡೆ ಮುರಿದು ದುಶ್ಯಾಸನನನ್ನು ಸದೆಬಡಿದು ಶಕ್ತಿಸಾಹಸಗಳನ್ನು ಮೆರೆದ ವೀರ, ಬಲಭೀಮಸೇನ ವಾಯುದೇವರ ದ್ವಿತೀಯಾವತಾರ.

[1]ಅ.IV. ಪು. ೪೪-೪೭, ಆನಂದತೀರ್ಥರು, ಶ್ರೀಮಧ್ವಮುನಿ ಸೇವಾಸಂಘ, ಉಡುಪಿ, ಶ್ರೀಅಗ್ರಹಾರ ನಾರಾಯಣ ತಂತ್ರಿಗಳು, ೧೯೩೯.

## ३. ಕೃತಿಗಳು (೫)

ಕಲಿಯುಗದಲ್ಲಿ ಮಾಯಾವಾದವನ್ನು ಖಂಡಿಸಿ 'ಸರ್ವೇಶ ಹರಿವಿಶ್ವಸತ್ಯ'ವೆಂದು ಸಾರಲು ವಾಯುದೇವರು 'ಮಾನನಿಧಿ ಮಧ್ವಾಖ್ಯ'ರಾಗಿ ಅವತರಿಸಿದರು. ವೇದವ್ಯಾಸರಿಂದ ಸಕಲ ಶಾಸ್ತ್ರರಹಸ್ಯಗಳನ್ನೂ ಅರಿತರು. ಜಗತ್ತು ಮಾಯೆಯೆಂಬ ವಾದ ಸರಿಯಲ್ಲವೆಂದು ಸಾರಿ ಜಗತ್ತು ಸತ್ಯವೆಂದು ಸ್ಥಾಪಿಸಿ ಆ ಜ್ಞಾನಸುಧೆಯನ್ನು ಲೋಕದ ಜೀವರಿಗೆ ಹಂಚಿ ಮತ್ತೆ ಬದರಿಕಾಶ್ರಮಕ್ಕೆ ತೆರಳಿ, ವ್ಯಾಸರ ಪಾದಗಳಿಗೆರಗಿ ಅಲ್ಲಿ ಅದೃಶ್ಯರಾದರೆಂದು, ಬ್ರಹ್ಮತ್ವ ಪಡೆದರೆಂದು ಪ್ರತೀತಿ.

*ಸರ್ವೇಶ ಹರಿ ವಿಶ್ವ ಎಲ್ಲ ತಾ ಪುಸಿಯೆಂಬ*
*ದುರ್ವಾದಿಗಳ ಮತವ ನೆರೆ ಖಂಡಿಸಿ*
*ಸರ್ವೇಶ ಹರಿ ವಿಶ್ವ ಸತ್ಯವೆಂದರುಹಿದ*

- ಅಂತಹ ಮಧ್ವಾಚಾರ್ಯರಿಗೆ

*ಜಯಜಯತು ದುರ್ವಾದಿಮತ ತಿಮಿರ ಮಾರ್ತಾಂಡ*
*ಜಯಜಯತು ವಾದಿಗಜ ಪಂಚಾನನ*
*ಜಯಜಯತು ಚಾರ್ವಾಕ ಗರ್ವಪರ್ವತ ಕುಲಿಶ*
*ಜಯ ಜಯ ಜಗನ್ನಾಥ ಮಧ್ವನಾಥ*

- ಎಂದು ಜಯಕಾರ ಹಾಕಿ ನಮಿಸಿದ್ದಾರೆ. ಶ್ರೀಪಾದರಾಜರು ಈ ಅವತಾರತ್ರಯ ಮಧ್ವನಾಮಕ್ಕೆ ಶ್ರೀಜಗನ್ನಾಥದಾಸರು ಮೂರು ನುಡಿಗಳಲ್ಲಿ 'ಫಲಸ್ತುತಿ'ಯನ್ನು ಹಾಡಿರುವರು. ಈ ಮಧ್ವನಾಮವನ್ನು ಬರೆದು ಓದಿ ಕೇಳಿದವರಿಗೆ ಅತಿಶಯವಾದ ಫಲಪ್ರಾಪ್ತಿಯಾಗುವುದು. ಗ್ರಹಣ ಕಾಲದಲ್ಲಿ ಗಂಗಾನದೀ ತಟದಲ್ಲಿ ಬ್ರಾಹ್ಮಣರಿಗೆ ಸಹಸ್ರಗೋದಾನ ಮಾಡಿದ ಫಲ, ಮಕ್ಕಳಿಲ್ಲದವರಿಗೆ ಮಕ್ಕಳಫಲಗಳುಂಟಾಗುವುವು. ಶತ್ರು ನಿಗ್ರಹವಾಗಿ ಸಮಸ್ತ ದಿಗ್ವಿಜಯ ದೊರಕುವುದು. ಮನದ ಸಂತಾಪ ಕಳೆದು ಸುಖವುಂಟಾಗುವುದು; ಅಷ್ಟೇ ಏಕೆ ಸಾಕ್ಷಾತ್ ಶ್ರೀಹರಿಯನ್ನೇ ತೋರಿಸಿ ಈ ಭವಜಲಧಿಯನ್ನು ದಾಟಿಸುವುದು - ಎಂದಿದ್ದಾರೆ, ಜಗನ್ನಾಥ ದಾಸರು.

*ಮರುದಂಶರ ಮತ ಪಿಡಿಯದೆ ಇಹಪರದಲ್ಲಿ ಸುಖವಿಲ್ಲ*
*ಸಾರ ಮಧ್ವಶಾಸ್ತ್ರವೋದದೆ ಗುರುತಾರತಮ್ಯ ಜ್ಞಾನ ಪುಟ್ಟದು*

- ಇಂತಹ ಮಾತುಗಳು ಶ್ರೀಪಾದರಾಜರ ಮತನಿಷ್ಠೆ, ತತ್ವಶ್ರದ್ಧೆಗಳನ್ನು ತೋರಿಸುತ್ತವೆ. ಶ್ರೀರಂಗವಿಠಲನನ್ನು ಭಜಿಸಿ ಮುಂದಿನ ಪರಮಗತಿಗೆ ಈಗಿಂದೀಗಲೇ ರಹದಾರಿ ಪಡೆದಿಟ್ಟು ಕೊಳ್ಳಬೇಕೆಂದು ಸೂಚಿಸಿರುವರು. ಇನ್ನೊಂದು ಕೀರ್ತನೆಯಲ್ಲಿ ಪರಮ ವೈಷ್ಣವನಾದವನು ಮಧ್ವಶಾಸ್ತ್ರವನ್ನೋದಿದವನೂ ಭಕುತಿರಸದಲ್ಲಿ ಮುಳುಗಿ ನಾರಾಯಣ ಕೃಷ್ಣ ಶರಣೆಂದು ಗುರುಹಿರಿಯರ ಮಾತು ಮನ್ನಿಸುವಂಥವನಾಗಬೇಕು;

*ಜಗತು ಸತ್ಯವೆಂದು ಪಂಚಭೇದವ ತಿಳಿದು*
*ಮಿಗೆ ರಾಗದ್ವೇಷಂಗಳನು ವರ್ಜಿಸಿ*
*ಭಗವಂತನ ಲೀಲೆ ಶ್ರವಣ ಕಥೆಗಳಿಂದ*
*ನಿಗಮಗೋಚರನೆಂದು*

-ಅರಿಯಬೇಕು; ಹರಿದಾಸರ ಸಂಗ ಸುಖವೆಂದು ತಿಳಿಯಬೇಕು ಬೂಟಾಟಿಕೆಯ ವೇಷಧಾರಿಗಳನ್ನು ವೈಷ್ಣವನೆನ್ನಬಾರದೆಂದು ಒತ್ತಿ ಹೇಳಿ ವ್ಯಕ್ತಿಯ ಅಂತರಂಗ ಶುದ್ಧಿಗೆ ಪ್ರಾಮುಖ್ಯವಿತ್ತಿರುವರು. ಒಟ್ಟಾರೆ ನುಡಿದಂತೆ ನಡೆಯಬೇಕು; ಭಕ್ತನ ನಡೆನುಡಿಗಳೊಂದಾಗಿರಬೇಕು- ಎಂಬುದೇ ಶ್ರೀಪಾದರಾಜರ ಆಶಯ.

ಶ್ರೀಪಾದರಾಜರ ಕೀರ್ತನೆಗಳಲ್ಲಿ ಎದ್ದು ಕಾಣುವ ಮತ್ತೊಂದು ಪ್ರಮುಖ ತಾತ್ವಿಕಾಂಶ, 'ಬಿಂಬೋಪಾಸನೆ'; ಶರೀರಾಂತರ್ಗತ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವಿಕೆ, 'ತನ್ನೊಳು ಪರಮ ತತ್ವ ತಿಳಿವುದೇ ಬಿಂಬೋಪಾಸನೆ'. ಇದು ಆ ಅಂತರಾತ್ಮನಿಗಾಗಿ ಅಂತರಂಗದಲ್ಲಿ ಮಾಡುವ ಪೂಜೆ, ಮಾನಸ ಪೂಜೆ. ಅಂತರಂಗದಲ್ಲಿ ಭಗವಂತನ ಕುರುಹು ಕಾಣಿಸಿದ ಬಳಿಕ ಭಕ್ತನ ಮಾನಸಿಕ ಸ್ಥಿತಿಯೇ ಬದಲಾಗಿ ಹೋಗುತ್ತದೆ:

*ಕಂಡುಕಂಡದ್ದೆಲ್ಲ ಕಮಲನಾಭನ ಮೂರ್ತಿ*
*ಉಂಡು ಉಟ್ಟದ್ದೆಲ್ಲ ವಿಷ್ಣು ಪೂಜೆ*
*ತಂಡ ತಂಡದ ವಾರ್ತೆ ವಾರಿಜಾಕ್ಷನ ಕೀರ್ತಿ*
*ಹಿಡಿದ ಹಟ ಪೂರೈಸಲದು ಹರಿ ಸಂಕಲ್ಪ*
*ನಡೆದಾಡುವುದೆಲ್ಲ ತೀರ್ಥಯಾತ್ರೆ*

ಆದುದರಿಂದ ತಮ್ಮ 'ಹೃದಯಾಬ್ಜಮಂಟಪದಲ್ಲಿ ಬಂದು ನೆಲೆನಿಂದಿರೋ' - ಎಂದು ಆ ರಂಗವಿಠಲನನ್ನು ಪ್ರಾರ್ಥಿಸಿರುವರು; 'ಅಂತರಂಗದಲ್ಲಿ ಸಂತತ ನೆನೆವಂತೆ ಚಿಂತನೆ ನಿಲಿಸೋ' - ಎಂದು ದೈನ್ಯದಿಂದ ಕೇಳಿಕೊಳ್ಳುವರು.

*ನಾ ನಿನಗೇನು ಬೇಡುವುದಿಲ್ಲ ಎನ್ನ*
*ಹೃದಯ ಕಮಲದೊಳು ನೆಲಸಿರು ಹರಿಯೇ*

- ಎಂಬುದೇ ಶ್ರೀಪಾದರಾಜರ ಅಂತರಂಗದ ಮೊರೆ. ಈ ಬಿಂಬೋಪಾಸನೆಯ ಮೂಲಕ ಸಾಧನೆ ಮಾಡಿ ಅಪರೋಕ್ಷಾನುಭೂತಿಯ, ದೈವಸಾಕ್ಷಾತ್ಕಾರದ ಸಿದ್ಧಿಪಡೆದವರು ಹರಿದಾಸರು.

**ದಶಾವತಾರ ಚಿತ್ರಣ:**

ಭಾಗವತದಲ್ಲಿ ಬರುವ ಹರಿಯ ಮತ್ಸ್ಯಕೂರ್ಮಾದಿ ದಶಾವತಾರಗಳ ಸ್ತುತಿಯೂ ಶ್ರೀಪಾದರಾಜರಲ್ಲಿ ಬರುತ್ತದೆ. ಭಗವಂತ ತನ್ನ ಲೀಲಾರ್ಥವಾಗಿ ಎತ್ತಿದನೆನ್ನಲಾಗಿರುವ ಸನತ್ಕುಮಾರಾದಿ ಇಪ್ಪತ್ತೊಂದು ಅವತಾರಗಳಲ್ಲಿ ಈ ಹತ್ತು ಅವತಾರಗಳು ಹೆಚ್ಚಿನ ಪ್ರಾಶಸ್ತ್ಯ ಪಡೆದಿವೆ. ಭಗವದ್ಗೀತೆಯಲ್ಲಿ ಭಗವಾನ್ ಕೃಷ್ಣ ಹೇಳಿರುವ -

*ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ*
*ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ*

- ಎನ್ನುವ ಮಾತುಗಳ ಪ್ರಕಾರ ಕೃಷ್ಣನ ಅವತಾರಗಳ ಅಗತ್ಯವನ್ನು ಫಲ ಪರಿಣಾಮಗಳನ್ನೂ ಗ್ರಹಿಸಬಹುದು. ಮಹಾವಿಷ್ಣುವಿನ ಪ್ರಸಿದ್ಧವಾದ ಹತ್ತು ಅವತಾರಗಳಲ್ಲಿ ಮೊದಲನೆಯದು 'ಮತ್ಸ್ಯಾವತಾರ'. ಸೋಮಕನೆಂಬ ರಾಕ್ಷಸ ವೇದಗಳನ್ನು ಕದ್ದು ಪ್ರಳಯ ಜಲದಲ್ಲಿ ಅಡಗಿದ್ದಾಗ ವಿಷ್ಣು ಮತ್ಸ್ಯರೂಪವನ್ನು ತಾಳಿ ವೇದಗಳನ್ನೆತ್ತಿ ತರುತ್ತಾನೆ. ಎರಡನೆಯದು ಕೂರ್ಮಾವತಾರ. ದೇವಾಸುರರು ಅಮೃತಕ್ಕಾಗಿ ಮಂದರ ಪರ್ವತವನ್ನು ಕಡಗೋಲಾಗಿ, ವಾಸುಕಿಯನ್ನು ಹಗ್ಗವಾಗಿ ಮಾಡಿಕೊಂಡು ಸಮುದ್ರವನ್ನು ಕಡೆಯುತ್ತಿದ್ದಾಗ ಪರ್ವತ ಭಾರದಿಂದಾಗಿ ಮುಳುಗಲಾರಂಭಿಸಿತು. ಆಗ ವಿಷ್ಣು ಕೂರ್ಮರೂಪಿಯಾಗಿ ಆ ಪರ್ವತವನ್ನು ಬೆನ್ನ ಮೇಲೆ ಹೊತ್ತು ನಿಲ್ಲುತ್ತಾನೆ. ಮೂರನೆಯದು ವರಾಹಾವತಾರ. ಉದ್ದೇಶ ಹಿರಣ್ಯಾಕ್ಷನ ಸಂಹಾರ, ಭೂಮಿಯ ಉದ್ಧಾರ. ಹಿರಣ್ಯಾಕ್ಷನೆಂಬ ರಾಕ್ಷಸ ಭೂಮಿಯನ್ನು ಚಾಪೆಯಂತೆ ಸುತ್ತಿಕೊಂಡು ಸಮುದ್ರ ಪ್ರವೇಶ ಮಾಡಲು ವಿಷ್ಣು ವರಾಹರೂಪಿಯಾಗಿ ತನ್ನ ಕೋರೆದಾಡೆಗಳಿಂದ ಭೂಮಿಯನ್ನೆತ್ತಿ ಹಿಂದಕ್ಕೆ ತರುತ್ತಾನೆ. ನಾಲ್ಕನೆಯದು ನರಸಿಂಹಾವತಾರ . ಅರ್ಧ ನರ, ಮತ್ತರ್ಧ ಸಿಂಹ; ಸಿಂಹ ಮುಖ ಮನುಷ್ಯನ ಮೈ. ಭಯಂಕರ ರಾಕ್ಷಸನಾದ ಹಿರಣ್ಯಕಶಿಪು ವಿಷ್ಣುಭಕ್ತನಾದ ತನ್ನ ಮಗ ಪ್ರಹ್ಲಾದನನ್ನು ಹಿಂಸಿಸುತ್ತಿದ್ದಾಗ ವಿಷ್ಣು ಕಂಬದಲ್ಲಿ ಮೂಡಿಬಂದು ಅವನನ್ನು ಸಂಹರಿಸುವನು. ಐದನೆಯದು ವಾಮನಾವತಾರ. ಕಶ್ಯಪ-ಅದಿತಿಯರ ಹನ್ನೆರಡು ಮಕ್ಕಳಲ್ಲಿ ಚಿಕ್ಕವನು ವಾಮನ. ಬಲ ಹಾಗೂ ಐಶ್ವರ್ಯ ಮದಗಳಿಂದ ಮೆರೆಯುತ್ತಿದದ ಬಲಿಚಕ್ರವರ್ತಿಯ ಸೊಕ್ಕನ್ನು ಅಡಗಿಸುವ ಸಲುವಾಗಿ ವಿಷ್ಣು ವಾಮನಾವತಾರಿಯಾಗಿ ಪ್ರಕಟಗೊಳ್ಳುವನು. ಯಜ್ಞ ಮಾಡುತ್ತಿದ್ದ ಬಲಿಯನ್ನು ವಾಮನ ಮೂರುಹೆಜ್ಜೆ ಭೂಮಿಯನ್ನು ದಾನವಾಗಿ ಬೇಡಿ, ಆಕಾಶ ಭೂಮಿಗಳನ್ನು ಎರಡು ಹೆಜ್ಜೆಗಳಲ್ಲಿ ಅಳೆದು, ಮೂರನೆಯ ಹೆಜ್ಜೆಯಿಡಲು ಜಾಗವನ್ನು ಕೇಳಿದಾಗ ಬಲಿಯು ಮೂರನೆಯ ಹೆಜ್ಜೆಯನ್ನು ತನ್ನ ತಲೆಯ ಮೇಲಿಡಲು ಪ್ರಾರ್ಥಿಸುವನು. ಅಂತೆಯೇ ಬಲಿಯ ತಲೆಯ ಮೇಲೆ ಹೆಜ್ಜೆಯಿರಿಸಿದ ವಾಮನ ಅವನನ್ನು ಪಾತಾಳಕ್ಕೆ ತುಳಿದು ಬಿಡುತ್ತಾನೆ. ಆರನೆಯದು ಪರಶುರಾಮಾವತಾರ. ಉನ್ಮತ್ತರಾಗಿದ್ದ ಕ್ಷತ್ರಿಯರ ಸೊಕ್ಕು ಮುರಿಯುವ ಉದ್ದೇಶದಿಂದ ವಿಷ್ಣು ಜಮದಗ್ನಿ ರೇಣುಕೆಯರ ಮಗನಾಗಿ ಜನಿಸಿ, ಗಂಡುಗೊಡಲಿಯನ್ನು ಹಿಡಿದು ಸಮಸ್ತಲೋಕವನ್ನು ಸುತ್ತುತ್ತಾ ವೇದಮಾರ್ಗವನ್ನು ಬಿಟ್ಟು ಲೋಕಕಂಟಕರಾಗಿದ್ದ ಕ್ಷತ್ರಿಯರನ್ನು ಕೊಲ್ಲುತ್ತಾ ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆ ಮಾಡಿದ. ಭೃಗುವಂಶಜನಾದ ಈ ಜಮದಗ್ನಿಗೆ ಭಾರ್ಗವನೆಂದೂ ಹೆಸರು. ಏಳನೆಯದು ಪ್ರಸಿದ್ಧವಾದ ರಾಮಾವತಾರ. ವಿಷ್ಣು ಸೂರ್ಯವಂಶದ ದಶರಥ-ಕೌಸಲ್ಯೆಯರ ಮಗನಾಗಿ ಜನಿಸಿ, ಸುಬಾಹು ಮಾರೀಚ ಖರದೂಷಣ ತ್ರಿಶಿರಸ್ಸು ಕುಂಭ ನಿಕುಂಭ ಕುಂಭಕರ್ಣ ರಾವಣಾದಿ ಅಸುರರನ್ನು ಕೊಲ್ಲುವ, ದುಷ್ಟ ಶಿಕ್ಷಣ ಕಾರ್ಯಕ್ಕಾಗಿಯೇ ಎತ್ತಿದ ಅವತಾರವಿದು. ಎಂಟನೆಯದು ಕೃಷ್ಣಾವತಾರ. ವಿಷ್ಣು ಯದುವಂಶದ

ವಸುದೇವ ದೇವಕಿಯರ ಎಂಟನೆಯ ಮಗನಾಗಿ ಜನಿಸುತ್ತಾನೆ. ಶಿಶುಪಾಲ ದಂತವಕ್ತ್ರ, ಕಂಸ ಪೂತನಿ ವೈಕ ಧೇನುಕ ಚಾಣೂರ ಮುಷ್ಟಿಕಾದಿ ದುಷ್ಟರಾಕ್ಷಸರ ಮರ್ದನಕ್ಕಾಗಿಯೇ ಎತ್ತಿದ ಅವತಾರ. ಒಂಬತ್ತನೆಯದು ಬುದ್ಧಾವತಾರ. ಕಲಿಯುಗದ ಆರಂಭಕಾಲದಲ್ಲಿ ರಾಕ್ಷಸರು ವೈದಿಕಧರ್ಮದಲ್ಲಿ ಹೆಚ್ಚಿನ ಶ್ರದ್ಧೆ ನಂಬಿಕೆಗಳನ್ನಿಟ್ಟು, ಮಯನಿರ್ಮಿತ ತ್ರಿಪುರಗಳಿಂದ ಲೋಕನಾಶನ ಕಾರ್ಯದಲ್ಲಿ ತೊಡಗಿದ್ದಾಗ, ಅವರೆಲ್ಲರಿಗೂ ಪಾಷಂಡ ಧರ್ಮವನ್ನು ಬೋಧಿಸಿ ದಾರಿ ತಪ್ಪಿಸುವ ಸಲುವಾಗಿ ಎತ್ತಿದ ಅವತಾರವಿದು. ಹತ್ತನೆಯದು ಕಲ್ಕ್ಯಾವತಾರ. ತಪಸ್ಸಿನಿಂದ ಶಿವನನ್ನು ಮೆಚ್ಚಿಸಿದ ವಿಷ್ಣು ಅವನಿಂದ ಪಡೆದ ಕುದುರೆಯನ್ನೇರಿ ಕತ್ತಿ ಹಾಗೂ ಗಿಳಿಗಳನ್ನು ಹಿಡಿದು, ಕೊಬ್ಬಿನಿಂದ ಮೆರೆಯುತ್ತಿದ್ದ ಕಲಿಯ ಹುಟ್ಟಡಗಿಸುವ ಸಲುವಾಗಿ ಎತ್ತಿದ ಅವತಾರ.

ಮುಂದಿನ ಹರಿದಾಸರಲ್ಲಿ ಈ ದಶಾವತಾರಗಳ ಚಿತ್ರಣ ಒಂದು ಸಂಪ್ರದಾಯವಾಗಿಯೇ ಬಂದಿರುವುದನ್ನು ಗಮನಿಸಬಹುದು. ಅಂತೆಯೇ ಮಗುವಿಗೆ ತೊಟ್ಟಿಲಿಡುವುದೇ ಮೊದಲಾದ ಸಂಪ್ರದಾಯಗಳನ್ನು ಕುರಿತ ಕೀರ್ತನೆಗಳಲ್ಲಿ ಹರಿಯ ದಶಾವತಾರ ಹಾಸುಹೊಕ್ಕಾಗಿ ಬಂದಿರುವುದೂ ಗಮನಾರ್ಹ.

ಶ್ರೀಪಾದರಾಜರು 'ಲಾಲಿ ಗೋವಿಂದ ಲಾಲಿ ಕೌಸಲ್ಯಬಾಲ ಶ್ರೀರಾಮ ಲಾಲಿ' ಎಂದು ಪ್ರಾರಂಭವಾಗುವ ತಮ್ಮ ಒಂದು ಕೀರ್ತನೆಯಲ್ಲಿ ಮುತ್ತೈದೆಯರೆಲ್ಲ ಸಡಗರ ಸಂಭ್ರಮಗಳಿಂದ ಉಯ್ಯಾಲೆ ರಚಿಸಿ ತೂಗಿದರೆಂದಿದ್ದಾರೆ. ಆ ಉಯ್ಯಾಲೆಯ ಕಲ್ಪನೆಯೇ ಭವ್ಯವಾಗಿದೆ.

*ಕನಕರತ್ನಗಳಲ್ಲಿ ಕಾಲ್ಗಳನೆ ಹೂಡಿ*
*ನಾಲ್ಕು ವೇದಗಳನ್ನು ಸರಪಣಿಯ ಮಾಡಿ*
*ಅನೇಕ ಭೂಮಂಡಲವ ಹಲಗೆಯನೆ ಮಾಡಿ*
*ಶ್ರೀಕಾಂತನುಯ್ಯಾಲೆಯನು ವಿರಚಿಸಿದರು.*

- ಶ್ರೀಕಾಂತನ ಆ ಉಯ್ಯಾಲೆಗೆ ಕನಕರತ್ನಗಳಿಂದ ಮಾಡಿದ ಕಾಲುಗಳು, ನಾಲ್ಕು ವೇದಗಳೇ ನಾಲ್ಕು ಸರಪಳಿಗಳು. ಅನೇಕ ಭೂಮಂಡಲಗಳನ್ನು ಸೇರಿಸಿ ಮಾಡಿದ ಹಲಗೆ-ಇಂತಹ ಐಸಿರಿಯ, ಆಶ್ಚರ್ಯಜನಕವಾಗಿ ನಿರ್ಮಿಸಿದ ಉಯ್ಯಾಲೆಯಲ್ಲಿ ಹರಿಯನ್ನು ಮಲಗಿಸಿ ತೂಗಿದ ವೈಖರಿ ಹೀಗಿದೆ:

*ಆಶ್ಚರ್ಯ ಜನಕವಾಗಿ ನಿರ್ಮಿಸಿದ ಪಚ್ಚೆಯ ತೊಟ್ಟಿಲಲ್ಲಿ*
*ಅಚ್ಚುತಾನಂತನಿರಲು ತೂಗಿದರು ಮತ್ಸ್ಯಾವತಾರ ಹರಿಯ ॥೧॥*

*ಧರ್ಮಸ್ಥಾಪಕನು ಎಂದು ನಿರವಧಿಕ ನಿರ್ಮಲಚರಿತ್ರನೆಂದು*
*ಮರ್ಮಕರ್ಮಗಳ ಪಾಡಿ ತೂಗಿದರು ಕೂರ್ಮಾವತಾರ ಹರಿಯ ॥೨॥*

*ಸರಸಿಜಾಕ್ಷಿಯರೆಲ್ಲರು ಜನವಶೀಕರ ದಿವ್ಯರೂಪನೆಂದು*
*ಪರಮಹರುಷದಲಿ ಪಾಡಿ ತೂಗಿದರು ವರಾಹಾವತಾರ ಹರಿಯ ॥೪॥*

*ಹರಿಕುಂಭಗಳ ಪೋಲುವ ಕುಚದಲ್ಲಿ ಹಾರಪದಕವು ಹೊಳೆಯಲು*
*ವರವರ್ಣಿನಿಯರು ಪಾಡಿ ತೂಗಿದರು ನರಸಿಂಹಾವತಾರ ಹರಿಯ ॥೫॥*

*ಭಾಮಾಮಣಿಯರೆಲ್ಲರು ಯದುವಂಶ ಸೋಮನಿವನೆಂದು ಪೊಗಳಿ*
*ನೇಮದಿಂದಲಿ ಪಾಡಿ ತೂಗಿದರು ವಾಮನಾವತಾರ ಹರಿಯ ॥೬॥*

*ಸಾಮಜವರದನೆಂದು ಅತುಳ ಭೃಗು ರಾಮಾವತಾರನೆಂದು*

*ಶ್ರೀಮದಾನಂದ ಹರಿಯ ತೂಗಿದರು ಪ್ರೇಮಾತಿರೇಕದಿಂದ ॥೭॥*

*ಕಾಮನಿಗೆ ಕಾಮನೆಂದು ಸುರಸಾರ್ವಭೌಮ ಗುಣಧಾಮನೆಂಧು*
*ವಾಮನೇತ್ರೆಯರು ಪಾಡಿ ತೂಗಿದರು ರಾಮಾವತಾರ ಹರಿಯ ॥೮॥*

*ಸೃಷ್ಟಿಯ ಕರ್ತನೆಂದು ಜಗದೊಳಗೆ ಶಿಷ್ಟ ಸಂತುಷ್ಟನೆಂಧು*
*ದೃಷ್ಟಾಂತ ರಹಿತನೆಂದು ತೂಗಿದರು ಕೃಷ್ಣಾವತಾರ ಹರಿಯ ॥೯॥*

*ವೃದ್ಧನಾರಿಯರೆಲ್ಲರು ಜಗದೊಳಗೆ ಪ್ರಸಿದ್ಧನಿವನೆಂದು ಪೊಗಳಿ*
*ಬದ್ಧಾನುರಾಗದಿಂದ ತೂಗಿದರು ಬೌದ್ಧಾವತಾರ ಹರಿಯ ॥೧೦॥*

*ಥಳಥಳಾತ್ಕಾರದಿಂದ ರಂಜಿಸುವ ಮಲಯಜಲೇಪದಿಂದ*
*ಜಲಗಂಧಿಯರು ಪಾಡಿ ತೂಗಿದರು ಕಲ್ಕ್ಯಾವತಾರ ಹರಿಯ ॥೧೧॥*

- ಹೀಗೆ ಪದ್ಮಿನಿ ಹಸ್ತಿನಿ ಚಿತ್ತಿನಿ ಶಂಕಿನಿಯರು, ಮತ್ತಗಜಗಾಮಿನಿಯು, ಲಿಕುಚಸ್ತನಿಯರು, ಪಲ್ಲವಾಧರೆಯರು ಎಲ್ಲರೂ ಒಟ್ಟಾಗಿ ಕಲ್ಯಾಣಿ, ಆನಂದ ಭೈರವಿ, ದೇವಗಾಂಧಾರ ರಾಗಗಳಿಂದ

*ನೀಲ ಘನಲೀಲ ಜೋಜೋ ಕರುಣಾಲ*
*ವಾಲ ಶ್ರೀಕೃಷ್ಣ ಜೋಜೋ*
*ಲೀಲಾವತಾರ ಜೋಜೋ ಪರಮಾತ್ಮ*
*ಬಾಲಗೋಪಾಲ ಜೋಜೋ*

- ಎಂದು ಮುಂತಾಗಿ ರಂಗವಿಠಲನಿಗೆ ಜೋಗುಳ ಹಾಡುತ್ತ ತೂಗಿದರಂತೆ! ಮತ್ಸ್ಯಾವತಾರದಿಂದ ಕಲ್ಕ್ಯಾವತಾರದವರೆಗಿನ ಹರಿಯ ದಶಾವತಾರಗಳ ನಿರೂಪಣೆ, ಸ್ತುತಿ ದಾಸರ ಉದ್ದೇಶವಾಗಿದ್ದರೂ ಈ ಭವ್ಯಕಲ್ಪನೆಯ ಹಿನ್ನೆಲೆಯಲ್ಲಿ ಹರಿಯ ದಶಾವತಾರ ನಿರೂಪಣೆಯ ಸೊಗಸು ಇನ್ನಷ್ಟು ಕಳೆಗಟ್ಟಿದೆ.

**ನೀತಿಬೋಧನೆ:**

ಹರಿದಾಸ ಸಾಹಿತ್ಯ ಕ್ಷೇತ್ರದಲ್ಲಿ ಮೊದಲಿಗರಾದ ಶ್ರೀಪಾದರಾಜರ ದೃಷ್ಟಿಯೆಲ್ಲ ಹರಿಭಕ್ತಿ ಸಾಧನೆಯ ಕಡೆಗೆ. ತಮ್ಮ ಆತ್ಮಶೋಧನೆಯಲ್ಲಿ ಅಂತರಂಗವನ್ನೇ ತೆರೆದಿಟ್ಟು, ಭಕ್ತಿಸಾಧನೆಯಲ್ಲಿ ಪರಸ್ಪರ ಮಾನವ ಸಂಬಂಧಗಳ ಸೂಕ್ಷ್ಮಾತಿ ಸೂಕ್ಷ್ಮ ಎಳೆಗಳನ್ನೂ ಶ್ರೀಹರಿಯೊಂದಿಗೆ ಕಲ್ಪಿಸಿಕೊಂಡ ಶ್ರೀಪಾದರಾಜರು ಸಾಮಾನ್ಯ ಜನರ ಕಷ್ಟಕೋಟಲೆಗಳಿಗೂ ಸ್ಪಂದಿಸಿದ್ದಾರೆ. ಬಡತನದ ಯಾತನೆ, ಜೊತೆಯವರ ನಿರ್ಲಕ್ಷ್ಯ, ತಿರುಪೆ ಎತ್ತುವ ಅನಿವಾರ್ಯತೆ, ಕಾಡುವ ಋಣದ ಭಾದೆ - ಎಲ್ಲವೂ ಅಮ್ನ ತಟ್ಟಿವೆ. ಸಮಾಜದಲ್ಲಿ ಒಂದು ಕಡೆ ಸುಖೋಪಭೋಗಗಳ ಸಮೃದ್ಧಿ ಮತ್ತೊಂದೆಡೆ ಕಿತ್ತು ತಿನ್ನುವ ಬಡತನ - ಎರಡನ್ನೂ ಕಂಡು ನೊಂದಿದ್ದಾರೆ. ಐಹಿಕ ಸುಖವೇ ಶಾಶ್ವತವೆಂದು ಭಾವಿಸಿದವರಿಗೆ 'ಅಕಟಕಟ ಸಂಸಾರವನು ನೆಚ್ಚಿ ಕೆಡಬ್ಯಾಡ, ವಿಕಟದಲಿ ಮಾನವರು ಕೆಟ್ಟರೆಲ್ಲರು ನಿಜ' ಎಂದು ಬುದ್ಧಿ ಮಾತು ಹೇಳಿ ಮಾರ್ಗದರ್ಶನ ಮಾಡಿರುವರು. ಈ ಹಿಂದೆ ಹಾಗೆ ಬದುಕಿದ ನರಕಾಸುರ, ಕಾರ್ತವೀರ್ಯಾರ್ಜುನ, ಕೌರವ, ನಹುಷಾದಿಗಳು ಏನಾದರು? ಎಂದು ಕೆಲವು ದೃಷ್ಟಾಂತಗಳ ಮೂಲಕ ಹೇಳಬೇಕಾದುದನ್ನು ಶಕ್ತಿಯುತವಾಗಿ ಹೇಳಿರುವರು:

*ಮುನ್ನ ನರಕಾಸುರನು ಬಡಿದು ಚಿಂತಾಮಣಿಯ*
*ತನ್ನ ಮನೆಯಲಿ ತಂದು ನಿಲ್ಲಿಸಿ ನೃಪರ*

*ಕನ್ನೆಯರ ಷೋಡಶ ಸಹಸ್ರವನೆ ತಂದಾತ*
*ಹೆಣ್ಣನೊಬ್ಬ ಳನೊಯ್ದುದಿಲ್ಲವೊ ನೋಡೊ* ॥

*ಸಾವಿರ ಕರ ಪಡೆದ ಕಾರ್ತವೀರ್ಯಾರ್ಜುನನು*
*ಭೂವಲಯದೊಳಗೊಬ್ಬನೆ ವೀರನೆನಿಸಿ*
*ರಾವಣನ ಸೆರೆಯಿಟ್ಟು ಕಾಮಧೇನುವ ಬಯಸಿ*
*ಸಾವಾಗ ಏನು ಕೊಂಡೊಯ್ದು ನೋಢೋ* ॥

*ಕೌರವನು ಧರೆಯೆಲ್ಲ ತನಗಾಗಬೇಕೆಂದು*
*ವೀರ ಪಾಂಡವರೊಡನೆ ಕದನ ಮಾಡಿ*
*ಮಾರಿಯವಶವೈದಿ ಹೋದಾಗ ತನ್ನೊಡನೆ*
*ಶ್ಯಾರೆ ಭೂಮಿಯ ಒಯ್ದುದಿಲ್ಲವು ನೋಡೋ*॥

- ಎಂದು ಮುಂತಾಗಿ ಪುರಾಣಪಾತ್ರಗಳನ್ನು ಅವರ ಸ್ಥಿತಿಗತಿಗಳನ್ನು ಉದಾಹರಿಸುವ ಮೂಲಕ ಜನಸಾಮಾನ್ಯನ ಹಣ ಅಂತಸ್ತು ಅಧಿಕಾರಗಳ ನಶ್ವರತೆಯನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ. ಅಂತೆಯೇ ಶಾಶ್ವತ ಸುಖವನ್ನು ಪಡೆದ ಧ್ರುವ ವಿಭೀಷಣ ಹನುಮಾದಿಗಳನ್ನು ಹೆಸರಿಸಿ ಅವರಂತೆ 'ರಂಗವಿಠಲರೇಯನ ನೆರೆ ನಂಬಿರೋ' ಎನ್ನುವರು.

ಈ ಸಂಸಾರಸುಖವನ್ನು ನೆಚ್ಚಿ ಕೆಡಬ್ಯಾಡಿ. ಕಾಳಬೆಳದಿಂಗಳು ಈ ಸಂಸಾರ ಕತ್ತಲೆ ಬೆಳದಿಂಗಳು. ಇಲ್ಲಿ ಸುಖದುಃಖಗಳೆರಡೂ ಇವೆ. ಜೀವನದಲ್ಲಿ ಸುಖದುಃಖಗಳ ಪಾತ್ರ ರಾತ್ರಿ ಹಗಲುಗಳಂತೆ, ಕತ್ತಲೆ ಬೆಳದಿಂಗಳುಗಳಂತೆ. ಇವು ಸತ್ಯಸಂಧರಾದ ಧರ್ಮರಾಯ, ಹರಿಶ್ಚಂದ್ರರನ್ನೇ ಬಿಟ್ಟಿಲ್ಲ. ರಾಜೋಚಿತ ವೈಭೋಗದಲ್ಲಿ ಮೆರೆಯುತ್ತಿದ್ದ ಅವರನ್ನು ಕಷ್ಟಗಳು ಅಟ್ಟಾಡಿ ಬಂದವು. ರಾಜಕುಮಾರಿಯಾದ, ಪಂಚಪಾಂಡವರ ಧರ್ಮಪತ್ನಿಯಾದ ದ್ರೌಪದಿ ವಿರಾಟನ ಅರಮನೆಯಲ್ಲಿ ತೊತ್ತಾಗಿ ದುಡಿಯಬೇಕಾಯಿತು. ಸಾಕ್ಷಾತ್ ಶ್ರೀಕೃಷ್ಣನೇ ಅರ್ಜುನನ ಬಂಡಿಗೆ ಸಾರಥಿಯಾದನೆಂದ ಮೇಲೆ ಉಳಿದವರ ಪಾಡೇನು? ಎಂದು ಅಂತಹ ಮಹಾನ್ ವ್ಯಕ್ತಿಗಳು ಎದುರಿಸಿದ ಕಷ್ಟ ಪರಂಪರೆಗಳನ್ನು ವಿವರಿಸುವ ಮೂಲಕ ಜನರು ತಮ್ಮ ಕಷ್ಟವನ್ನು ಸಹಿಸಿಕೊಳ್ಳುವ ಹಾಗೆ, ನುಂಗಿಕೊಳ್ಳುವ ಹಾಗೆ ಅವರ ಮನಸ್ಸನ್ನು ಹದಗೊಳಿಸಿರುವುದಲ್ಲದೆ, ಈ ನಶ್ವರ ಸಂಸಾರದ ಬಗ್ಗೆ ಹೆಚ್ಚಿನ ವ್ಯಾಮೋಹ ಬೇಡವೆಂದು ಎಚ್ಚರಿಸಿರುವರು.

*ಉಂಟಾದ ಕಾಲಕ್ಕೆ ನೆಂಟರು ಇಷ್ಟರು*
*ಬಂಟರಾಗಿ ಬಾಗಿಲ ಕಾಯ್ವರು*
*ಉಂಟಾದತನ ತಪ್ಪೆ ಬಡತನ ಬಂದರೆ*
*ಒಂಟೆಯಂತೆ ಗೋಣ ಮೇಲೆತ್ತುವರು*

*ಉಂಬಾಗ ಉಡುವಾಗ ಕೊಂಬಾಗ ಕೊಡುವಾಗ*
*ಬೆಂಬಲದಲಿ ನಲಿಯುತಿಹರು*
*ಬೆಂಬಲತನ ತಪ್ಪೆ ಬಡತನ ಬಂದರೆ*
*ಇಂಬುನಿನಗಿಲ್ಲ ನಡೆಯೆಂಬರು*

- ಇದು ಲೋಕ ನೀತಿ. ತುಂಬಿದ ಜೇಬಿನವರ ಹಿಂದೆ ಉಳಿದವರು; ಖಾಲಿ ಜೇಬಿನವರನ್ನು ಕೇಳುವವರಾರು? ಮೂರು ದಿನದ ಈ ಭಾಗ್ಯ ಶಾಶ್ವತವಲ್ಲ, ಕಷ್ಟನಷ್ಟಗಳ ಪೆಟ್ಟು ಬಿದ್ದು ಸಾಕಷ್ಟು ಹೈರಾಣವಾದ ಮೇಲೆಯೇ ಮನುಷ್ಯನಿಗೆ ದೇವರತತ ಮನಸ್ಸು ತವಕಿಸುವುದು, ಅವನೇ ಸರಿಯಾದವನೆನಿಸುವುದು. ಆದರೆ ತನ್ನ ಹಾಗೂ ಇತರರ ಅನುಭವಗಳಿಂದ ಸಾಕಷ್ಟು ಪೆಟ್ಟು ಬೀಳುವ

ಮುನ್ನವೇ ಅದನ್ನರಿತುಕೊಂಡು ವಿವೇಕದಿಂದ ಬಾಳುವುದು ವಿಹಿತವೆಂಬುದು ಲೋಕಕ್ಕೆ ಶ್ರೀಪಾದರಾಜರ ಕಿವಿಮಾತು. ಬದುಕನ್ನು ವ್ಯರ್ಥಹೋಗಗೊಡದೆ ಅತ್ತಿತ್ತ ಹರಿಹಾಯುವ ಚಂಚಲಚಿತ್ತವನ್ನು ಭಗವಂತನ ಸ್ಮರಣೆಯಲ್ಲಿ ತೊಡಗಿಸಬೇಕು:

*ಚಿತ್ತಜನಯ್ಯನ ಚಿಂತಿಸು ಮನವೇ*
*ಹೊತ್ತು ಕಳೆಯದೆ ಸರ್ವೋತ್ತಮನ ನೆನೆಮನವೇ.*

*ಕಾಲನದೂತರು ನೂಲುಹಗ್ಗವ ತಂದು*
*ಕಾಲುಕೈಗಳ ಕಟ್ಟಿ ಮ್ಯಾಲೆಕುಟ್ಟಿ*
*ಕಾಲಪಾಶದೊಳಿಟ್ಟು ಶೂಲದಿಂದಿರಿವಾಗ*
*ಪಾಲಿಸುವರುಂಟೆ?......*

*ದಂಡಧರನ ಭಟರು ಚಂಡಕೋಪದಿ ಬಂದು*
*ಕೆಂಡದ ನದಿಯ ತಟಿಗೆ ಕೊಂಡೊಯ್ದು*
*ಖಂಡ ಖಂಡವ ಕಿತ್ತು ಕೆಂಡದೊಳಿಡುವಾಗ*
*ಹೆಂಡಿರುಮಕ್ಕಳು ಬಂದು ಬಿಡಿಸಬಲ್ಲರೆ॥*

*ಅಂಗಳಿಗೆ ದಬ್ಬಣಂಗಳ ಸೇರಿಸಿ ಎರಡು*
*ಕಂಗಳಿಗೆ ಸೀಸವ ಕಾಸಿ ಪೊಯ್ಯಲು*
*ತಂಗಿ ಅಕ್ಕ ಬಂದು ಭಂಗವ ಬಿಡಿಸುವರೆ?*
*'ಅಂಗವು ಸ್ಥಿರವಲ್ಲ' ಎಂದು ಹೇಳಿ*

- ಎಂದು ಮುಂತಾಗಿ ಕೇಳುತ್ತ ಕೇಳುತ್ತಲೇ ಮನುಷ್ಯನ ಅಶಾಶ್ವತ ಬದುಕನ್ನು ಪದರ ಪದರವಾಗಿ ಬಿಚ್ಚಿಟ್ಟಿರುವರು. ಕೊನೆಯ ಗಳಿಗೆಯಲ್ಲಿ ಭಗವಂತನನ್ನು ನೆನೆಯುವ ಪರಿಪಾಟಲಿಗಿಂತ ಗಟ್ಟಿಮುಟ್ಟಾಗಿದ್ದಾಗಲೇ ಅತ್ತ ಗಮನ ಹರಿಸಿ, ಚಿತ್ತವಿಟ್ಟು ಭಗವಂತನನ್ನು ಸ್ಮರಿಸಿ, ಕೊನೆಗಾಲಕ್ಕೆ ಪರದ 'ಬುತ್ತಿ'ಯನ್ನು ಸಿದ್ಧಮಾಡಿಕೊಳ್ಳಬೇಕೆನ್ನುವರು. ಅದಕ್ಕೆ ಬೇಕಾದ ಪರಿಕರ 'ಭಕ್ತಿ'. ಮುಕ್ತಿಯನ್ನು ಬಯಸುವ ಪ್ರತಿಯೊಬ್ಬನಿಗೂ 'ಭಕ್ತಿಬೇಕು ವಿರಕ್ತಿಬೇಕು। ಸರ್ವಶಕ್ತಿ ಬೇಕು ಮುಂದೆ ಮುಕ್ತಿಯ ಬಯಸುವಗೆ:

*ಸತಿ ಅನುಕೂಲ ಬೇಕು*
*ಸುತನಲ್ಲಿ ಗುಣಬೇಕು*
*ಮತಿವಂತನಾಗಬೇಕು*
*.........*

*ಸುಸಂಗ ಹಿಡಿಯಲಿ ಬೇಕು*
*ದುಸ್ಸಂಗ ಬಿಡಲಿಬೇಕು*

- ಎಲ್ಲಕ್ಕಿಂತ ಹೆಚ್ಚಾಗಿ 'ರಂಗವಿಠಲನ್ನ ಬಿಡದೆ ನೆರೆನಂಬಿರಬೇಕು'. ಆಗ ಮಾತ್ರ ಅವನ ಮನಸ್ಸು ಸಮಾಧಾನ ಸ್ಥಿತಿಯಲ್ಲಿದ್ದು ಆಧ್ಯಾತ್ಮ ಚಿಂತನೆಯಲ್ಲಿ ತೊಡಗಿ ಮುಕ್ತಿ ಪಡೆಯುವಲ್ಲಿ ಸಫಲವಾಗುತ್ತದೆ.

ಅಂತೆಯೇ ಶ್ರೀಪಾದರಾಜರ 'ಭೂಷಣಕೆ ಭೂಷಣ ಇದು ಭೂಷಣ' ಎನ್ನುವ ಕೀರ್ತನೆ ಕೂಡ ಸಾತ್ವಿಕ ಬದುಕಿನ ರೂಪುರೇಷೆಗಳನ್ನು ಕಟ್ಟಿಕೊಡುತ್ತದೆ:

*ನಾಲಿಗ್ಗೆ ಭೂಷಣ ನಾರಾಯಣನ ನಾಮ*

*ಕಾಲಿಗೆ ಭೂಷಣ ಹರಿಯಾತ್ರೆಯು*

*ಆಲಯಕೆ ಭೂಷಣ ತುಲಸಿ ವೃಂದಾವನ ವಿ-*

*ಶಾಲ ಕರ್ಣಕೆ ಭೂಷಣ ವಿಷ್ಣು ಕಥೆಯು ||*

*ದಾನವೇ ಭೂಷಣ ಇರುವ ಹಸ್ತಂಗಳಿಗೆ*

*ಮಾನವೇ ಭೂಷಣ ಮಾನವರಿಗೆ*

- ಇತ್ಯಾದಿ ಮಾತುಗಳಲ್ಲಿ ಜನಸಾಮಾನ್ಯರಿಗೆ ಆದರ್ಶಬದುಕಿನ ರೀತಿಯನ್ನು ತೋರಿಕೊಡುತ್ತಾರೆ. ಒಟ್ಟಾರೆ ಇಂತಹ ಕೀರ್ತನೆಗಳಲ್ಲಿ ಶ್ರೀಪಾದರಾಜರು ಸತ್ಸಂಗ ಸನ್ನಡತೆ ಸದಾಲೋಚನೆಗಳಿಂದ ಮಾತ್ರ ಬಾಳು ಹಸನಾಗಬಲ್ಲುದೆಂಬ ತುಂಬುನಂಬುಗೆಯನ್ನು ವ್ಯಕ್ತಗೊಳಿಸಿರುವರು.

## ೪. ಕೀರ್ತನೆಗಳ ಕಾವ್ಯಸ್ವಾರಸ್ಯ ಹಾಗೂ ಶೈಲಿ

ಯಾವುದೇ ಒಂದು ಭಾಷೆಯ ಸಾಹಿತ್ಯವನ್ನು, ಸಾಹಿತ್ಯ ಕೃತಿಯನ್ನು ಕುರಿತು ಹೇಳುವಾಗ ಅದರ ವಸ್ತು ಸ್ವರೂಪ ಛಂದಸ್ಸು ನಿರ್ವಹಣೆ ತಂತ್ರದರ್ಶನ ಬಳಸಿರುವ ಸಂಕೇತಗಳು ಅಲಂಕಾರಗಳು ಧ್ವನಿ-ಇತ್ಯಾದಿ ಅನೇಕ ಅಂಶಗಳನ್ನು ಗಮನಿಸಿ, ವಿಶ್ಲೇಷಿಸಿ ನೋಡಬೇಕಾಗುತ್ತದೆ. ಇವುಗಳೆಲ್ಲ ಒಟ್ಟು ಸೇರಿದಗ ಓದುಗರ ಮೇಲೆ ಉಂಟಾಗುವ ಪರಿಣಾಮ ಒಂದು ಕೃತಿಯ ಮೌಲ್ಯವನ್ನು ನಿರ್ಧರಿಸುತ್ತದೆ. ಅದರಲ್ಲೂ ವಸ್ತುವಿನ ನಿರೂಪಣೆ, ನಿರ್ವಹಣೆ, ಸಂವಿಧಾನ, ತಂತ್ರಗಳು ಮುಖ್ಯ ಹಾಗೂ ನಿರ್ಣಾಯಕ ಪಾತ್ರವಹಿಸುತ್ತವೆ. ಹಾಗೂ ಒಂದು ಹಂತದಲ್ಲಿ ಅವು ಪೂರ್ವಯೋಜಿತವೂ ಆಗಿರುತ್ತವೆ.

ಆದರೆ, ಹರಿದಾಸರ ಕೀರ್ತನೆಗಳು ಉಳಿದ ಕಾವ್ಯಗಳಂತೆ ಉದ್ದೇಶಪೂರ್ವಕವಾಗಿ ಯೋಜಿಸಿ ಕುಳಿತು ಬರೆದುವಂಥವಲ್ಲ. ವಸ್ತು ಇಂಥದ್ದಿರಬೇಕು; ಇಂಥ ಛಂದಸ್ಸನ್ನು ಬಳಸಬೇಕು; ಕಥಾ ಹಂದರ ಇಷ್ಟಿದ್ದರೆ ಸಾಕು. ಯಾವ ವಿಷಯವನ್ನು ಸಾಂಕೇತಿಕವಾಗಿ ಹೇಳಿದರೆ ಹೆಚ್ಚಿನ ಪರಿಣಾಮ ಸಾಧಿಸಬಹುದು - ಇತ್ಯಾದಿ ಯೋಚನೆಗಳಿಗೆ ಇಲ್ಲಿ ಅವಕಾಶವಿಲ್ಲ. ಒಂದು ರೀತಿಯಲ್ಲಿ ಇವು ಆಶುಕವಿತೆಗಳು. ದಾಸರು ಜನರ ನಡುವೆ ಹೋಗಿ ಅವರ ನಡೆನುಡಿಗಳಿಗೆ ಸ್ಪಂದಿಸಿದಾಗ ಮೂಡಿಬಂದ ಸ್ಪಂದನಗಳು. ಬಂದ ಬಂದ ಹಾಗೇ ಭಾಷೆಯ ಮೂಲಕ ಅಭಿವ್ಯಕ್ತಿ ಪಡೆದಂಥವು. ಹಾಗೆಯೇ ಬಾಯಿಂದ ಬಾಯಿಗೆ ನೂರಾರು ವರ್ಷ ಕಾಲ ದಾಟಿ ಬಂದಿರುವ ತೋಂಡೀ ಸಾಹಿತ್ಯ (Oral Tradition) ವಿದು. ಆಸಕ್ತರು ತಮಗೆ ಇಷ್ಟವಾದುದನ್ನು ಕೇಳಿ ಬರೆದಿರಿಸಿಕೊಂಡಿರುವಂತಹ ಸ್ವಂತ ಸಂಗ್ರಹಗಳು ನಮಗೆ ಇಂದು ಹಸ್ತಪ್ರತಿಗಳ ರೂಪದಲ್ಲಿ ಸಿಕ್ಕಿರುವಂಥವು. ಆ ಕೀರ್ತನೆಗಳು ಆಯಾ ಹರಿದಾಸರ ಅಂತರಂಗದ ನೇರ ಅಭಿವ್ಯಕ್ತಿಯಾದುದರಿಂದ ಕಾವ್ಯದ, ಸಾಹಿತ್ಯದ ಅನೇಕ ಲಕ್ಷಣಗಳನ್ನು ಅವು ಪಡೆದುಕೊಂಡಿವೆ. ಆದುದರಿಂದಲೇ ಅವುಗಳನ್ನು ಕನ್ನಡ ಸಾಹಿತ್ಯದ ಒಂದು ಪ್ರಕಾರವಾಗಿ ಪರಿಗಣಿಸಿ, 'ಕೀರ್ತನೆ'ಗಳೆಂದು ಕರೆಯಲಾಗಿದೆ. ಇಂದು ಚಂಪು, ಷಟ್ಪದಿ, ರಗಳೆ, ಸಾಂಗತ್ಯ ಇತ್ಯಾದಿಗಳಂತೆ ಕೀರ್ತನೆಯೂ ನಮ್ಮ ಕನ್ನಡದ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿದೆ. ಹರಿದಾಸರ ಎಲ್ಲ ರಚನೆಗಳನ್ನೂ ಕೀರ್ತನೆ, ಸುಳಾದಿ, ವೃತ್ತನಾಮ, ಉಗಾಭೋಗ, ದಂಡಕ - ಒಟ್ಟಾಗಿ 'ಕೀರ್ತನೆ'ಗಳೆಂದೇ ಕರೆಯಲಾಗಿದೆ.

ಶ್ರೀಪಾದರಾಜರೇ ಮೊದಲಾದ ಹರಿದಾಸರು ಇಂತಹ ಕೀರ್ತನೆಗಳನ್ನು ರಚಿಸಿ ಕಹಾಡುವ ಮೂಲಕ, ಹಾಡಿಕೊಂಡು ನರ್ತಿಸುವ ಮೂಲಕ ತಮ್ಮ ಸಾಧನೆಯ ಮಾರ್ಗವನ್ನು ಕ್ರಮಿಸಿದ್ದಾರೆ. ಅವರ ಭಕ್ತಿ ನಿಷ್ಠೆ, ಭಕ್ತಿಯ ವೈವಿಧ್ಯ, ಗಹನವಾದ ತಾತ್ವಿಕ ವಿಚಾರಗಳನ್ನು ಸರಳಭಾಷೆಯ ಮೂಲಕ ಹೇಳಿರುವ ರೀತಿ; ಹಾಗೆ ಹೇಳುವ ಸಂದರ್ಭದ ತೀವ್ರತೆ ಭಾವಾವೇಶಗಳಿಗೆ ತಕ್ಕ ಭಾಷೆಯ ಬೆಡಗು, ಬಳುಕು-ಬಾಗುಗಳು ಅಂತಹ ರಚನೆಗಳಿಗೆ ಕಾವ್ಯದ ಲೇಪವನ್ನಿತ್ತಿವೆ. ಮತ್ತು ದಾಸರು ಮೂಲಭೂತವಾಗಿ ಮಾನವಸಮುದಾಯದ ಉತ್ತಮಿಕೆ, ಮೇಲ್ಮೆಗಳನ್ನು ಕುರಿತು ಚಿಂತಿಸಿರುವುದರಿಂದ ಎಲ್ಲರಿಗೂ ಅವರ ರಚನೆ ಶೈಲಿ ಧಾಟಿಗಳು ಆಪ್ಯಾಯಮಾನವಾಗಿಯೇ

ಇರುತ್ತವೆ. ಹೆಚ್ಚು ಹೆಚ್ಚು ಆಪ್ತವಾಗುತ್ತಾ ಹೋಗುತ್ತವೆ. ಅಷ್ಟೇ ಏಕೆ ಕೇಳುಗರಿಗೆ ತಮ್ಮ ಮನಸ್ಸಿನ ಪದರಗಳನ್ನೇ ಬಿಚ್ಚಿಟ್ಟ ಅನುಭವವಾಗುತ್ತದೆ. ಶ್ರೀಪಾದರಾಜರು ಸ್ವತಃ ಲೌಕಿಕ ಸಂಸಾರದ ಬಂಧನಕ್ಕೊಳಗಾಗದಿದ್ದರೂ ತಾವು ಬದುಕಿದ್ದ ಪರಿಸರದ, ಸಮಾಜದಲ್ಲಿಯ ಸಂಸಾರಿಗಳ ಸುಖದುಃಖಗಳನ್ನು ಕಂಡು ಕೇಳಿ ತಿಳಿದವರಾಗಿದ್ದರು. ನಶ್ವರ ಸಂಸಾರದ ಸುಖೋಪ ಭೋಗಗಳಲ್ಲೇ ಮಗ್ನರಾಗಿದ್ದ ಜನ ಅವರಿಗೆ ಸುಪರಿಚಿತರು. ಮಾನವನ ಚಿತ್ತಚಾಂಚಲ್ಯವೇ ಅವನಿಗೆ ಒಂದು ದೊಡ್ಡ ಶಾಪವೆಂಬುದು ಅವರ ಅನುಭವದ ಅರಿವು. ಅಂತೆಯೇ -

*ಕಂಡಕಂಡ ಕಡೆಗೆ ಪೋಪ ಚಂಚಲ ಮನವು*
*ಪಿಂಡ ತಿಂಬಲ್ಲಿ ಬಹುನಿಷ್ಠತಾನು*

- ಎನ್ನುವರು. ಅವರ ನುಡಿಯ ಈ ನಿಷ್ಠುರತೆ ಯಾರನ್ನು ತಾನೆ ತಟ್ಟದೆ ಬಿಡುತ್ತದೆ . ಇಂಥ ವೈಯಕ್ತಿಕ ಅನುಭವಗಳನ್ನು ಸಾರ್ವತ್ರಿಕ ನೆಲೆಯಲ್ಲಿ ಅಭಿವ್ಯಕ್ತಿಸಿದಾಗ ಅಂಥ ಕೃತಿ ತಂತಾನೇ ಕಾವ್ಯಗುಣವನ್ನು ಪಡೆದುಕೊಳ್ಳುತ್ತದೆ.

ಈ ಸಮಾಜದಲ್ಲಿ ಎಲ್ಲರೂ ಒಟ್ಟಾಗಿ ಬಾಳುತ್ತಿದ್ದರೂ ಒಬ್ಬೊಬ್ಬರ ಆಸೆ ಆಕಾಂಕ್ಷೆಗಳು, ಅಭಿರುಚಿ ಆಸಕ್ತಿಗಳು ಒಂದೊಂದು ಕಡೆ. ಈ ಲೋಕಸತ್ಯ ಶ್ರೀಪಾದರಾಜರ ಒಂದು ಉಗಾಭೋಗದಲ್ಲಿ ಅರ್ಥಪೂರ್ಣವಾಗಿ, ಸಹಜವಾಗಿ ಅಭಿವ್ಯಕ್ತಗೊಂಡಿದೆ:

*ಮನೆಯಿಂದ ಸಂತೋಷ ಕೆಲವರಿಗೆ ಲೋಕದಲ್ಲಿ*
*ಧನದಿಂದ ಸಂತೋಷ ಕೆಲವರಿಗೆ ಲೋಕದಲ್ಲಿ*
*ವನಿತೆಯಿಂ ಸಂತೋಷ ಕೆಲವರಿಗೆ ಲೋಕದಲ್ಲಿ*
*ತನಯರಿಂ ಸಂತೋಷ ಕೆಲವರಿಗೆ ಲೋಕದಲ್ಲಿ*
*ಇನಿತು ಸಂತೋಷ ಅವರವರಿಗಾಗಲಿ, ನಿನ್ನ*
*ನೆನೆವೋ ಸಂತೋಷ ಎನಗಾಗಲಿ ನಮ್ಮ ರಂಗವಿಠಲ*

- ಉಗಾಭೋಗವನ್ನು ಓದುತ್ತ ಹೋದಂತೆ ಓದುಗರ ಮನಸ್ಸು ಶ್ರೀಪಾದರಾಜರೊಂದಿಗೇ ಸ್ಪಂದಿಸತೊಡಗುತ್ತದೆ. ಲೋಕಸತ್ಯದ ಸಾರ್ವತ್ರಿಕ ಹಿನ್ನೆಲೆಯಲ್ಲಿ ಭಕ್ತಿ ದೇವರುಗಳ ಬಗ್ಗೆ ತಮ್ಮ ಅಂತರಂಗದ ಆತ್ಮನಿಷ್ಠ ಬಯಕೆಯನ್ನು ತೋಡಿಕೊಳ್ಳುವ ಮೂಲಕ ಇಲ್ಲಿ ಕೃತಿಗೆ ಒಂದು ಸಹಜ ಕಾವ್ಯ ಸೌಂದರ್ಯದ ಲೇಪವೊದಗಿದೆ.

ಕನ್ನಡ ಭಾಷೆಯ ಬಳಕೆಯ ದೃಷ್ಟಿಯಿಂದ ಶ್ರೀಪಾದರಾಜರ ಕೃತಿಗಳ ಸಂದರ್ಭ ಅದ್ಭುತವಾಗಿ ಕಾಣಿಸುತ್ತದೆ. ಅದುವರೆಗೂ ಶಿಷ್ಟಕಾವ್ಯದ ತೂಕದಲ್ಲೇ ಸಂಸ್ಕೃತಮಯವಾಗಿ ಸಾಗುತ್ತಿದ್ದ ಕನ್ನಡ ಭಾಷೆ (ವಚನಗಳು ಹೊರತಾಗಿ) ಯನ್ನು ಜನಸಾಮಾನ್ಯರ ಆಡುಭಾಷೆಯನ್ನು ತಮ್ಮ ಕೃತಿಗಳಲ್ಲಿ ಬಳಸುವ ಮೂಲಕ ಶ್ರೀಪಾದರಾಜರು ಕೃತಿಗಳಿಗೆ ಪರಿಣಾಮ ರಮಣೀಯತೆಯನ್ನು ತಂದುಕೊಟ್ಟಿದ್ದಾರೆ. ಗೋಪಿಗೀತೆಯೊಂದರಲ್ಲಿ ಗೋಪಿಯೊಬ್ಬಳು ದುಂಬಿಯನ್ನು ಕುರಿತು 'ನಿನ್ನ ನೋಡೆ ನಮ್ಮ ಅಚ್ಚುತನ್ನ ಕಂಡಂತಾಯಿತಯ್ಯ' ಎನ್ನುತ್ತಾಳೆ! ಕೃಷ್ಣನ ವಿರಹವನ್ನು ತಾಳಲಾರದೆ ಗೋಪಿಯರು ಮನಸೋಯಿಚ್ಛೆ ಪ್ರಲಾಪಿಸುವರು:

*ಹಕ್ಕಿಯ ಮ್ಯಾಲುಳ್ಳ ದಯ ನಮ್ಮ ಮ್ಯಾಲೆ*
*ಇಕ್ಕದೇಕೆ ಹೋದ್ಯೋ ವಿಧಿಯೆ*
*ರೆಕ್ಕೆ ಎರಡುಳ್ಳರೆ ಮಧುರೆಗ್ಹೋಗಿ*
*ಗಕ್ಕನೆ ಶ್ರೀಹರಿಯೊಡನೆ ಕೂಡುತಿದ್ದೆವಲ್ಲ ……*

ಕಂದಿದೆವು ಕುಂದಿದೆವು ನಾವು ಎನ್ನುವರು. 'ಇನ್ಯಾತಕೆ ರಂಗನಿಲ್ಲಿಗೆ ಬಾಹ ಮಧುರಾ ಪುರಿಯರಸನಾದ| ಅವನ ನೆನಹೆ ನಮಗೆ ಸಾಕು' ಎಂದು ಸಮಾಧಾನಪಟ್ಟುಕೊಳ್ಳುವರು. ಅಂತೆಯೇ ಆಟದ ಭರದಲ್ಲಿ ಉಂಗುರ ಪದಕಗಳನ್ನು ಕಳೆದುಕೊಂಡು ಬಂದ ಮಗು ಕೃಷ್ಣನನ್ನು:

*ಬೆರಳ ಉಂಗುರವೆಲ್ಲಿ ಹೋಗಿದೆ*
*ಕೊರಳ ಪದಕವನೆಲ್ಲಿ ನೀಗಿದೆ*

- ಎಂದು ಪ್ರಶ್ನಿಸುವ ರೀತಿ ಅದೆಷ್ಟು ಸಹಜವಾಗಿದೆ.

ಗೋಪಿಯರು ರಂಗನಾಥನ ಚಿಕ್ಕ ಪಾದಗಳನ್ನು ಕಂಡ ಆನಂದ, ಸಂಭ್ರಮಗಳನ್ನು:

*ಬಂಡೆಯ ಬಾಲೆಯ ಮಾಡಿದ ಉದ್ದಂಡ ಪಾದವ*
*ಬಂಡಿಲಿದ್ದ ಶಕಟಾಸುರನ ಒದ್ದಪಾದವ*

- ಎಂದು ಮುಂತಾಗಿ ಆ ಪಾದಗಳ ಮಹಿಮಾತಿಶಯಗಳನ್ನು ಬಣ್ಣಿಸುತ್ತಲೇ ಅವನ ಲೀಲಾ ವಿನೋದಗಳನ್ನೂ ಅನಾವರಣಗೊಳಿಸಿರುವ ತಂತ್ರ ಮೋಹಕವಾಗಿದೆ. ಇಡೀ ಕೀರ್ತನೆಯಲ್ಲಿ ಸಾಗಿರುವ 'ಪಾದ' ಪದದ ಪುನರುಕ್ತಿ ಗೋಪಿಯರ ಭಕ್ತಿಭಾವದ ತೀವ್ರತೆಯನ್ನು ಮತ್ತಷ್ಟು ಹೆಚ್ಚಿಸಿದೆ. ಈ ರೀತಿಯ ಪದಗಳ ಪುನರುಕ್ತಿ ಶ್ರೀಪಾದರಾಜರಲ್ಲಿ ಒಂದು ಅಲಂಕಾರವಾಗಿ ಮತ್ತೆ ಮತ್ತೆ ಮೈದೋರಿದೆ:

*ಅನ್ನಂತ ಕಾಲದಲ್ಲಿ ನಿನ್ನ ನಾನರಿಯದೆ ಭವಗಳಲ್ಲಿ ಬಂದೆನೊ*
*ಅನ್ನಂತ ಕಾಲದಲ್ಲಿ ನಿನ್ನವನೆನಿಸದೆ ಮೂರುಖನಾದೆನೊ*
*ಅನ್ನಂತ ಕಾಲದಲ್ಲಿ ನಿನ್ನ ಚರಣರತಿಯಿಲ್ಲದೆ ನೊಂದೆನೊ*
*ಅನ್ನಂತ ಕಾಲದಲ್ಲಿ ಅದಾವ ಪುಣ್ಯದಿಂದ ಬಂದು ಇಂದು*
*ನಿನ್ನವನೆನಿಸಿದೆ...*

- ಇಲ್ಲಿಯ ಪದಗಳ ಪುನರುಕ್ತಿ ಹೃದಯದ ಆರ್ತತೆಯನ್ನು ಮೊಗೆಮೊಗೆದು ಹೊರತೆಗೆದ ಪರಿಣಾಮವನ್ನುಂಟು ಮಾಡಿದೆ. ಕೃತಿಯಲ್ಲಿ ನಾದಮಯತೆ ಭಾವತೀವ್ರತೆಗಳು ಒಟ್ಟಿಗೇ ಸಾಧಿಸಿವೆ. ಹಲವು ಜನ್ಮಗಳಲ್ಲಿ ತೊಳಲಿ ಬಳಲಿ ಬೆಂದು ನೊಂದು, ಈಗ ಮಾನವ ಜನ್ಮ ಪಡೆದಿರುವ ತಮ್ಮನ್ನು ಸಲಹಬೇಕೆನ್ನುವ ದಾಸರ ಈ ಮೊರೆ ಓದುಗರಲ್ಲೂ ಕೇಳುಗರಲ್ಲೂ ಅನುರಣಿಸುತ್ತದೆ.

ಚಿಕ್ಕಚಿಕ್ಕ ಮಾತುಗಳಲ್ಲಿಯೇ ಸೊಗಸಾದ ಶಬ್ದಚಿತ್ರಗಳನ್ನು ಕಟ್ಟಿಕೊಡಬಲ್ಲ ಶಕ್ತರು ಶ್ರೀಪಾದರಾಜರು. ಎಲ್ಲೋ ಆಟವಾಡಿ ಆಯಾಸಗೊಂಡು ಬಂದ ಕೃಷ್ಣ ದಾಸರಿಗೆ ಹೀಗೆ ಕಂಡಿದ್ದಾನೆ :

*ನೊಸಲಲ್ಲಿ ಕಿರುಬೆವರಿಟ್ಟಿದೆ ಅಲ್ಲಿ*
*ಹೊಸಪರಿ ಸುದ್ದಿಯು ಹುಟ್ಟಿದೆ*
*ಪುಸಿಯಲ್ಲ ಈ ಮಾತು ಮುಟ್ಟಿದೆ ನಿನ್ನ*
*ನಸುನಗೆ ಕೀರ್ತಿ ಹೆಚ್ಚಿದೆ.*

- ಒಳ್ಳೆಯ ಚಿತ್ರ ಕಲಾವಿದ ಕೃಷ್ಣನ ಈ ಚಿತ್ರವನ್ನು ಅವನ ತುಂಟ ನಗೆಯೊಂದಿಗೆ ತನ್ನ ಕುಂಚದಲ್ಲಿ ಸೊಗಸಾಗಿ ಸೆರೆಹಿಡಿಯಬಹುದು. ಅಂತೆಯೇ

*ಕೋಲು ಕೈಯಲಿ ಕೊಳಲು*
*ಜೋಲು ಗಂಬಳಿ ಹೆಗಲಮ್ಯಾಲೆ*
*ಕಲ್ಲಿಚೀಲ ಕೊಂಕಳಲ್ಲಿ*
*ಕಾಲಗಡಗವನಿಟ್ಟು ಕಾಡೊಳಿಹ ಪಶು ಹಿಂಡ*
*ಲಾಲಿಸುವ ಬಾಲಕರ ಮ್ಯಾಳದೊಳಗಿದ್ದೆನ್ನ-*
*ಮರೆತೆಯೇನೋ ರಂಗ ಮಂಗಳಾಂಗ*
*ತುರುಕರು ಕಾಯ್ವಲ್ಲಿ ತೋಡನಾಗಿದ್ದೆನ್ನ?*

- ಎಂದು ಕೇಳುವ ಶ್ರೀಪಾದರಾಜರ ಮಾತುಗಳು ಗೋಪಾಲಕನೊಬ್ಬನ ಚಿತ್ರವನ್ನು ಕಣ್ಣಿಗೆ ಕಟ್ಟುವ ಹಾಗೆ ಚಿತ್ರಿಸಿವೆ. ಮತ್ತು ಗೆಳೆಯರಿಬ್ಬರ ಬಹುದಿನಗಳ ಭೇಟಿಯನ್ನು ಅನುಭವಕ್ಕೆ ತಂದು ಕೊಡುವ ಮೂಲಕ ಕೀರ್ತನೆ ಆಪ್ತವಾಗುತ್ತದೆ. ಅವರು ಪರಸ್ಪರ ಹೆಗಲ ಮೇಲೆ ಕೈಹಾಕಿಕೊಂಡು ಕಳೆದ ದಿನಗಳನ್ನು ಮೆಲುಕು ಹಾಕುವ ಸುಖಾನುಭವವಿಲ್ಲಿದೆ. ಆ ಮೂಲಕ ಸಖ್ಯಭಕ್ತಿಯ ಸೊಗಸು ವ್ಯಕ್ತವಾಗಿದೆ.

ಅಲಂಕಾರಗಳ ಬಳಕೆ ಶ್ರೀಪಾದರಾಜರಲ್ಲಿ ಸಂದರ್ಭೋಚಿತವಾಗಿ ಬಂದಿದ್ದು ಕೃತಿಗಳ ಕಾವ್ಯಾತ್ಮಕತೆಯನ್ನು ಹೆಚ್ಚಿಸಿವೆ. 'ಭೂಷಣಕೆ ಭೂಷಣ ಇದು ಭೂಷಣ' - ಎಂಬ ಕೀರ್ತನೆಯಲ್ಲಿ ಗಾದೆಯಂತಿರುವ ಮಾತುಗಳ ಬಳಕೆಯಿಂದ ದಟ್ಟ ಅನುಭವವನ್ನು ಕಟ್ಟಿಕೊಡುವರು. 'ಮಾನವೇ ಭೂಷಣ ಮಾನವರಿಗೆ' - ಹೌದು. ಅಡಿಕೆಗೆ ಹೋದ ಮಾನ ಆನೆಕೊಟ್ಟರೂ ಬರುವುದಿಲ್ಲವೆಂಬುದೆ ನಮ್ಮ, ಭಾರತೀಯರ ಸಂಸ್ಕೃತಿ. 'ಅರಸು ಮುಟ್ಟಲು ದಾಸಿರಂಭೆಯಾದಳು। ಪುರುಷ ಮುಟ್ಟಲು ಲೋಹ ಸ್ವರ್ಣ' - ಇಂಥ ಅನೇಕ ಗಾದೆ ಮಾತುಗಳು ಅಲಂಕಾರಗಳಾಗಿಯೂ ಸಾರ್ಥಕತೆ ಪಡೆದಿವೆ. ಹರಿಯ 'ಚಂದ್ರಿಕಾ ನಿಭ ಮುದ್ದು ಮಂದಹಾಸಕೆ ಶರಣು... ಕುಂದ ಕುಟ್ಮಲಪೋಲ್ವ ದಂತಪಂಕ್ತಿಗೆ ಶರಣು' 'ಒಂಟೆಯಂತೆ ಗೋಣ ಮೇಲೆತ್ತುವರು', 'ಶುದ್ಧ ಧವಳದಂತೆ ಮಂದಹಾಸ' - ಇಂತಹ ಉಪಮೆಗಳೂ। 'ತನ್ನ ನೇಹವೆಂಬೋ ನಾವೆಯನ್ನೇರಿಸಿ ಮೋಸದಿ। ನಡುನೀರೊಳು ತೊರೆದ್ಹೋದನೆ ಹೇ ಕಿತವ'। 'ನಿನ್ನ ವಿರಹವಾರಾಶಿಯೊಳು ಮುಳುಗಿಹ ನಾರೀನಿಚಯವ ಪಾರಗಾಣಿಸು ಕೃಪಾನಾವೆಯಲಿಂದೆಮ್ಮನು' - ಇಂತಹ ರೂಪಕಾಲಂಕಾರಗಳೂ ಅಲ್ಲಲ್ಲಿ ಮೆರೆದಿವೆ.

ಆದಿ ಮಧ್ಯಾಂತ ಪ್ರಾಸಗಳು, ವಡಿ ಇವರ ಕೃತಿಗಳಲ್ಲಿ ಹಾಸುಹೊಕ್ಕಾಗಿವೆ. ಶಬ್ದಾರ್ಥಗಳೊಂದಿಗೆ ಅವುಗಳಿಂದ ಹೊರಡುವ, ಭಾವಪೋಷಕವಾದ ನಾದಕ್ಕೂ ಶ್ರೀಪಾದರಾಜರು ಬೆಲೆ ಕೊಟ್ಟಿರುವರು:

*ಮಧುಕುಂಜವನದಲ್ಲಿ ಮಧುವೈರಿಕೊಳಲನೂದಲು*
*ಮಧುರ ನಿಸ್ವನ ಕೇಳಿ ಮದಿರಾಕ್ಷಿಯರೆಲ್ಲ ...*
*.....*
*ತುರುಗಾಯ ಬಂದ ಗೋಪಿಯ ಕಂದ ಆನಂದದಿಂದ .....*
*.....*
*ಕಮಲದಳನೇತ್ರ ಕಮಲಾರಿಸಮವಕ್ತ್ರ*
*ಕಮಲಾ ವಿರಚಿತ ಸ್ತೋತ್ರ ಕರಧೃತಗೋತ್ರ*
*ಕಮಲಜನುತಿ ಪಾತ್ರ ಕರಿರಾಜಯಾತ್ರ*
*ಕಮಲಧರ ಕರಕಮಲಸಮಪದ*
*ಕಮಲಸಂಭವವಿನುತ ಕಂಧರ*
*ಕಮಲಸನ್ನಿಭ ಸುಗಾತ್ರ, ಕಮಲಾ ಕಳತ್ರ ...*
*......*

*ಹಂಗ ವಿಹಂಗ ಭುಜಂಗ ನವಿಲು ಸಾ*
*ರಂಗ ಗಿಣಿಯು ಮಾತಂಗ ಮರಿಯು ಕು -*
*ರಂಗ ಮಧ್ಯೆ ಚರಣಂಗಳೆಡೆಗೆ ವೇ*
*ದಂಗಳೆರಗ ಕಾಮಂಗಳಲುಗೆ...*

- ಇಲ್ಲಿಯ ಪ್ರಾಸಾನುಪ್ರಾಸಗಳ ಮೋಡಿ ಮನಕ್ಕೆ ಮುದಕೊಡುವಂತಹುದು.

ನಾಟಕೀಯತೆ ಶ್ರೀಪಾದರಾಜರ ಕೃತಿಗಳ ಕಾವ್ಯಮಯತೆಯ ಒಳಗುಟ್ಟು. ಸಾಮಾನ್ಯವಾಗಿ ಸಂಭಾಷಣಾ ತಂತ್ರವಿರುವ ಕೀರ್ತನೆಗಳಲ್ಲಿ ನಾಟಕೀಯತೆ ಎದ್ದು ಕಾಣುತ್ತದೆಯಾದರೂ ಅವರ 'ದಂಡಕ'ದಲ್ಲಿ ಈ ಗುಣವನ್ನು ಸ್ಪಷ್ಟವಾಗಿ ಗುರುತಿಸಬಹುದು. ವಿಷ್ಣು ನರಸಿಂಹಾವತಾರವೆತ್ತಿ ಹಿರಣ್ಯಕಶಿಪುವನ್ನು ಸಂಹರಿಸಿ ಭಕ್ತಪ್ರಹ್ಲಾದನನ್ನು ಅನುಗ್ರಹಿಸಿದ ಕತೆಯನ್ನು ವಸ್ತುವಾಗುಳ್ಳ ದಂಡಕವನ್ನು ಪ್ರಾರಂಭದಿಂದ ಕೊನೆಯವರೆಗೂ ಓದಿದಾಗ ಒಂದು ನಾಟಕವನ್ನು ನೋಡಿದ ಅನುಭವವಾಗುತ್ತದೆ. ದೇವಾನುದೇವತೆಗಳೆಲ್ಲ ನರಸಿಂಹ ದೇವರ ಉಗ್ರರೂಪವನ್ನು ಶಾಂತಗೊಳಿಸಲು ವಿಫಲರಾದಾಗ ಬ್ರಹ್ಮನ ಕೋರಿಕೆಯಂತೆ ಲಕ್ಷ್ಮೀದೇವಿಯೇ ಆ ಕಾರ್ಯ ಮಾಡಲು ಮುಂದಾಗುತ್ತಾಳೆ:

*ಆ ಮೇಲೆ ಆ ಬಾಲೆ, ಸಾ*
*ಕ್ಷಾಜ್ಜಗನ್ಮೋಹಿನೀ, ಲೀಲೆಗಳ್ ಮಿಂಚುತಾ*
*ಪೊಂಚುತಾ ಬಂದು, ಸಿಂಹಾಸನ ಸ್ಥಾನದಲ್,*
*ಉಗ್ರನಂತಿಪ್ಪ ನೃಸಿಂಹ ಮೂರ್ತ್ಯುಗ್ರಮಂ,*
*ಕಂಡತಿ ವ್ಯಗ್ರಳಂತಾಗಿ, ಆ ತಾಯಿ,; ಹಿಂ*
*ದಕ್ಕೆ ಬಂದಳಮ್ಮಮ್ಮಾ, ಏಂ ಗುಮ್ಮನಂ*
*ತಿಪ್ಪನೇ ಸ್ವಾಮಿ, ಮುನ್ನಿಂತು ಆಶ್ಚರ್ಯವಂ*
*ಈಸು ವಿಕ್ರಮ್ಯವಂ, ಎಂದಿಗಾನೆಲ್ಲಿ ಕಂ*
*ಡಿಲ್ಲವಲ್ಲಾ, ಕಿವಿಲ್ಯಾದರುಂ ಕೇಳಲೇ*
*ಇಲ್ಲವಲ್ಲಾ, ಇದೇನೋ ವಿಚಿತ್ರಾಕೃತಿ*
*ಯಂತೆ ತೋರೂವನೆಂದಂಜೀಕೆಗೊಂಡ ರೀ*
*ತಿಂದ, ತಾ, ಹೆಜ್ಜೆ ಕಾಲ್ಗೆಜ್ಜೆಗಳ್, ಸಪ್ಪುಳಂ*
*ಮಾಡದೇ, ಮೆಲ್ಲನೇ, ಪಾರ್ಶ್ವದಲ್, ನಿಂತಳು.*

ಕೋಪದಿಂದುರಿಯುತ್ತಿರುವ ನರಸಿಂಹಾವತಾರಿ ಹರಿ, ಹೆದರಿಕೆಯಿಂದ ಇಡೀ ದೇಹವನ್ನು ಒಂದು ಹಿಡಿಯಾಗಿ ಮಾಡಿನಿಂತ ಲಕ್ಷ್ಮೀದೇವಿ. ಈ ಇಡೀ ಸನ್ನಿವೇಶವನ್ನೇ ಒಂದು ಚಿತ್ರವಾಗಿ ಚಿತ್ರಿಸಬಹುದು; ನಾಟಕವಾಗಿ ಅಭಿನಯಿಸಬಹುದು. ಇಡೀ ದಂಡಕ ಇಂತಹ ಹಲವಾರು ರಸಮಯ ಸನ್ನಿವೇಶಗಳಿಂದ ಕೂಡಿ ಸೊಗಸಾದ ಖಂಡಕಾವ್ಯವಾಗಿ ಪರಿಮಳಿಸಿದೆ. ಇಲ್ಲಿಯ ವಸ್ತುವಿನ ಗಾಂಭೀರ್ಯ, ಸನ್ನಿವೇಶದ ಭಯಂಕರತೆಗಳಿಗೆ ತಕ್ಕ ಭಾಷೆ; ಭಾಷೆಗೆ ತಕ್ಕ ಬಂಧ ಕುತೂಹಲವನ್ನು ಕೆರಳಿಸುತ್ತಾ ತಣಿಸುತ್ತಾ ಓದಿಸಿಕೊಂಡು ಹೋಗುತ್ತದೆ. ಇಲ್ಲಿಯ ಸರಳವಾದ ಭಾಷೆ, ಲಯಬದ್ಧನಡೆ, ಸಹಜ ನಿರೂಪಣೆ, ವರ್ಣನಾಕುಶಲತೆಗಳು ಗಮನಾರ್ಹ.

ಭಾವತೀವ್ರವಾದಾಗ ಶ್ರೀಪಾದರಾಜರ ಕನ್ನಡ ಭಾಷೆಯೂ ನಿರರ್ಗಳವಾಗಿ ಹರಿದಿದೆ:

*ಪೃಥಿವಿಯೊಳಗುದಿಸಿ ಮುವ್ವತ್ತಾರು ವತ್ಸರ ಈ*
*ರೀತಿ ಕಾಳಕಳೆದೆನೊ ಕೃಷ್ಣ*

*ವ್ಯರ್ಥವಾಯಿತು ಜನುಮ ಸಾರ್ಥಕಾಗದು ಕಣ್ಣ*
*ಕತ್ತಲೆಗವಿಸಿತಲ್ಲೋ ಕೃಷ್ಣ*

*ಇತ್ತಬಾರೆಂತೆಂದು ಹತ್ತಿಲಿಗೆ ಕರೆದೊಂದು*
*ತುತ್ತು ಕೊಡುವರ ಕಾಣೆನೊ ಕೃಷ್ಣ*
*ವಿಸ್ತರಿಸಲಾರೆ ಇನ್ನೆತ್ತ ಪೋಗಲೋ ನಿನ್ನ*
*ಚಿತ್ತವ್ಯಾತಕೆ ಕರಗದೊ ಕೃಷ್ಣ-*

ಭಕ್ತನ ಮನದ ಅಳಲು ಯಾತನೆ ಹೊಯ್ದಾಟಗಳ ನೇರ ಹಾಗೂ ಶಕ್ತಿಯುತ ಚಿತ್ರಣವಿದು. ಸಂಗೀತಗುಣ, ನಾದಮಾಧುರ್ಯಗಳು ಶ್ರೀಪಾದರಾಜರ ಕೃತಿಗಳಲ್ಲಿ ಹಾಸುಹೊಕ್ಕಾಗಿವೆ. 'ಇಕ್ಕೋನೋಡೆ ರಂಗನಾಥನ ದಿವ್ಯಪಾದವ', 'ಕಂಗಳಿದ್ಯಾತಕೊ ಕಾವೇರಿ ರಂಗನ ನೋಡದ', 'ಪೋಪು ಹೋಗೋಣ ಬಾರೊ ರಂಗ', 'ಇಟ್ಟಾಂಗೆ ಇರುವೆನೊ ಹರಿಯೆ', 'ಎಲ್ಲ್ಯಾಡಿ ಬಂದ್ಯೋ ಎನ್ನ ರಂಗಯ್ಯ', 'ನಾ ನಿನಗೇನು ಬೇಡುವುದಿಲ್ಲ ರಂಗ', 'ಸಾಸಿರಜಿಹ್ವೆಗಳುಳ್ಳ ಶೇಷನೇ ಕೊಂಡಾಡಬೇಕು ವ್ಯಾಸಮುನಿರಾಯರ ಸನ್ಯಾಸದಿರವ' - ಇಂತಹ ಕೀರ್ತನೆಗಳು ಈ ಮಾತಿಗೆ ಸಾಕ್ಷಿ.

ಶ್ರೀಪಾದರಾಜರ ಕೃತಿಗಳ ಛಂದಸ್ಸನ್ನು ಕುರಿತು ಹೇಳುವುದಾದರೆ ಅವು ಅಂಶಲಯದತ್ತ ವಾಲುವುವಾದರೂ ಯಾವುದೇ ಒಂದು ಕೃತಿಯಲ್ಲೂ ಖಚಿತವಾಗಿ ಅಂಶಲಯವನ್ನು ಗುರುತಿಸುವುದು ಸಾಧ್ಯವಿಲ್ಲ. ಹಾಗೆಯೇ ಅಲ್ಲಲ್ಲಿ ಮಾತ್ರ ಲಯದ ನಡೆ ಅನುಭವಕ್ಕೆ ಬಂದರೂ ಯಾವುದೇ ಒಂದು ಕೀರ್ತನೆ ಪೂರ್ಣವಾಗಿ ಮಾತ್ರಾಲಯದಲ್ಲಿಲ್ಲ. ಎಲ್ಲ ಕೃತಿಗಳೂ ಸಂಗೀತ ಲಯಾನುಸಾರಿಗಳೇ ಆಗಿವೆ.

ಒಳ್ಳೆಯ ಮಾತುಗಳನ್ನು ಕೇಳುವುದೇ ಹಿತ; ಅವು ಸಾಹಿತ್ಯ ರೂಪದಲ್ಲಿ ಬಂದರೆ ವಿಹಿತ; ಸಂಗೀತವೂ ಬೆರೆತಲ್ಲಿ ಪರಿಣಾಮ ಅದ್ಭುತ. ಶ್ರೀಪಾದರಾಜರ ಕೃತಿಗಳು ಭಾಷೆ ಅರ್ಥಗಳನ್ನು ಮೀರಿದ ಒಂದು ಅನುಭವವನ್ನು ಕೊಡುವುದಕ್ಕೆ ಇದೇ ಕಾರಣ. ಅಷ್ಟಾದಶ ವರ್ಣನೆಗಳಿಲ್ಲದ, ಧ್ವನಿ ಸಂಕೇತಗಳ ಉದ್ದಿಶ್ಯವನ್ನು ಕಾಣದ ಶ್ರೀಪಾದರಾಜರ ಅಂತರಂಗದ ನುಡಿಗಳು ಅನುಭವದ ಮೂಸೆಯಲ್ಲಿ ಮಿಡಿದಿವೆ; ಕೀರ್ತನೆಗಳಾಗಿ ಹೊರಹೊಮ್ಮಿವೆ. ಅವು ಜನಸಾಮಾನ್ಯರ ಅನುಭವಗಳೂ ಆಗಿರುವುದರಿಂದ ಹಾಡುಗ ಕೇಳುಗರ ಮನಸ್ಸಿನ ತರಂಗಾಂತರಗಳು ಒಂದೇ ಆಗಿದ್ದು, ಪ್ರತಿಯೊಬ್ಬರಿಗೂ ತಮ್ಮ ಹೃದಯವೇ ತಮ್ಮೊಡನೆ ಮಾತಾಡುತ್ತಿರುವ ಅನುಭವವಾಗಿ, ಮನಸ್ಸು ರಸಾರ್ದ್ರವಾಗಿ, ಶಾಂತಭಾವದಲ್ಲಿ ವಿರಮಿಸುತ್ತದೆ.

## ೫. ಉಪಸಂಹಾರ

ಒಟ್ಟಿನಲ್ಲಿ ಶ್ರೀಪಾದರಾಜರು ಕೀರ್ತನೆಯೆಂಬ ಹೊಸ ಸಾಹಿತ್ಯ ಪ್ರಕಾರವನ್ನು (-ಸುಳಾದಿ, ಉಗಾಭೋಗ, ವೃತ್ತನಾಮ, ದಂಡಕಗಳು ಸೇರಿದಂತೆ) ಕನ್ನಡ ಭಾಷೆಯಲ್ಲಿ ತಂದು ಕನ್ನಡ ಸಾಹಿತ್ಯಕ್ಕೇ ಒಂದು ಹೊಸ ಆಯಾಮವನ್ನಿತ್ತರು. ಸರಳ ಸುಂದರ ಆಡುಮಾತುಗಳ ಬಳಕೆಯಿಂದ, ಭಾವಮಾರ್ದವತೆ ಬಂಧುರತೆಗಳಿಂದ, ಮಧುರ ವಾತ್ಸಲ್ಯಾದಿ ಭಾವಗಳ ಕಲ್ಪನೆ-ಅಭಿವ್ಯಕ್ತಿಗಳಿಂದ ಕೀರ್ತನೆಯ ಮಧುರಶೈಲಿಯನ್ನು ಮುಕ್ತವಾಗಿ ವ್ಯಾಪಕವಾಗಿ ಬಳಸಿ, ಒಂದು ಪರಂಪರೆಯನ್ನೇ ನಿರ್ಮಿಸುವ ಮೂಲಕ 'ದಾಸಸಾಹಿತ್ಯ ಪ್ರವರ್ತಕ'ರೆನ್ನಿಸಿಕೊಂಡರು. ಭಕ್ತರಿಗೆ ಸಾಹಿತ್ಯಾಸಕ್ತರಿಗೆ ಅವರ ಆಡುನುಡಿಯಲ್ಲಿ ಅಪಾರ ಭಕ್ತಿಸಾಹಿತ್ಯವನ್ನು ರಚಿಸಿಕೊಟ್ಟು, ಶಿವಶರಣರಂತೆ ಇವರೂ ಕನ್ನಡ ಭಾಷೆಯನ್ನು ಭಕ್ತಿಯ ಧರ್ಮದ ತತ್ತ್ವದ ಹಾಗೂ ಆಧ್ಯಾತ್ಮಿಕ ಭಾಷೆಯನ್ನಾಗಿ ಮಾಡಿದರು. ಮಾತ್ರವಲ್ಲ, ಮುಂದೆ ವ್ಯಾಸರಾಯರು - ವಾದಿರಾಜರಂಥ ಯತಿಗಳು ಪುರಂದರ - ಕನಕರಂಥ ಹರಿದಾಸರು ಅಪಾರಸಂಖ್ಯೆಯಲ್ಲಿ ಕೀರ್ತನಸಾಹಿತ್ಯ ರಚಿಸಲು ಸ್ಫೂರ್ತಿ, ಪ್ರೇರಣೆಗಳನ್ನಿತ್ತರು. ರಾಮಾಯಣ ಮಹಾಭಾರತ ಭಾಗವತಗಳಂತಹ ಜನಪ್ರಿಯ ಪುರಾಣಗಳನ್ನು ಅತ್ಯಂತ ಶಕ್ತಿಯುತವಾದ ಉಪದೇಶ ಮಾಧ್ಯಮಗಳಾಗಿ ಬಳಸಿಕೊಂಡರು. ರಾಮಾಯಣದ ಹನುಮಂತ,

ಮಹಾಭಾರತದ ಕೃಷ್ಣಭೀಮರು, ಭಾಗವತ ದಶಮಸ್ಕಂಧದ ಬಾಲಕೃಷ್ಣ ಶ್ರೀಪಾದರಾಜರ ಹರಿಭಕ್ತಿಯ ಅಭಿವ್ಯಕ್ತಿಗೆ ಸ್ಫೂರ್ತಿಯ ಸೆಲೆಗಳು. ಆ ಮೂಲಕ ವೈದಿಕ ಧರ್ಮ ಸಂಸ್ಕೃತಿ ಸಂಪ್ರದಾಯಗಳನ್ನು, ಪರಂಪರೆಯನ್ನು ಎತ್ತಿ ಹಿಡಿದಿರುವರು. ಹರಿದಾಸ ಸಾಹಿತ್ಯಕ್ಕೆ ಶ್ರೀಕಾರ ನುಡಿದು ಖ್ಯಾತರಾದ ಶ್ರೀಪಾದರಾಜರು ವ್ಯಾಸ-ದಾಸಕೂಟಗಳೆರಡರಲ್ಲೂ ಸಮಾನ ಗೌರವ ಪ್ರಸಿದ್ಧಿ ಹೊಂದಿರುವರು. ಸಂಸ್ಕೃತ ಕನ್ನಡಗಳೆರಡರಲ್ಲೂ ಕೃತಿ ರಚನೆ ಮಾಡಿ ದ್ವೈತ ತತ್ತ್ವಪ್ರಸಾರ ಮಾಡಿರುವ ಸವ್ಯಸಾಚಿಗಳು. ಸಂಗೀತವನ್ನು ಮೊತ್ತಮೊದಲು ವೈದಿಕತತ್ತ್ವ ಪ್ರಸಾರಕ್ಕೆ ಬಳಸಿರುವ ಹರಿದಾಸರಿವರು. ಹರಿದಾಸ ಸಾಹಿತ್ಯದ ವೈವಿಧ್ಯಗಳೂ ವೈಶಿಷ್ಟ್ಯಗಳೂ ಆಗಿರುವ ಸುಳಾದಿ ಕೀರ್ತನೆ ಉಗಾಭೋಗಗಳನ್ನು ವ್ಯಾಪಕವಾಗಿ ಬಳಸಿ ಪುರಂದರಾದಿ ಹರಿದಾಸರಿಗೆ ಭದ್ರ ಬುನಾದಿಯನ್ನು ಹಾಕಿಕೊಟ್ಟವರು. ಮಠಾಧಿಪತಿಗಳಾಗಿದ್ದು ಕೊಂಡೇ ದೇಶಭಾಷೆಯಲ್ಲಿ ಭಕ್ತಿಗೀತೆಗಳನ್ನು ರಚಿಸಿ, ಅವುಗಳಲ್ಲಿ ತತ್ತ್ವ ಸಂಗೀತ ಹರಿಭಕ್ತಿ ನೀತಿಬೋಧೆಗಳೆಲ್ಲವನ್ನೂ ಮೇಳೈಸಿ ಅವನ್ನು ತಮ್ಮ ಪೂಜಾ ಕಾಲದಲ್ಲಿ ಹಾಡಿ ಶಿಷ್ಯರಿಗೆ ಮೇಲ್ಪಂಕ್ತಿಯಾದವರು. ಆ ಮೂಲಕ ತಾವೂ ಒಳ್ಳೆಯ ಬದುಕನ್ನು ಬಾಳಿದ್ದಲ್ಲದೆ ಸಮಾಜಕ್ಕೂ ಉತ್ತಮ ಬಾಳ್ವೆಯ, ಆದರ್ಶ ಬದುಕಿನ ದಾರಿಯನ್ನು ತೋರಿಕೊಟ್ಟವರು, ಶ್ರೀಪಾದರಾಜರು.

ಮೌಲ್ಯಯುತ ಬದುಕನ್ನು ಎತ್ತಿ ಹಿಡಿಯುವ ಮೂಲಕ ನೊಂದ ಮನಸ್ಸುಗಳನ್ನು ಸಾಂತ್ವನಗೊಳಿಸಿ ಜೀವನ ಪ್ರೀತಿಯನ್ನು ಬೆಳೆಸುವಲ್ಲಿ ಶ್ರೀಪಾದರಾಜರು ಸಫಲರಾಗಿರುವರೆಂಬುದಕ್ಕೆ ಇಂದಿಗೂ ಉಳಿದುಬಂದು ಜನರ ಮನಸ್ಸನ್ನು ಸಂತಯಿಸಿ ಸಮಾಧಾನಕೊಡುತ್ತಿರುವ ಅವರ ಕೀರ್ತನೆಗಳೇ ಸಾಕ್ಷಿ. ಅಂತರಂಗದ ಶೋಧನೆಗೆ ಹೆಚ್ಚು ಒತ್ತುಕೊಟ್ಟು ತೋರಿಕೆಯ ಆಚಾರವನ್ನು, ಕಂದಾಚಾರಗಳನ್ನು ಖಂಡಿಸಿದಂಥವು ಅವರ ಆ ಕೀರ್ತನೆಗಳು. ಮನುಷ್ಯನ ದುರಾಸೆ, ಸ್ವಾರ್ಥ, ಅಹಂಕಾರಾದಿಗಳನ್ನು, ಸಣ್ಣತನಗಳನ್ನು ನರಕಾಸುರ, ಕೌರವಾದಿ ಪುರಾಣ ಪಾತ್ರಗಳ ಮೂಲಕ ಎತ್ತಿತೋರಿಸಿ, ಬದುಕಿನ ಕಟು ಸತ್ಯಗಳತ್ತ ಬೊಟ್ಟುಮಾಡಿ 'ನೂರಾರು ಸಾವಿರ ದಂಡವ ತೆತ್ತರೆ ರಂಗವಿಠಲನೆ ಸರಿಯೆಂಬೊರಯ್ಯ' - ಎನ್ನುವ ವಾಸ್ತವವನ್ನು ನಮಗೆ ಮನದಟ್ಟು ಮಾಡಿಸಿರುವರು.

ಕೃಷ್ಣ - ಗೋಪಿಯರ, ಯಶೋದೆ - ಕೃಷ್ಣರ, ಕೃಷ್ಣ - ಸುದಾಮರ ನಡುವಣ ಭಾವಸ್ಪಂದನ ಶ್ರೀಪಾದರಾಜರ ಕೀರ್ತನೆಗಳಲ್ಲಿ ಅನುರಣನಗೊಂಡಿದೆ. ಅಲ್ಲಿ ಅವರು ಕೃಷ್ಣನ ಮುರಳೀಗಾನಕ್ಕೆ ಮನಸೋತ ಗೋಪಿಯಾಗಿ, ಕೃಷ್ಣ ಮಥುರೆಗೆ ಹೋಗುವ ಸುದ್ದಿಯರಿತ ವಿರಹಿಣಿಯಾಗಿ, ಅವನ ಗುಣ - ರೂಪುಗಳಿಗೆ ಮಾರುಹೋದ ಮುಗುದೆಯಾಗಿ ಪ್ರಣಯಿನಿಯಗಿ ಮೈಮರೆತಿದ್ದಾರೆ. ಮಗು ಕೃಷ್ಣನ ಹಣೆಯ ಕಿರು ಬೆವರನ್ನು ವಾತ್ಸಲ್ಯದಿಂದ ತಮ್ಮ ಸೆರಗಿನಲ್ಲೊರೆಸುವ ತಾಯಿಯಾಗಿ ನಲಿದಿದ್ದಾರೆ. ಮಗು ಕೃಷ್ಣನಿಗೆ ದೃಷ್ಟಿ ತಾಕೀತೆಂದು ಕಳವಳ ಪಟ್ಟಿದ್ದಾರೆ. ಅಂದರೆ, ಜನಸಾಮಾನ್ಯರ ದೈನಂದಿನ ಜೀವನದ ದರ್ಶನವೇ ನಮಗಿಲ್ಲಿ ಆಗಿದೆ.

ಹರಿದಾಸ ಸಾಹಿತ್ಯದ ಎಲ್ಲ ವೈಶಿಷ್ಟ್ಯಗಳಿಗೂ ಮೊದಲಿಗರಾದ, ತಮ್ಮ ದಂಡಕ ಹಾಗೂ ಗೋಪೀ ಗೀತೆಗಳಿಂದ ವಿಶಿಷ್ಟರಾದ ಶ್ರೀಪಾದರಾಜರಿಂದ ಪ್ರಾರಂಭವಾದ ಹರಿದಾಸ ಸಾಹಿತ್ಯ ವಾಹಿನಿ ಇಂದಿಗೂ ಮೈದುಂಬಿ ಹರಿಯುತ್ತಿದೆ. ವ್ಯಾಸರಾಯರು ವಾದಿರಾಜರು ಪುರಂದರ - ಕನಕದಾಸರಾದಿಯಾಗಿ ನೂರಾರು ಹರಿದಾಸರುಗಳ ಸಾವಿರಾರು ಕೀರ್ತನೆಗಳಿಂದ ಆಳ, ಅಗಲ, ವಿಸ್ತಾರಗಳನ್ನು ಪಡೆದಿದೆ.

# ಶ್ರೀಪಾದರಾಜರ ಹತ್ತು ಕೀರ್ತನೆಗಳು

**ರಾಗ:ಕಾಂಬೋಧಿ        ತಾಳ:ಝುಂಪೆ**

ಉತ್ತಮರ ಸಂಗಯೆನಗಿತ್ತು ಸಲಹೊ ||ಪ||

ಚಿತ್ತಜಜನಕ ಸರ್ವೋತ್ತಮ ಮುಕುಂದ ||ಅ.ಪ||

ತಿರುತಿರುಗಿ ಪಾಪಗಳ ಮಾಡಲಾರೆ
ಮರಣ ಜನನಗಳೆರಡು ಪರಿಹರವ ಮಾಡಯ್ಯ
ಕರುಣಾಸಮುದ್ರ ಮುರವೈರಿ ಶ್ರೀಕೃಷ್ಣ ||೧||

ಏನ ಪೇಳಲಿ ದೇವ ನಾಮಾಡಿದ ಕರ್ಮ
ನಾನಾ ವಿಚಿತ್ರವೈ ಶ್ರೀನಿವಾಸ
ಹೀನ ಜನರೊಳಗಾಟ ಶ್ವಾನಾದಿಗಳ ಕೂಟ
ಜ್ಞಾನವಂತನ ಮಾಡೊ ಜಾನಕೀ ರಮಣ ||೨||

ನಿನ್ನ ನಂಬಿದ ಮ್ಯಾಲೆ ಇನ್ನು ಭಯವ್ಯಾತಕ್ಕೆ
ಪನ್ನಗಾಧಿಪಶಯನ ಮನ್ನಿಸಯ್ಯ
ಮುನ್ನ ಭಕುತರನೆಲ್ಲ ಚೆನ್ನಾಗಿ ಪಾಲಿಸಿದ
ಎನ್ನೊಡೆಯ ರಂಗವಿಠಲ ಎನ್ನ ದೊರೆಯೆ ||೩||

**ರಾಗ: ತೋಡಿ   ತಾಳ: ರೂಪಕ**

ಕಂಗಳಿದ್ಯಾತಕೊ ಕಾವೇರಿ ರಂಗನ ನೋಡದ ||ಪ||
ಜಗಂಗಳೊಳಗೆ ಮಂಗಳ ಮೂರುತಿ
ರಂಗನ ಶ್ರೀಪಾದಂಗಳ ನೋಡದ ||ಅ.ಪ||

ಎಂದಿಗಾದರೊಮ್ಮೆ ಜನರು
ಬಂದು ಭೂಮಿಯಲ್ಲಿ ನಿಂದು
ಚಂದ್ರ ಪುಷ್ಕರಿಣಿ ಸ್ನಾನವ ಮಾಡಿ ಆ
ನಂದದಿಂದಲಿ ರಂಗನ ನೋಡದ ||೧||

ಹರಿಪದೋದಕ ಸಮ ಕಾವೇರಿ
ವಿರಜಾ ನದಿಲಿ ಸ್ನಾನವ ಮಾಡಿ
ಪರಮ ವೈಕುಂಠ ರಂಗಮಂದಿರ
ಪರವಾಸುದೇವನ ನೋಡದ ||೨||

ಹಾರ ಹೀರ ವೈಜಯಂತಿ
ತೋರ ಮುತ್ತಿನ ಹಾರವ ಧರಿಸಿ

ತೇರನೇರಿ ಬೀದಿಲಿ
ಮೆರೆವ ರಂಗವಿಠಲನ ನೋಡದ ॥೩॥

**ರಾಗ : ವಸಂತ ತಾಳ: ತ್ರಿಪುಟರ**

ನಾ ನಿನಗೇನು ಬೇಡುವುದಿಲ್ಲ ಎನ್ನ ॥ಪ॥
ಹೃದಯ ಮಂಟಪದೊಳು ನಿಂದಿರೊ ಕೃಷ್ಣ ॥ಅ.ಪ॥

ಶಿರ ನಿನ್ನ ಚರಣದಲ್ಲೆರಗಲಿ ಎನ್ನ
ಚಕ್ಷುಗಳು ನಿನ್ನ ನೋಡಲಿ
ಕರ್ಣಗೀತಂಗಳ ಕೇಳಲಿ ಎನ್ನ
ನಾಸಿಕ ನಿರ್ಮಾಲ್ಯಾಘ್ರಾಣಿಸಲಿ ಕೃಷ್ಣ ॥೧॥

ನಾಲಿಗೆ ನಿನ್ನ ಕೊಂಡಾಡಲಿ ಎನ್ನ
ಕರಗಳೆರಡು ನಿನಗೆ ಮುಗಿಯಲಿ
ಪಾದ ತೀರ್ಥಯಾತ್ರೆ ಮಾಡಲಿ ನಿನ್ನ
ಧ್ಯಾನವೊಂದು ಎನಗೆ ಕೊಡುಕಂಡ್ಯ ಹರಿಯೆ ॥೨॥

ಬುದ್ಧಿ ನಿನ್ನೊಳು ಕುಣಿದಾಡಲಿ ಎನ್ನ
ಚಿತ್ತ ನಿನ್ನೊಳು ನಲಿದಾಡಲಿ
ಭಕ್ತಜನರ ಸಂಗ ದೊರಕಲಿ ರಂಗ
ವಿಠಲ ನಿನ್ನ ದಯವಾಗಲಿ ಹರಿಯೆ ॥೩॥

**ರಾಗ: ಧನ್ಯಾಸಿ ತಾಳ: ಆದಿತಾಳ**

ಪೋಪು ಹೋಗೋಣ ಬಾರೊ ರಂಗ
ಪೋಪು ಹೋಗೋಣ ಬಾರೋ ॥ಪ॥

ಜಾಹ್ನವಿಯ ತೀರವಂತೆ ಜನಕರಾಯನ ಕುವರಿಯಂತೆ
ಜಾನಕೀವಿವಾಹವಂತೆ ಜಾಣ ನೀನು ಬರಬೇಕಂತೆ ॥೧॥

ಕುಂಡನೀಯ ನಗರವಂತೆ ಭೀಷ್ಮಕನ ಕುವರಿಯಂತೆ
ಶಿಶುಪಾಲನ ಒಲ್ಲಳಂತೆ ನಿನಗೆ ವಾಲೆ ಬರೆದಳಂತೆ ॥೨॥

ಪಾಂಡವರು ಕೌರವರಿಗೆ ಲೆತ್ತವಾಡಿ ಸೋತರಂತೆ
ರಾಜ್ಯವನ್ನು ಬಿಡಬೇಕಂತೆ ರಂಗವಿಠಲ ಬರಬೇಕಂತೆ ॥೩॥

**ರಾಗ: ಶಂಕರಾಭರಣ ತಾಳ: ಆದಿತಾಳ**

ಭಕ್ತಿಬೇಕು ವಿರಕ್ತಿಬೇಕು ಸರ್ವ
ಶಕ್ತಿಬೇಕು ಮುಂದೆ ಮುಕ್ತಿಯ ಬಯಸುವಗೆ ॥ಪ॥

ಸತಿ ಅನುಕೂಲಬೇಕು ಸುತನಲ್ಲಿ ಗುಣಬೇಕು
ಮತಿವಂತನಾಗಬೇಕು ಮತ ಒಂದಾಗಿರಬೇಕು ||೧||

ಜಪದ ಜಾಣುವೆ ಬೇಕು ತಪದ ನೇಮವೆ ಬೇಕು
ಉಪವಾಸವ್ರತ ಬೇಕು ಉಪಶಾಂತವಿರಬೇಕು ||೨||

ಸುಸಂಗ ಹಿಡಿಯಲಿ ಬೇಕು ದುಸ್ಸಂಗ ಬಿಡಲಿಬೇಕು
ರಂಗವಿಠಲನ್ನ ಬಿಡದೆ ನೆರೆನಂಬಿರಬೇಕು ||೩||

**ರಾಗ: ಸಾರಂಗ ತಾಳ: ಝಂಪೆ**

ಭೂಷಣಕೆ ಭೂಷಣ ಇದು ಭೂಷಣ
ಶೇಷಗಿರಿವಾಸ ಶ್ರೀವರ ವೆಂಕಟೇಶ ||ಪ||

ನಾಲಿಗ್ಗೆ ಭೂಷಣ ನಾರಾಯಣ ನಾಮ
ಕಾಲಿಗ್ಗೆ ಭೂಷಣ ಹರಿಯಾತ್ರೆಯು
ಆಲಯಕೆ ಭೂಷಣ ತುಲಸಿ ವೃಂದಾವನ ವಿ-
ಶಾಲಕರ್ಣಕೆ ಭೂಷಣ ವಿಷ್ಣು ಕಥೆಯು ||೧||

ದಾನವೆ ಭೂಷಣ ಇರುವ ಹಸ್ತಂಗಳಿಗೆ
ಮಾನವೇ ಭೂಷಣ ಮಾನವರಿಗೆ
ಜ್ಞಾನವೇ ಭೂಷಣ ಮುನಿಯೋಗಿವರರಿಗೆ
ಮಾನಿನಿಗೆ ಭೂಷಣ ಪತಿಭಕ್ತಿಯು ||೨||

ರಂಗನನು ನೋಡುವುದೇ ಕಂಗಳಿಗೆ ಭೂಷಣ
ಮಂಗಳಾಂಗಗೆ ಮಣಿವ ಶಿರಭೂಷಣ
ಶೃಂಗಾರ ತುಲಸಿಮಣಿ ಕೊರಳಿಗೆ ಭೂಷಣ
ರಂಗವಿಠಲ ನಿಮ್ಮ ನಾಮ ಅತಿಭೂಷಣ ||೩||

**ಉಗಾಭೋಗ**

ಮನೆಯಿಂದ ಸಂತೋಷ ಕೆಲವರಿಗೆ ಲೋಕದಲ್ಲಿ
ಧನದಿಂದ ಸಂತೋಷ ಕೆಲವರಿಗೆ ಲೋಕದಲ್ಲಿ
ವನಿತೆಯಿಂ ಸಂತೋಷ ಕೆಲವರಿಗೆ ಲೋಕದಲ್ಲಿ
ತನಯರಿಂ ಸಂತೋಷ ಕೆಲವರಿಗೆ ಲೋಕದಲ್ಲಿ
ಇನಿತು ಸಂತೋಷ ಅವರವರಿಗಾಗಲಿ ನಿನ್ನ
ನೆನೆವೋ ಸಂತೋಷ ಎನಗಾಗಲಿ ನಮ್ಮ ರಂಗವಿಠಲ

**ರಾಗ: ಕಾಂಬೋಧಿ ತಾಳ: ಝಂಪೆ ತಾಳ**

ಮರೆತೆಯೇನೋ ರಂಗ ಮಂಗಳಾಂಗ
ತುರುಕರು ಕಾಯ್ವಲ್ಲಿ ತೊಂಡನಾಗಿದ್ದೆನ್ನ ||ಪ||

ಕೋಲು ಕೈಯಲಿ ಕೊಳಲು ಜೋಲುಗಂಬಳಿ ಹೆಗಲ
ಮ್ಯಾಲೆ ಕಲ್ಲಿಚೀಲ ಕೊಂಕಳಲ್ಲಿ
ಕಾಲಗಡಗವನಿಟ್ಟು ಕಾಡೊಳಿಹ ಪಶುಹಿಂಡ
ಲಾಲಿಸುವ ಬಾಲಕರ ಮ್ಯಾಳದೊಳಗಿದ್ದೆನ್ನ ||೧||

ಕಲ್ಲುಮಣಿ ಕವಡೆಯನು ಕಾಡೊಳಿಹ ಗುಲಗಂಜಿ
ಸಲ್ಲದೊಡವೆಯ ನೀನು ಸರ್ವಾಂಗಕೆ
ಅಲ್ಲಲ್ಲೆಸೆಯೆ ಧರಿಸಿ ನವಿಲುಗರಿಗಳ ಗೊಂಡೆ
ಅಲ್ಲಿ ಗೊಲ್ಲರ ಕೂಡ ಚೆಲ್ಲಾಟ ಮಾಡುತಲಿ ||೨||

ಸಿರಿದೇವಿ ಬಂದು ಸೇರಿದ ಬಳಿಕ ಲೋಕದಲಿ
ಸಿರಿ ಅರಸನೆಂದು ಸೇವಕರರಿವರೋ
ಶರಣಾಗತರ ಪೊರೆವ ಶ್ರೀರಂಗವಿಠಲಯ್ಯ
ನರಸಿಂಗ ನೀನಿರುವ ಪರಿಯು ಮುಂದಿನ ಸಿರಿಯು ||೩||

**ರಾಗ: ನಾಟಿ ತಾಳ: ಖಂಡಛಾಪು**

ಶ್ರೀರಂಗವಿಠಲನ ಶ್ರೀಮಕುಟಕೆ ಶರಣು ||ಪ||

ಶಿರದಲ್ಲೊಪ್ಪುವ ನೀಲಕುಂತಳಕೆ ಶರಣು
ಸಿರಿ ಸಹೋದರನರ್ಧದವಳಿಗೆ ಶರಣು ||ಅ.ಪ||

ಸೊಂಪು ನೋಟದ ಚೆಲುವ ಸೋಗೆಗಣ್ಣಿಗೆ ಶರಣು
ಸಂಪಿಗೆಯ ಕುಸುಮಸಮ ನಾಸಿಕಕೆ ಶರಣು
ಗುಂಪು ರತ್ನದ ಕರ್ಣಕುಂಡಲಗಳಿಗೆ ಶರಣು
ಇಂಪು ದರ್ಪಣನಿಭ ಕಪೋಲಗಳಿಗೆ ಶರಣು ||೧||

ಕುಂದಕುಟ್ಮಲ ಪೋಲ್ವ ದಂತಪಂಕ್ತಿಗೆ ಶರಣು
ಅಂದವಾಗಿರುವ ಬಿಂಬೋಷ್ಠಕೆ ಶರಣು
ಚಂದ್ರಿಕಾನಿಭ ಮುದ್ದು ಮಂದಹಾಸಕೆ ಶರಣು
ನಂದಗೋಪನ ಮುದ್ದು ಕಂದನಿಗೆ ಶರಣು ||೨||

ಅಬ್ಜನಾಭನ ದಿವ್ಯ ಕಂಬುಕಂಠಕೆ ಶರಣು
ಅಬ್ಜಮುಖಿಯಿರುವ ವಕ್ಷಸ್ಥಳಕೆ ಶರಣು
ಕುಬ್ಜೆಯಾ ಡೊಂಕತಿದ್ದಿದ ಭುಜಗಳಿಗೆ ಶರಣು
ಅಬ್ಜಜಾಸನನ ಪೆತ್ತ ನಾಭಿಗೆ ಶರಣು ||೩||

ರನ್ನಗಂಟೆಗಳಿರುವ ನಿನ್ನ ಕಟಿಗೆ ಶರಣು
ಪೊನ್ನ ಕದಳೀಪೋಲ್ವ ತೊಡೆಗಳಿಗೆ ಶರಣು
ಪುನ್ನಾಗ ಕರಗೆತತ ದ್ವಯನಿತಂಬಕೆ ಶರಣು
ಚೆನ್ನಾಗಿ ಕುಣಿವ ಸಮಜಾನುವಿಗೆ ಶರಣು ||೪||

ಮಂಗಳ ವೈಭೋಗಂಗಳ ಅಂಘ್ರಿದ್ವಯಕೆ ಶರಣು
ತುಂಗಕುಚಗಳ ಪಿಡಿದ ಕರಗಳಿಗೆ ಶರಣು
ಪೊಂಗೊಳಲನೂದುವ ಅಂಗುಲಿಗಳಿಗೆ ಶರಣು
ರಂಗವಿಠಲನ ಸರ್ವಾಂಗಕೆ ಶರಣು ||೫||

**ಸುಳಾದಿ**
**ರಾಗ: ಭೈರವಿ ತಾಳ: ಧ್ರುವತಾಳ**

ಈ ವನದೆಡೆಗಳು ಈ ಲತೆವನಗಳು
ಈ ನದಿಪುಳಿನಗಳೀ ಶಶಿ ಶಿಲೆಗಳು
ಈ ಸುರತರುನೆಳಲು ಈ ಶುಕಪಿಕರವ
ಯಾಕೆ ಮಾಧವನ ಮರೆಯಲೀಯದಿವೆ ಕೆಳದಿ
ಆ ಮುಗುಳು ನಗೆಯ ಆ ಸೊಬಗ
ಈ ಸುರತರು ನೆಳಲೀ ರತಿಯ
ಈ ಸುರತವನರಿದ ಬಾಲೆಯರೆಂತೊ
ಈ ಸುಗುಣಮಯ ರಂಗವಿಠಲನೆ ಕೆಳದಿ ||೧||

**ಮಠ್ಯತಾಳ**

ಇನ್ನು ರಂಗನಂಗಸಂಗವು ಎತ್ತಣದು ಗೋಪಿಯರಿಗೆ
ಮಧುರೆಯ ಮಾನಿನಿಯರ ಬಲೆಯಲ್ಲಿ ಸಿಲುಕಿದನ
ಮಧುರೆಯ ಮಾನಿನಿಯರು ರತಿವಿದಗ್ಧರಾ
ವಧುಗಳು ರಸಿಕ ನಮ್ಮ ರಂಗವಿಠಲ ||೨||

**ತ್ರಿಪುಟತಾಳ**
ಇನ್ಯಾತಕೆ ರಂಗನಿಲ್ಲಿಗೆ ಬಾಹಾ
ಮಧುರಾಪುರಿಯರಸನಾದ
ಮಲ್ಲರ ಕೊಂದು ಮಾವನ್ನ ಮಡುಹಿದ
ಮಧುರಾಪುರಿಯರಸನಾದ
ಅವನ ನೆನಹೆ ಸಾಕು ರಂಗವಿಠಲನಾ ||೩||

**ರೂಪಕತಾಳ**
ಬಿಡುವರು ಅಧನರ ಗಣಿಕೆಯರು ನೆರೆ
ಬಿಡುವವು ವಿಫಲ ತರುವ ದ್ವಿಜಗಣ

ಬಿಡುವವು ಮೃಗ ದಳ್ಳುರಿಗೊಂಡಡವಿಯ
ಬಿಡುವನು ಜಾರ ಪರವಧುವನು ನೆರೆದಿನ್ನು
ಇವು ದಿಟವಾಯಿತು ನಮ್ಮ ವಲ್ಲಭನೊಳು
ಅಕಟಕಟಾ ರಂಗವಿಠಲನು ಕರುಣಿಯೆ ‖೪‖

**ಅಟ್ಟತಾಳ**

ಕುಂದ ಕುಸುಮ ಶಶಾಂಕರಂಜಿತ
ವೃಂದಾವನದಲ್ಲಿ ಮಂದಮಾರುತ ಬರಲು ನಲಿದನು ಅರ
ವಿಂದ ನಯನನು ಹಾಹಾ
ಕಂದಿದೆವು ಕುಂದಿದೆವು ನಾವು
ಕಂದರ್ಪನ ಶರದಟ್ಟುಳಿಗೆ ಹಾ
ಇಂದುಮುಖಿಯರ ವೃಂದದೊಳಗೆ ಕೃಷ್ಣಾ
ಅಂದು ನಮ್ಮೊಡನಾಡಿದ ಪರಿಯನು ತಾನು
ಇಂದೊಮ್ಮೆಯಾದರು ನೆನವನೆ ಹಾಹಾ
ಎಂದಿಗಾದರು ರಂಗವಿಠಲನಿಲ್ಲಿಗೆ ಬಹನೆ ‖೫‖

**ಝಂಪೆತಾಳ**

ಪೊಂದೇರದೆಲ್ಲಿಯದವ್ವಾ ಬಂದಿದೆ ವ್ರಜದೊಳಗೆ
ಅಂದಿನಕ್ರೂರನೆಂಬ ಕ್ರೂರನು ಮರಳಿಬಂದನೊ
ನಮ್ಮ ಕರೆದೊಯ್ಯಲಿ ಬೇಕೆಂದು
ಅಂದೆಮ್ಮ ಕೊಂದ ಇಂದ್ಯಾರ ಕೊಲ್ಲಲಿ ಬಂದ
ಕೊಂದುಕೊಳ್ಳಲಿ ತಮ್ಮ ಹಿರಿಯರನು ಹರಲಿಗ
ಅಂದೆಮ್ಮನಗಲಿಸಿದ ರಂಗವಿಠಲನಾ ‖೬‖

**ಏಕತಾಳ**

ಹೆತ್ತತಾಯಿ ತಂದೆಯರ ನೋಡಲೆಂದು
ಇತ್ತಲಟ್ಟಿದನೆ ಉದ್ಧವ ನಿನ್ನ ಗೋವಳಾ
ಮತ್ತ್ಯಾರುಂಟು ವ್ರಜದಲ್ಲಿ ನೆನೆವರು
ಹತ್ತಿರಕೆ ತನ್ನವರಲ್ಲಿ ತಾ ಬಿಡುವನೆ
ಅರ್ಥಕೃತ ಸ್ನೇಹ ನಮ್ಮೊಡನೆ ಮಾಡಿದ ಕೃಷ್ಣ
ಮತ್ತಳಿಗೆ ಕುಸುಮದ ನೇಹದಂತೆ
ರಕ್ತಿ ಎಮ್ಮೊಳುಂಟು ರಂಗವಿಠಲಗೆ ‖೭‖

**ಝುಂಪೆತಾಳ**

ಪರಮಸುಖದಾಸೆ ಈತನ ಸೇವೆ ಅಲ್ಲವೆ
ಒರೆದಳೆ ಪಿಂಗಳೆ ಜನರಿಗೆ ಹಿತವನು

ಅರಿದರಿದು ಬಿಡುವ ನಾವು ನರಪಶುಗಳಲ್ಲವೆ
ಸಿರಿರಮಣಿ ಬಿಡಳು ನಮ್ಮ ರಂಗವಿಠಲನ್ನ ||೮||

**ಏಕತಾಳ**

ಎಮ್ಮ ತನುಮನ ತನ್ನಧೀನವಲ್ಲೆ
ಅನ್ಯವರಿಯೆವು ತನ್ನರಿದಂತೆ ಮಾಡಲಿ
ಎಮ್ಮಸುವು ತನ್ನಧೀನವಲ್ಲೆ
ಅನ್ಯವರಿಯೆವು ತನ್ನರಿದಂತೆ ಮಾಡಲಿ
ನಮ್ಮ ರಂಗವಿಠಲರೇಯ
ಇನ್ನು ಸಲೆ ಮಾರುಹೋದೆ ಗೆಳತಿ ||೯||

**ಜತೆ**

ಅವನ ಹಂಬಲವೆಮಗೆ ಜೀವನವವ್ವಾ
ಭುವನ ಮೋಹನ ರಂಗವಿಠಲನು ಕರುಣಿಯೆ

## ಸಹಾಯಕ ಸಾಹಿತ್ಯ


೧. ಆನಂದತೀರ್ಥರು: ಶ್ರೀ ಅಗ್ರಹಾರ ನಾರಾಯಣ ತಂತ್ರಿ, ೧೯೩೯.
೨. ಋಗ್ವೇದ: ಮೈಸೂರು ಪ್ಯಾಲೆಸ್ ಪಬ್ಲಿಕೇಷನ್ಸ್.
೩. ಎಪಿಗ್ರಾಫಿಯಾ ಕರ್ನಾಟಿಕಾ: Vol.VIII, ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಣೆ.
೪. ಕನ್ನಡ ಕೈಪಿಡಿ: ಮೈಸೂರು ವಿಶ್ವವಿದ್ಯಾಲಯ ಪ್ರಕಟಣೆ.
೫. ಕರ್ಣಾಟಕ ಭಕ್ತ ವಿಜಯ: ಶ್ರೀ. ಬೇಲೂರು ಕೇಶವದಾಸರು, ೧೯೬೩.
೬. ಕರ್ನಾಟಕ ಸಂಗೀತವೂ ದಾಸಕೂಟವೂ : ಶ್ರೀ. ಹುಲಗೂರು ಕೃಷ್ಣಾಚಾರ್ಯ, ೧೯೫೧.
೭. ಕರ್ನಾಟಕ ಹರಿದಾಸರ ಉಗಮ ಮತ್ತು ಶ್ರೀ ಪುರಂದರದಾಸರ ಸುಳಾದಿಗಳು: ಶ್ರೀ ಗೋರಾಬಾಳ ಹನುಮಂತರಾಯರು; ೧೯೫೮.
೮. ಪುರಂದರ ಸಾಹಿತ್ಯದರ್ಶನ (ಸಂ.೪); ಸಂ. ಪ್ರೊ.ಎಸ್.ಕೆ. ರಾಮಚಂದ್ರರಾವ್.
೯. ಶಿವದಾಸ ಗೀತಾಂಜಲಿ: ಡಾ.ಎಲ್. ಬಸವರಾಜು, ೧೯೬೩.
೧೦. ಶ್ರೀ ಜಗನ್ನಾಥದಾಸರು ತತ್‌ಶಿಷ್ಯ ಪ್ರಶಿಷ್ಯರ ಸುಳಾದಿಗಳು, ಉಗಾಭೋಗಗಳು.
೧೧. ಶ್ರೀಪಾದರಾಜರ ಕೃತಿಗಳು, ಸಂ. ಡಾ.ಜಿ.ವರದರಾಜರಾವ್, ೧೯೭೩.
೧೨. ಶ್ರೀಮದ್ಭಾಗವತವು : ಅಳಸಿಂಗಾಚಾರ್ಯ.
೧೩. ಸಂಶೋಧನ ತರಂಗ: ಡಾ.ಎಂ. ಚಿದಾನಂದ ಮೂರ್ತಿ, ೧೯೬೬.
೧೪. ಹರಿದಾಸ ಪರಂಪರೆ (ಲೇಖನ): ಶ್ರೀ ಕಪಟರಾಳು ಕೃಷ್ಣರಾಯರು, ಕರ್ನಾಟಕ ಸಂಸ್ಕೃತಿ ಸಂಶೋಧನೆ, ೧೯೭೦.
೧೫. ಹರಿದಾಸರ ಭಕ್ತಿಸ್ವರೂಪ: ಡಾ.ಟಿ.ಎನ್. ನಾಗರತ್ನ, ೧೯೮೭.
೧೬. ಹರಿದಾಸ ಸಾಹಿತ್ಯ : ಶ್ರೀ. ಆರ್ .ಎಸ್. ಪಂಚಮುಖಿ, ೧೯೫೦.
೧೭. ಹರಿದಾಸ ಸಾಹಿತ್ಯ : ಶ್ರೀ ಬೇಲೂರು ಕೇಶವದಾಸರು, ೧೯೪೪.
೧೮. ಹರಿದಾಸ ಸಾಹಿತ್ಯ ಸಾರ: ಡಾ.ಜಿ. ವರದರಾಜರಾವ್, ೧೯೮೭.